Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ


JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–43 | ಅಕ್ಟೋಬರ್ 21–27, 2024 | ಪುಟ 16 | ರೂ.10/–
Volume-18 | Issue-43 | October 21-27, 2024 | Pages:16 | Price: 10/-

ಒಂದು ರಾಷ್ಟ್ರ ಒಂದು ಚುನಾವಣೆ: ಸಂವಿಧಾನ ಹಾಳು ಮಾಡುವ ವಿಧಾನ



ಜಗತ್ತಿನ ಇತಿಹಾಸದಲ್ಲಿ ಹೊಸ ಅಧ್ಯಾಯ: ಮಹಾನ್ ಅಕ್ಟೋಬರ್ ಕ್ರಾಂತಿ



ICDS: ಪೌಷ್ಟಿಕತೆ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಹಕ್ಕು ಪ್ರತಿಪಾದನೆ

ಕಸ್ತೂರಿ ರಂಗನ್ ಶಿಫಾರಸುಗಳ ಅನುಷ್ಠಾನ: ಕರ್ನಾಟಕದ ಗೊಂದಲ ನಿಲುವು



ಪ್ರೊ. ಜಿ.ಎನ್.ಸಾಯಿಬಾಬಾ ಸಾವು: ಪ್ರಜಾಪ್ರಭುತ್ವದ ಮೇಲೊಂದು ಕಪ್ಪು ಚುಕ್ಕೆ

ಪ್ರಿಯ ಓದುಗರೇ, ಟಾಟಾ ಬಂಡವಾಳ ಉದ್ಭವವಾದ ಹಾಗೂ ಬೆಳೆದ ಬಗೆಯ ಹಿನ್ನೆಲೆಗಳನ್ನು ಪ್ರಸ್ತಾಪಿಸಿದ ಬರಹ ಹಿಂದಿನ ವಾರ ಓದಿದ್ದೀರಿ. ಭಾರತದಲ್ಲೇ ಬಹುದೊಡ್ಡ ಬಂಡವಾಳ, ಕೈಗಾರಿಕೋದ್ಯಮವನ್ನು ಹೊಂದಿರುವ ಟಾಟಾ ಸಮೂಹದ ಬಂಡವಾಳ ಹೇಗೆ, ಎಲ್ಲಿಂದ ಬಂತು ಎಂಬ ಬಗ್ಗೆ ಮಹತ್ವದ ಆಸಕ್ತಿದಾಯಕ ವಿವರಗಳು, ವಿಶ್ಲೇಷಣೆ – ಈ ಲೇಖನದಲ್ಲಿ. ಓದಿ.

ಟಾಟಾ ಸಾಮ್ರಾಜ್ಯದ ಬಂಡವಾಳ ಎಲ್ಲಿಂದ ಬಂತು?

ಜಿ.ಎನ್. ನಾಗರಾಜ್

ಭಾಗ – 2

ಟಾಟಾ ಸಾಮ್ರಾಜ್ಯದ ಬಂಡವಾಳ ಉದ್ಭವವಾದ ಬಗೆಯನ್ನು ಬಗೆಯುತ್ತಾ ಹೋದಾಗ, ಅತ್ಯಂತ ನೀಚ ಅಫೀಮು ವ್ಯಾಪಾರದ ಜೊತೆಗೆ ಅಂತಹುದೇ ಪಾತಕವಾದ ಮಿಲಿಟರಿ ಸಪ್ಲೈ ಕಂಟ್ರಾಕ್ಟರ್ ಆಗಿ ಕ್ರೂರ, ಆಕ್ರಮಣಕಾರ ಬ್ರಿಟಿಷ್ ಸೈನ್ಯಕ್ಕೆ ಸೇವೆ ಸಲ್ಲಿಸಿದ್ದರಿಂದ ಸಂಪಾದಿಸಿದ ಸಂಪತ್ತು ಸೇರಿಕೊಳ್ಳುತ್ತದೆ.

ಬ್ರಿಟಿಷ್ ಮಿಲಿಟರಿ ಎಂದರೇ ಆಕ್ರಮಣ, ನರಹತ್ಯೆ. ಭಾರತದಲ್ಲಿ ಬಂಗಾಲ, ವಾರಣಾಸಿ, ಮೈಸೂರು ಸಂಸ್ಥಾನ, ಕಿತ್ತೂರು, ನರಗುಂದ, ಸುರಪುರ ಕೊಡಗು, ಸುಳ್ಯ ಮೊದಲಾದ ಕರ್ನಾಟಕದ ಪ್ರದೇಶಗಳನ್ನು ಆಕ್ರಮಿಸಲು ಮಾಡಿದ ಆಕ್ರಮಣಕಾರಿ ಯುದ್ಧಗಳು, ನಡೆಸಿದ ಕುತಂತ್ರಗಳು, ಹತ್ತಾರು ಸಾವಿರ ಜನರ ಸಾವು ನೋವು, ದಾರಿಯಲ್ಲಿನ ಹಳ್ಳಿಗಳ ಲೂಟಿ, ಮಹಿಳೆಯರ ಮೇಲಿನ ಅತ್ಯಾಚಾರ ಇತ್ಯಾದಿ ಥಟ್ಟನೆ ನೆನಪಿಗೆ ಬರುತ್ತವೆ.

ಇಂತಹ ಬ್ರಿಟಿಷ್ ಸೈನ್ಯದಲ್ಲಿ ಲೆಫ್ಟಿನೆಂಟ್ ಜನರಲ್ ನೇಪಿಯರ್ ಎಂಬೊಬ್ಬ ಸೇನಾಧಿಕಾರಿ, ವೈಸ್‌ರಾಯ್‌ರವರ ಮಂಡಳಿಯಲ್ಲಿ ಮಿಲಿಟರಿ ಸದಸ್ಯನೂ (ಇಂದಿನ ರಕ್ಷಣಾ ಮಂತ್ರಿ, ಜೊತೆಗೆ ಮಿಲಿಟರಿಯ ಮುಖ್ಯ ಕಮ್ಯಾಂಡರನ ಹುದ್ದೆ ಎಂದೆನ್ನಬಹುದು) ಆಗಿದ್ದವನು. ಅವನು ಎರಡು ಸಿಖ್ ರಾಜ್ಯದ ಆಕ್ರಮಣ ಯುದ್ಧಗಳಲ್ಲಿ ಭಾಗವಹಿಸಿದ್ದವನು, ಸಿಪಾಯಿ ದಂಗೆ ಎಂದು ಪ್ರಸಿದ್ಧವಾದ, ಬ್ರಿಟಿಷರನ್ನು ಉತ್ತರ ಪ್ರದೇಶ, ದೆಹಲಿ ಮೊದಲಾದ ಪ್ರದೇಶಗಳಿಂದ ಓಡಿಸಿ, ಭಾರತವನ್ನೇ ಬಿಟ್ಟು ಓಡಿ ಹೋಗಬೇಕಾದ ಪರಿಸ್ಥಿತಿ ತಂದೊಡ್ಡಿದ 1857ರ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮವನ್ನು ಕ್ರೂರವಾಗಿ ಹತ್ತಿಕ್ಕುವುದರಲ್ಲಿ ಭಾಗವಹಿಸಿದ್ದವನು. ಹಿಂದಿನ ಸಂಚಿಕೆಯಲ್ಲಿ ವಿವರಿಸಲಾದ ಓಪಿಯಮ್ ವಾರ್‌ನಲ್ಲಿ ಚೀನಾದ ರಾಜಧಾನಿ ಪ್ರಸಿದ್ಧ ಪೀಕಿಂಗ್ (ಇಂದು ಬೀಜಿಂಗ್) ಅನ್ನು ಬ್ರಿಟಿಷರು ವಶಪಡಿಸಿಕೊಳ್ಳುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದವನು.

ಹತ್ತು ಪಟ್ಟು ಹೆಚ್ಚು ಲಾಭ ತಂದುಕೊಡುತ್ತಿದ್ದ ಅಕ್ರಮ ಅಫೀಮು ವ್ಯಾಪಾರದಲ್ಲಿ ಟಾಟಾಗಳು ಬ್ರಿಟಿಷರಿಗೂ ಚಳ್ಳೆ ಹಣ್ಣು ತಿನ್ನಿಸಿ ಅಪಾರ ಲಾಭ ಮಾಡಿಕೊಳ್ಳುತ್ತಿದ್ದುದನ್ನು ಹಿಂದೆ ವಿವರಿಸಲಾಗಿದೆ. ಓಪಿಯಮ್ ವಾರ್ ಈ ಅಫೀಮು ವ್ಯಾಪಾರ ಮತ್ತೆ ಎರಡು ಎರಡೂವರೆ ದಶಕಗಳ ಕಾಲ ಮುಂದುವರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಈ ಯುದ್ಧ ಬ್ರಿಟಿಷರು ಮತ್ತು ಟಾಟಾಗಳಂತಹ ಭಾರತೀಯ ಅಫೀಮು ವ್ಯಾಪಾರಿಗಳಿಬ್ಬರಿಗೂ ಬಹಳ ತುರ್ತಾಗಿತ್ತು. ಇಂತಹ ಅನೈತಿಕ, ಅಮಾನವೀಯ ಯುದ್ಧದಲ್ಲಿ ಟಾಟಾ ಮತ್ತು ನೇಪಿಯರ್‌ನ ಸಂಬಂಧ ಏರ್ಪಟ್ಟಿತು. ಟಾಟಾಗಳ ಹಡುಗುಗಳು, ಚೀನಾದಲ್ಲಿದ್ದ ಗೋದಾಮುಗಳು ನೇಪಿಯರ್‌ನ ವಿಜಯದಲ್ಲಿ ನೆರವಿಗೆ ಬಂದವು. ನಂತರ ಈ ನೇಪಿಯರ್ ಮುಂಬಯಿ ಪ್ರಾಂತ್ಯದ ಬ್ರಿಟಿಷ್ ಕಮ್ಯಾಂಡರ್ ಆದ. ಟಾಟಾ ಮತ್ತು ಇವರ ನಡುವಣ ಸಖ್ಯತೆ ಮತ್ತಷ್ಟು ಬಲಿಯಿತು.


ಈ ನೇಪಿಯರ್‌ಗೆ ಭಾರತದ ಸೈನ್ಯ ಪಡೆಯೊಂದಿಗೆ ಅಬಿಸೀನಿಯಾ (ಇಂದು ಇಥಿಯೋಪಿಯ ಮತ್ತಿತರ ಪ್ರದೇಶಗಳು) ಎಂಬ ಪೂರ್ವ ಆಫ್ರಿಕನ್ ಪ್ರದೇಶದ ರಾಜನ ಮೇಲೆ ದಂಡೆತ್ತಿ ಹೋಗಿ ವಶಪಡಿಸಿಕೊಳ್ಳಲು 1867ರಲ್ಲಿ ಬಿಟಿಷ್ ಸರ್ಕಾರದ ಆಜ್ಞೆಯಾಯಿತು. ಈ ಪ್ರದೇಶ ಗುಡ್ಡ, ಬೆಟ್ಟಗಳಿಂದ ಕೂಡಿದ್ದು, ಸೈನ್ಯ ಮತ್ತು ಶಸ್ತ್ರಾಸ್ತ್ರಗಳನ್ನು ಸಾಗಿಸಲು ಯಾವುದೇ ರಸ್ತೆಗಳಿಲ್ಲದೆ 644 ಕಿಮೀ ಪ್ರಯಾಣ ಮಾಡುವ ಅನಿವಾರ್ಯತೆಯಿದ್ದ ಆಕ್ರಮಣ ಬಹಳ ಕಠಿಣ ಎಂದು ಪರಿಗಣಿಸಲಾಗಿತ್ತು.



ಇಂತಹ ಆಕ್ರಮಣಕ್ಕೆ ಸಹಾಯಕವಾಗಿ ರೈಲು ಮಾರ್ಗ, ರಸ್ತೆ, ಸೇತುವೆಗಳು ಮಾತ್ರವಲ್ಲ ಬಂದರಿನ ನಿರ್ಮಾಣವನ್ನೂ ತುರ್ತಾಗಿ ಮಾಡಬೇಕಾಗಿತ್ತು. ಈ ಕಾರಣವಾಗಿ ಯುದ್ಧ ಅಂದಿನ ಕಾಲದ ಅತಿ ದುಬಾರಿ ಯುದ್ಧವೆಂದು ಹೆಸರಾಗಿದೆ. ಇಂತಹ ಅತ್ಯಂತ ಹೆಚ್ಚು ಹಣ ಹೂಡಿಕೆಯ ಯುದ್ಧೋದ್ಯಮಕ್ಕೆ ನೇಪಿಯರ್, ಆ ವೇಳೆಗಾಗಲೇ ಈಜಿಪ್ಟ್ ಮೊದಲಾದ ಆಫ್ರಿಕಾದ ದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದ, ತನ್ನ ಯುದ್ಧಗಳಿಗೆ ಸರಬರಾಜು ಸಹಾಯಕರಾಗಿದ್ದ ಟಾಟಾಗಳನ್ನು ಆಯ್ಕೆ ಮಾಡಿದ.

ಈ ಸೈನ್ಯದ ಜೊತೆಗೆ ಅದಕ್ಕೆ ಸಹಾಯಕವಾಗಿ 44 ಆನೆಗಳನ್ನೂ ಮತ್ತಿತರ ವಸ್ತುಗಳನ್ನೂ ಬಾಂಬೆಯಿಂದ ಸಾಗಿಸಲಾಯಿತು. 40,000 ಹೇಸರಕತ್ತೆ, ಒಂಟೆ ಮೊದಲಾದ ಪ್ರಾಣಿಗಳೂ ಈ ಯುದ್ಧದಲ್ಲಿ ಜೊತೆಗಾರರಾಗಿದ್ದವು ಎಂದರೆ ಊಹಿಸಿಕೊಳ್ಳಿ, ಎಷ್ಟು ದೊಡ್ಡ ಸರಬರಾಜು ಕಂಟ್ರಾಕ್ಟ್ ಟಾಟಾರಿಗೆ ದೊರಕಿತ್ತು ಎಂದು. ಆಫ್ರಿಕಾವನ್ನು ವಶಪಡಿಸಿಕೊಳ್ಳುವ ಬ್ರಿಟಿಷರ ವಸಾಹತುಶಾಹಿ ಆಕ್ರಮಣ ಯುದ್ಧದ ಕಂಟ್ರಾಕ್ಟ್ ಟಾಟಾರಿಗೆ ವರದಾನವೆಂಬಂತಾಗಿತ್ತು.

ಯುದ್ಧದ ಸರಬರಾಜು ಎಂದರೇ ಸಾಕು ಯಾರಿಗಾದರೂ, ಎಲ್ಲಿಯಾದರೂ ಲಾಭದ ಸುರಿಮಳೆ. ಹೇಳಿದ್ದೇ ಬೆಲೆ, ಕೊಟ್ಟದ್ದೇ ಮಾಲು.



ಅದರಲ್ಲೂ ಈ ಯುದ್ಧ ಅಪಾರ ವೆಚ್ಚದ್ದು ಎನ್ನುವಾಗ ಅದರ ಸಿಂಹಪಾಲು ಟಾಟಾರಿಗೆ ದೊರಕಿತು. ಟಾಟಾ ದಿಢೀರ್ ಶ್ರೀಮಂತರಾದರು.

ಈ ಯುದ್ಧ ಕೊನೆಗೊಂಡ ಕೂಡಲೇ ಹೀಗೆ ಗಳಿಸಿದ ಹಣವನ್ನು ಹೂಡಲು ದಾರಿಗಳನ್ನು ಹುಡುಕತೊಡಗಿದರು. ಹೀಗೆ ಮೊದಲಾದ ವಿನಾಶಕ ಯುದ್ಧಗಳು ಮತ್ತು ಟಾಟಾರ ಬಂಡವಾಳದ ಉದ್ಭವದ ಸಂಬಂಧ ಮುಂದೆ ಮೊದಲನೇ ಜಾಗತಿಕ ಮಹಾಯುದ್ಧ, ಎರಡನೇ ಜಾಗತಿಕ ಮಹಾಯುದ್ಧದ ಸಮಯದಲ್ಲಿ ಮತ್ತಷ್ಟು ಬೆಳೆಯಿತು. ಸ್ವಾತಂತ್ರ್ಯಾನಂತರವೂ ಹಲವು ಬಗೆಯಲ್ಲಿ ಮುಂದುವರೆಯಿತು. ಈಗ ಟಾಟಾ ಎಂದರೆ ಭಾರತದ ಅತಿ ದೊಡ್ಡ ಮಿಲಿಟರಿ ಇಂಡಸ್ಟ್ರಿ ಕಾಂಪ್ಲೆಕ್ಸ್‌ನ ಒಡೆಯ. ಕೇವಲ ಭಾರತದ್ದು ಮಾತ್ರವಲ್ಲ, ವಿಶ್ವದ ಅತಿ ದೊಡ್ಡ ಮಿಲಿಟರಿ ಇಂಡಸ್ಟ್ರಿ ಕಾಂಪ್ಲೆಕ್ಸ್‌ಗಳಾದ ಅಮೆರಿಕ, ಫ್ರಾನ್ಸ್, ಬ್ರಿಟನ್‌ಗಳ ಮಿಲಿಟರಿ ಕಾಂಪ್ಲೆಕ್ಸ್‌ಗಳ ಜಾಲದ ಒಬ್ಬ ಮುಖ್ಯ ಪಾತ್ರದಾರ. ಇಸ್ರೇಲ್‌ನ ಶಸ್ತ್ರಾಸ್ತ್ರ ಉತ್ಪಾದನೆಯ ಸಹಚರರಾಗಿ ಪ್ಯಾಲೆಸ್ಟೈನ್ ನರಹತ್ಯೆಗಳ ಭಾಗಿದಾರರು. ಈ ಎಲ್ಲ ಚರಿತ್ರೆ, ಆಯಾ ಕಾಲಘಟ್ಟದಲ್ಲಿ ಹಲವು ವಿವರಗಳೊಡನೆ ನಿಮ್ಮ ಮುಂದೆ ಬರಲಿದೆ.

ಇನ್ನು ಕ್ರಿ.ಶ.1860ರ ಕಾಲಕ್ಕೆ ಮರಳೋಣ. ಈ ದೊಡ್ಡ ಮಿಲಿಟರಿ ಲಾಟರಿಯ ಜೊತೆಗೆ ಮತ್ತೊಂದು ಲಾಟರಿಯೂ ಟಾಟಾರನ್ನು ಅರಸಿ ಬಂತು. ಟಾಟಾರವರು ಪರಂಪರಾಗತವಾಗಿ ದೀರ್ಘಕಾಲದಿಂದ ಅಂತರರಾಷ್ಟ್ರೀಯ ಹತ್ತಿ ವ್ಯಾಪಾರದಲ್ಲಿ ತೊಡಗಿದ್ದರು. ಈ ವ್ಯಾಪಾರ ಇದ್ದಕ್ಕಿದ್ದಂತೆ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿ ಬದಲಾಗಿಬಿಟ್ಟಿತು. ದೂರದ ಅಮೆರಿಕಾದಲ್ಲಾಗುತ್ತಿದ್ದ ಒಂದು ದೊಡ್ಡ ಅಂತರ್ಯುದ್ಧದಿಂದ. ಈ ಯುದ್ಧದಲ್ಲಿ ಟಾಟಾಗಳದೇನೂ ಪಾತ್ರವಿರಲಿಲ್ಲ. ಆದರೆ ಅದರಿಂದ ಟಾಟಾಗಳಿಗೆ ದೊಡ್ಡ ಲಾಭ ಮಾತ್ರ ದಕ್ಕಿತು.

ಅಮೇರಿಕದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ, ಸಾವಿರಾರು ಎಕರೆಗಳ ಫಾರಂಗಳಲ್ಲಿ ಉತ್ತಮ ಗುಣಮಟ್ಟದ ಹತ್ತಿಯನ್ನು ಬೆಳೆಯುತ್ತಿದ್ದರು. ಆಫ್ರಿಕಾದಿಂದ ಬಲ ಪ್ರಯೋಗ ಮಾಡಿ 1709 ರಿಂದ 1807ರ ನಡುವೆ ಹಿಡಿದು ತಂದ ನಾಲ್ಕುವರೆ ಲಕ್ಷ ಕಪ್ಪು ಜನರನ್ನು ಗುಲಾಮರನ್ನಾಗಿಸಿದರು. ಗುಲಾಮರ ಮಾರುಕಟ್ಟೆಗಳಲ್ಲಿ ಹರಾಜು ಕೂಗಿ ಕೊಂಡುಕೊಂಡರು. ಗಂಡ, ಹೆಂಡತಿ, ಅಪ್ಪ, ಅಮ್ಮ, ಮಕ್ಕಳನ್ನು ಬೇರೆ ಮಾಡಿ, ಕೈಯಲ್ಲಿ ಚಾಟಿ ಹಿಡಿದು, ಹೊಗೆಸೊಪ್ಪು (ಪ್ರಸಿದ್ಧ ವರ್ಜೀನಿಯಾ ಟೊಬ್ಯಾಕೊ ಗುಲಾಮರು ಬೆಳೆದದ್ದೇ), ಹತ್ತಿ ಬೆಳೆ ಬೆಳೆಯಲು ದುಡಿಮೆಗೆ ಹಚ್ಚಿದರು. ಗಂಡಸರು ಮಾತ್ರವಲ್ಲದೆ, ಹೆಂಗಸರು, ಮಕ್ಕಳನ್ನೂ ಅಮಾನವೀಯವಾಗಿ ಹಿಂಸಿಸಿ ದುಡಿಸಿಕೊಳ್ಳುತ್ತಾ ಹತ್ತಿಯನ್ನು ನೂರಾರು ವರ್ಷಗಳಿಂದ ಬೆಳೆಯಲಾಗುತ್ತಿತ್ತು. ಬ್ರಿಟನ್ನಿನ ಹತ್ತಿ ಜವಳಿ ಕಾರ್ಖಾನೆಗಳಿಗೆ ಈ ಹತ್ತಿಯನ್ನೇ ಪ್ರಧಾನವಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು. ಈ ಗುಲಾಮಗಿರಿಯ ವಿರುದ್ಧ ಕಪ್ಪುಜನರು ಸೆಣೆಸಾಡುತ್ತಲೇ ಇದ್ದರು. ಅದು 1860ರಲ್ಲಿ ಅಬ್ರಹಾಂ ಲಿಂಕನ್ ಎಂಬುವರು ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಹೋರಾಟ ಮತ್ತಷ್ಟು ತೀವ್ರವಾಯಿತು. ಗುಲಾಮರ ವಿಮೋಚನೆಗಾಗಿ ಅಮೆರಿಕದ ಸಂಯುಕ್ತ ಸಂಸ್ಥಾನದ ಹತ್ತಿ ಬೆಳೆ ಪ್ರದೇಶಗಳಾದ ದಕ್ಷಿಣ ಭಾಗ, ಉತ್ತರ ಭಾಗದ ನಡುವೆ ವರ್ಷಗಳ ಕಾಲ ಯುದ್ಧ ನಡೆಯಿತು. ಕೊನೆಗೆ 1865ರಲ್ಲಿ ಗುಲಾಮಗಿರಿಯನ್ನು ಕಿತ್ತು ಹಾಕಿ ಎಲ್ಲ ಕಪ್ಪು ಜನರೂ ಸ್ವತಂತ್ರರು ಎಂದು ಘೋಷಿಸುವುದರೊಂದಿಗೆ ಮುಕ್ತಾಯವಾಯಿತು.

ಗುಲಾಮಗಿರಿಯ ವಿಮೋಚನೆಯ ಈ ಯುದ್ಧದ ಕಾಲಘಟ್ಟದಲ್ಲಿ ಮತ್ತು ನಂತರದ ಕೆಲ ವರ್ಷಗಳಲ್ಲಿ ಅಮೆರಿಕದಿಂದ ಬ್ರಿಟನ್‌ಗೆ ರಫ್ತಾಗುವ ಹತ್ತಿಯ ಪ್ರಮಾಣ ಬಹುವಾಗಿ ಕುಗ್ಗಿತು. ಈ ಸಮಯ ಭಾರತದಿಂದ ದೊಡ್ಡ ಪ್ರಮಾಣದಲ್ಲಿ ಹತ್ತಿಯ ರಫ್ತಾಯಿತು. 1858ರಲ್ಲಿ ಭಾರತದಿಂದ ಬ್ರಿಟನ್‌ಗೆ ರಫ್ತಾದ ವಸ್ತುಗಳಲ್ಲಿ ಹತ್ತಿಯ ಪಾಲು ಕೇವಲ ಶೇ. 14.60 ಇದ್ದರೆ 1870ರ ವೇಳೆಗೆ ಅದು ಶೇ. 35.23ರಷ್ಟು ಪ್ರಮಾಣ ಮುಟ್ಟಿತ್ತು. ಬ್ರಿಟನ್‌ನ ಹತ್ತಿಯ ಅಗತ್ಯದ ಮುಕ್ಕಾಲು ಭಾಗ ಭಾರತದಿಂದ ಪೂರೈಕೆಯಾಯಿತು.

ಇದಕ್ಕೆ 'ಕಾಟನ್ ಬೂಮ್' ಎಂದು ಕರೆಯುತ್ತಾರೆ. ಇದು ಮುಖ್ಯವಾಗಿ ಟಾಟಾಗಳಿಗೆ ಮತ್ತು ಇತರ ಹತ್ತಿ ವ್ಯಾಪಾರಗಾರರಿಗೆ ದಿಢೀರ್ ಲಾಭ ಗಳಿಸಲು ಮತ್ತೊಂದು ಅವಕಾಶವಾಯಿತು.

ಇದು ಭಾರತದ ಕಪ್ಪು ಭೂಮಿಯ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಜೋಳ, ಗೋಧಿ ಮತ್ತಿತರ ಆಹಾರ ಧಾನ್ಯಗಳ ಬದಲಾಗಿ ಹತ್ತಿಯನ್ನು ಬೆಳೆಯುವ ಒತ್ತಡವನ್ನು ಹೇರಿತು. ಹೀಗೆ ಉತ್ಪಾದನೆಯಾದ ಹತ್ತಿಯನ್ನು ತ್ವರಿತವಾಗಿ ಬಂದರುಗಳಿಗೆ ಸಾಗಿಸಲು ರೈಲ್ವೆ ಮಾರ್ಗಗಳನ್ನೂ ಹಾಕಲಾಯಿತು. ಈ ಸಂದರ್ಭದಲ್ಲಿ ಭಾರತದಲ್ಲಿ ಬೆಳೆಯುತ್ತಿದ್ದ ಗಿಡ್ಡ ನೂಲಿನ ಹತ್ತಿಗೆ ಬದಲಾಗಿ ಉದ್ದ ನೂಲಿನ, ಮಧ್ಯಮ

ಪುಟ 12 ಕ್ಕೆ

ಒಳ ಮೀಸಲಾತಿ, 'ಜಾತಿ ಗಣತಿ': ಬರೀ ಮಾತು ಅರ್ಥಹೀನ

ಸಂಪಾದಕೀಯ

ಕರ್ನಾಟಕದಲ್ಲಿನ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಹಲವು ಹಗರಣಗಳ ಬಗ್ಗೆ ಆರೋಪ, ಪ್ರತ್ಯಾರೋಪ, ವಾದ ವಿವಾದಗಳ ಸುರಿಮಳೆ ಆಗುತ್ತಿದೆ. ಈ ನಡುವೆ ಹಲವು ವರ್ಷಗಳಿಂದ ಆಗೀಗ ಪ್ರಸ್ತಾವಿಸಲ್ಪಡುವ ಎರಡು ವಿಷಯಗಳು ಮತ್ತೇ ದಿಢೀರನೇ ಜೀವ ಪಡೆದಿವೆ. ಒಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಗಳಿಗೆ ಉದ್ಯೋಗ– ಶಿಕ್ಷಣದಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸಿಕೊಡುವುದು ಮತ್ತೊಂದು 'ಜಾತಿ ಗಣತಿ' ಎಂದೇ ಬಿಂಬಿಸಲಾಗುತ್ತಿರುವ ಕರ್ನಾಟಕದ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಧ್ಯಯನ ದ ಕುರಿತ ಹಿಂದುಳಿದ ವರ್ಗಗಳ ಆಯೋಗದ ಅದ್ಯಕ್ಷರಾಗಿದ್ದ ಕಾಂತರಾಜು ನೇತೃತ್ವದ ವರದಿಯನ್ನು ಸಾರ್ವಜನಿಕಗೊಳಿಸುವ ವಿಚಾರ. ಕಳೆದ ವಾರದಲ್ಲಿ ಈ ಎರಡೂ ವಿಷಯಗಳ ಬಗ್ಗೆ ಸ್ವತಃ ಮುಖ್ಯಮಂತ್ರಿಗಳೇ ಸಾರ್ವಜನಿಕವಾಗಿ ಪ್ರಸ್ತಾಪಿಸಿ ಅವುಗಳಿಗೆ ತಾವು ತಮ್ಮ ಸರ್ಕಾರ ಬದ್ದವೆಂದು ಘೋಷಿಸಿದ್ದಾರೆ. ಇಂತಹ ಮಾತುಗಳು ಹೊರ ಬಂದಾಗ ನಿರೀಕ್ಷೆಯಂತೆ 'ಆಸಕ್ತ ವಲಯ'ಗಳು ಬಹಳ ತೀಕ್ಷ್ಣವಾಗಿ ಪ್ರತಿಕ್ರಿಯೆಗಳನ್ನೂ ನೀಡಿದ್ದಾರೆ. ಸಿದ್ಧರಾಮಯ್ಯ ನವರ ಮೇಲೆ ವ್ಯಕ್ತಿಗತವಾಗಿ, ಹಾಗೇ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ನಿರಂತರ ಧಾಳಿ ನಡೆಸುತ್ತಿರುವ ವಿರೋಧ ಪಕ್ಷಗಳಾದ ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಪಕ್ಷಗಳು ಸಹಜವಾಗಿ ಇದು ಮುಡಾ ಕೇಸ್ ನಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ಎಂದು ಆರೋಪಿಸಿದ್ದಾರೆ. ಹಿಂದೆ ಕಾಂಗ್ರೆಸ್ ಸರಕಾರ ಮೌನ ವಹಿಸಿದಾಗ ಈ ವರದಿಯ ಬಗ್ಗೆ ನಿಲುವು ಪ್ರಕಟಿಸಿ ಎಂದು ಆಗ್ರಹಿಸುತ್ತಿದ್ದವರೇ, ಸಚಿವ ಸಂಪುಟವು ಈ ವರದಿ ಯನ್ನು ಚರ್ಚಿಸಲಿದೆ ಎಂದಾಗ ವಿರೋಧಿಸುತ್ತಿರುವುದು ವಿಪರ್ಯಾಸ. ಮತ್ತು ಸಂಕುಚಿತ ರಾಜಕೀಯ ದುರುದ್ದೇಶದ ಪ್ರಯತ್ನ. ಇದರೊಟ್ಟಿಗೆ ಪ್ರಧಾನವಾಗಿ ಮೇಲ್ಜಾತಿಗಳಾದ ವೀರಶೈವ–ಲಿಂಗಾಯತ, ಒಕ್ಕಲಿಗರು ವಿರೋಧದ ಕದನ ಘೋಷಿಸಿದ್ದಾರೆ. ಸರ್ಕಾರ, ಆಡಳಿತ ಪಕ್ಷ ತನ್ನ ಘೋಷಿತ ಉದ್ದೇಶಕ್ಕೆ ಪ್ರಾಮಾಣಿಕವಾಗಿ ಬದ್ಧವಾಗಿದ್ದರೆ ಇವೆಲ್ಲವನ್ನೂ ಎದುರಿಸಬಹುದಿತ್ತು. ಇನ್ನು ವರದಿ ಒಪ್ಪಿಕೊಂಡು ಜಾರಿ ಮಾಡುವ ಪ್ರಸ್ತಾಪವೇ ಇರದೇ ಅದನ್ನು ಸಾರ್ವಜನಿಕರೆದುರು ಮಂಡಿಸುವುದಕ್ಕೂ ಇಷ್ಟು ಕಡು ವಿರೋಧ ವ್ಯಕ್ತವಾಗುತ್ತಿರುವುದು ವಿಚಿತ್ರ. ಇಲ್ಲಿ ಈ ವಿಷಯದಲ್ಲಿ ಆಡಳಿತ ಪಕ್ಷವಾಗಿರುವ ಕಾಂಗ್ರೆಸ್ ನಲ್ಲೂ, ಮಂತ್ರಿ ಮಂಡಲದಲ್ಲೂ ಸ್ಪಷ್ಟ ವಿಭಜನೆ ಆಗಿದೆ. ಶ್ಯಾಮನೂರು ಗುಂಪು ಒಂದೆಡೆ, ಡಿ.ಕೆ.ಶಿವಕುಮಾರ್ ಮತ್ತೊಂದೆಡೆ ಬಂಡೆ ಕಲ್ಲಿನಂತೆ ವಿರೋಧವಾಗಿ ನಿಂತಿದ್ದಾರೆ. ಈ ಒಡಕನ್ನು ಉಳಿದವರು ಬಳಸುತ್ತಿದ್ದಾರೆ. ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ಪಕ್ಷ ಎಂದು ಡಂಗುರ ಹೊಡೆಯುವ ಕಾಂಗ್ರೆಸ್ ಜಾತಿ ನೆಲೆಯಲ್ಲಿ ಸ್ಥಾಪಿತ ಹಿತಾಸಕ್ತಿಗಳ ಜೊತೆ ಇಬ್ಬಾಗವಾಗುವುದು ಅದರ ಸೈದ್ಧಾಂತಿಕ ದಿವಾಳಿತನವನ್ನು ತೋರಿಸುತ್ತದೆ. ಅದರ ಅಖಿಲ ಭಾರತ ನಾಯಕ ರಾಹುಲಗಾಂಧಿ ಕಾಂಗ್ರೆಸ್ 'ಜಾತಿ ಗಣತಿ' ಗೆ ಬದ್ಧವೆಂದು ಮಾತನಾಡುವುದು ಆತ್ಮ ವಂಚನೆಯಂತೆ ಕಾಣುತ್ತದೆ.

ಹಾಗೆ ಒಳ ಮೀಸಲಾತಿಯ ಪ್ರಶ್ನೆಯ ಕುರಿತಾದ ಅದರ ನಿಲುವು ನಡೆಯೂ ಟೀಕಾರ್ಹವಾದುದು. ಒಳ ಮೀಸಲಾತಿ ನೀಡುವಿಕೆಯ ಪ್ರಶ್ನೆಯನ್ನು ರಾಜ್ಯಗಳು ನಿರ್ಧರಿಸಬಹುದು ಎಂದು ಸುಪ್ರಿಂ ಕೋರ್ಟ್ ಹೇಳಿರುವಾಗ ಇಲ್ಲಿಯವರೆಗೂ ಅದರತ್ತ ಕ್ರಮ ವಹಿಸಲು ಯಾವೊಂದು ಕ್ರಮವನ್ನೂ ಕರ್ನಾಟಕದ ಕಾಂಗ್ರೆಸ್ ಸರ್ಕಾರ ವಹಿಸಿಲ್ಲ. ಪಕ್ಕದ ತೆಲಂಗಾಣದ ಮುಖ್ಯಮಂತ್ರಿ ರೇವಂತರೆಡ್ಡಿ ಯವರು ಒಂದು ಸಮಿತಿ ರಚಿಸಿದಂತೆ ಇಲ್ಲಿಯೂ ಕ್ರಮ ವಹಿಸಬಹುದಿತ್ತು. ಆದರೆ ಸಿದ್ಧರಾಮಯ್ಯನವರ ಸರ್ಕಾರಕ್ಕೆ ಏನೊಂದೂ ಇಚ್ಛಾಶಕ್ತಿಯೇ ಇಲ್ಲವಾಗಿದೆ. ಮತ್ತು ಬಾಯಿ ಮಾತಿನ ಉಪಚಾರದಿಂದ ಜನರನ್ನು ತೃಪ್ತಿ ಪಡಿಸಬಹುದು ಎಂದು ಭಾವಿಸಿದಂತಿದೆ.

ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ: ಕೇವಲ ಒಳ ಮೀಸಲಾತಿ ನೀತಿಯನ್ನು ಅಂಗೀಕರಿಸಿದರೆ ಸಾಕಾಗುವುದಿಲ್ಲ. ಈಗಿನ ಮೀಸಲಾತಿಯ ನೀತಿಯಲ್ಲಿ ಪ್ರಮುಖ ಬದಲಾವಣೆ ಅಗತ್ಯವಿದೆ. ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ತೀವ್ರ ಪ್ರಕ್ರಿಯೆಯಲ್ಲಿ ಸರ್ಕಾರದ ಕ್ಷೇತ್ರದಲ್ಲಿ ಉದ್ಯೋಗದ ಮತ್ತು ಶಿಕ್ಷಣದ ಅವಕಾಶಗಳೇ ಕುಗ್ಗಿ ಹೋಗಿವೆ. ಇಂದು ಸಾರ್ವಜನಿಕ ವಲಯದಲ್ಲಿ ಉದ್ಯೋಗದ ಅವಕಾಶಗಳು ಕೇವಲ ಶೇ.2 ರಷ್ಟು ಮಾತ್ರವೇ ಲಭ್ಯವಿದ್ದು ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳ ಪಾಲಿಗೆ ಸಿಗುವ ಉದ್ಯೋಗಗಳು ಅತ್ಯಂತ ಕಡಿಮೆ. ಬಹುತೇಕ ಎಲ್ಲ ಬಗೆಯ ಉದ್ಯೋಗಗಳು ಖಾಸಗಿ ಕ್ಷೇತ್ರದಲ್ಲಿದ್ದು ಇಲ್ಲಿಗೂ ಮೀಸಲು ನೀತಿ ವಿಸ್ತರಣೆ ಆಗದಿದ್ದಲ್ಲಿ ಈಗಿನ ವಂಚನೆ ತಪ್ಪಿಸಲು ಅಸಾಧ್ಯ. ಅಂದರೆ ಕೇವಲ ಒಳ ಮೀಸಲಾತಿ ನೀತಿಯ ಅಂಗೀಕಾರ ಒಂದೇ ಸಾಕಾಗದು. ಅದರೊಂದಿಗೆ ಈ ಪ್ರಮುಖ ಬದಲಾವಣೆ ಮಾಡದೇ ಪರವಾದ ನಿಲುವು ಉಚ್ಚರಿಸುವುದು ನಿಷ್ಪ್ರಯೋಜಕ. ಜೊತೆಗೆ ಸಾರ್ವಜನಿಕ ವಲಯವನ್ನು ಬಲಗೊಳಿಸುವುದು, ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಪೂರ್ಣವಾಗಿ ನೇಮಕ ಮಾಡುವುದು ಸಹ ಅತ್ಯಗತ್ಯ.

ಸಿದ್ಧರಾಮಯ್ಯ ನವರ ಸರ್ಕಾರ ಈ ನಿಟ್ಟಿನಲ್ಲಿ ಧೃಢ ಕ್ರಮ ತೆಗೆದುಕೊಳ್ಳಲಿ. ಬರೀ ವೀರಾವೇಶದ ಮಾತುಗಳಿಂದ ಕಾಲಹರಣ ಮಾಡದಿರಲಿ. ಅದು ಜನರ ಹಾದಿ ತಪ್ಪಿಸುವ ಕುತಂತ್ರವಾಗುತ್ತದೆ.

ಉಪ ಚುನಾವಣೆ: ಪ್ರತಿಷ್ಠಿತರ ಕಣಗಳು

ಈ ವಾರ

ಎಸ್.ವೈ.ಗುರುಶಾಂತ್

ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ತೆರವಾದ ಮೂರು ವಿಧಾನಸಭಾ ಸ್ಥಾನಗಳಿಗೆ ಕರ್ನಾಟಕದಲ್ಲಿ ಉಪ ಚುನಾವಣೆ ಘೋಷಿತವಾಗಿದೆ. ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ಆಯ್ಕೆಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ಅವರು ಸಂಸದರಾಗಿ ಚುನಾಯಿತರಾದರು. ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಬಸವರಾಜ ಬೊಮ್ಮಾಯಿ ಯವರು, ಹಾಗೆಯೇ ಸಂಡೂರಿನಲ್ಲಿ ಇ.ತುಕಾರಾಮ್ ರವರು ಸಂಸದರಾಗಿ ಚುನಾಯಿತರಾದರು. ಹೀಗಾಗಿ ಈ ಮೂರು ಸ್ಥಾನಗಳಿಗೆ ಇದೀಗ ಚುನಾವಣೆಗಳು ಘೋಷಿತವಾಗಿವೆ.

ಪಕ್ಷವಾರು ಗಮನಿಸಿದಲ್ಲಿ ಚನ್ನಪಟ್ಟಣದಲ್ಲಿ ಜೆಡಿಎಸ್ ಚುನಾಯಿತವಾಗಿತ್ತು. ಶಿಗ್ಗಾವಿಯಲ್ಲಿ ಬಿಜೆಪಿ, ಸಂಡೂರಿನಲ್ಲಿ ಕಾಂಗ್ರೆಸ್.

ಈಗಿನ ಹೊಸ ಚುನಾವಣಾ ಮೈತ್ರಿ ಯಂತೆ ಎರಡು ಸ್ಥಾನಗಳು ಎನ್‌ಡಿಎ ಮೈತ್ರಿಕೂಟದಲ್ಲಿ ಮತ್ತು ಒಂದು ಕಾಂಗ್ರೆಸ್ಸಿಗೆ ಸೇರಿದ ಕ್ಷೇತ್ರಗಳಾಗಿವೆ. ಮತದಾನ ಮೂರು ಕ್ಷೇತ್ರಗಳಲ್ಲಿಯೂ ನವೆಂಬರ್ 13ಕ್ಕೆ ನಡೆಯಲಿದೆ. ನವೆಂಬರ್ 23ಕ್ಕೆ ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟವಾಗಲಿದೆ. ಚುನಾವಣೆಗೆ ಸಂಬಂಧಿಸಿ ಈಗಾಗಲೇ ಅಧಿಕೃತವಾಗಿ ನೋಟಿಫಿಕೇಶನ್ ಹೊರಡಿಸಲಾಗಿದೆ. ಅದರಂತೆ ನಾಮಪತ್ರ ಸಲ್ಲಿಕೆಗೆ 25ನೇ ಅಕ್ಟೋಬರ್ ಮತ್ತು ಹಿಂಪಡೆಯಲು 28 ಕೊನೆಯ ದಿನ.

ಚುನಾವಣಾ ದಿನಾಂಕಗಳನ್ನು ಅಧಿಕೃತವಾಗಿ ಪ್ರಕಟಗೊಳಿಸಿದ ಕೂಡಲೇ ವಿವಿಧ ರಾಜಕೀಯ ಪಕ್ಷಗಳಲ್ಲಿ ಚಟುವಟಿಕೆಗಳು ಗರಿಗೆದರವೆ. ಈ ಕ್ಷೇತ್ರಗಳಿಗೆ ಗೆದ್ದೇ ಗೆಲ್ಲಬಹುದಾದ ಅಭ್ಯರ್ಥಿಗಳ ಆಯ್ಕೆಯಲ್ಲಿಯೂ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗಳು ವಿವಿಧ ರೀತಿಯ ಕಸರುತ್ತುಗಳನ್ನು ಮಾಡುತ್ತಿವೆ. ವಿಶೇಷವೆಂದರೆ, ಶಿಗ್ಗಾಂವಿ ಮತ್ತು ಚನ್ನಪಟ್ಟಣ ಕ್ಷೇತ್ರಗಳು ಮಾಜಿ ಮುಖ್ಯಮಂತ್ರಿಗಳು ಗೆದ್ದಿದ್ದ ಕ್ಷೇತ್ರಗಳು. ಈ ಕ್ಷೇತ್ರಕ್ಕೆ ತಮ್ಮ ಮಗನನ್ನು ಕಣಕ್ಕಿಳಿಸಲು ಕುಮಾರಸ್ವಾಮಿಯವರು ಉತ್ಸುಕರಾಗಿದ್ದಾರೆ. ಈಗಾಗಲೇ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್‌ಗಳ ನಡುವೆ ಹೊಂದಾಣಿಕೆ ಇರುವುದರಿಂದ ಅವರು ಏಕ ಪಕ್ಷಿಯ ವಾಗಿ ಅಭ್ಯರ್ಥಿ ಯನ್ನು ಘೋಷಿಸಲು ಸಾಧ್ಯವಿಲ್ಲ. ಬಿಜೆಪಿಯಿಂದ ಎಲ್ಲ ರೀತಿಯ ಸಹಕಾರ ದೊರೆತಲ್ಲಿ ತಮ್ಮ ಮಗ ನಿಖಿಲ್ ಚುನಾಯಿತರಾಗುವುದು ಸುಲಭ ಎಂದು ಭಾವಿಸಿದ್ದಾರೆ. ಮೇಲಾಗಿ, ಈ ಕ್ಷೇತ್ರಕ್ಕೆ ಮಾಜಿ ಶಾಸಕ ಮತ್ತು ಮಂತ್ರಿಯಾಗಿದ್ದ ಸಿ.ಪಿ. ಯೋಗೇಶ್ವರ್ ತಮಗೆ ಟಿಕೆಟ್ ಸಿಗಬೇಕೆಂದು ತುಂಬಾ ಒತ್ತಡವನ್ನು ಹಾಕುತ್ತಿದ್ದಾರೆ. ಆದರೆ ಜೆಡಿಎಸ್ ಗೆದ್ದಿದ್ದ ಕ್ಷೇತ್ರದಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆಗಳು ಅಷ್ಟಾಗಿ ಇಲ್ಲ. ಒಂದು ವೇಳೆ ಸಿ.ಪಿ.ಯೋಗೇಶ್ವರ್ ಗೆ ಟಿಕೆಟ್ ನಿರಾಕರಿಸಿದಲ್ಲಿ ಅವರು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಬಹುದೇ ಎನ್ನುವ ಪ್ರಶ್ನೆಯೂ ಇದೆ. ಹೀಗಾಗಿಯೇ ಅವರ ಆಪ್ತರುಗಳನ್ನು ಬಿಟ್ಟು ಮನವೊಲಿಸಲು ಬಿಜೆಪಿ ಪ್ರಯತ್ನ ನಡೆಸುತ್ತಿದೆ. ಬಹಳ ತಂತ್ರ ಬದ್ಧವಾಗಿ ಕುಮಾರಸ್ವಾಮಿಯವರು 'ಏನಿದ್ದರೂ ಬಿಜೆಪಿ ಹೈಕಮಾಂಡ್ ಜೊತೆಯಲ್ಲಿ ಚರ್ಚಿಸಿದ ಬಳಿಕವೇ ಯಾವುದೇ ನಿರ್ಧಾರವನ್ನು ಪ್ರಕಟಿಸುವುದಾಗಿ'ಯೂ ಹೇಳುತ್ತಿದ್ದಾರೆ. ಅಲ್ಲದೆ ನಿಮ್ಮ ಕುಟುಂಬದವರು ಸ್ಪರ್ಧಿಸುತ್ತಾರೆ ಎಂದು ಮಾಧ್ಯಮದವರು ಕೇಳಿದಾಗ ತಾವು ಎನ್‌ಡಿಎ ಕುಟುಂಬದವರು ನನ್ನ ಕುಟುಂಬವೇ ಎನ್‌ಡಿಎ ಎಂದು ಒತ್ತಿ ಹೇಳುವುದರ ಮೂಲಕ ಬಿಜೆಪಿ ಹೈಕಮಾಂಡನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ತಮ್ಮ ಮಗನಿಗೆ ಟಿಕೆಟ್ ಪಡೆಯುವ ಖಚಿತ ಭರವಸೆ ಇಟ್ಟಂತಿದೆ. ಜೊತೆಗೆ ಮಾಜಿ ಮುಖ್ಯಮಂತ್ರಿ, ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪನವರು ಕೂಡ ಈ ಕ್ಷೇತ್ರವನ್ನು ಕುಮಾರಸ್ವಾಮಿಯವರಿಗೆ ಜೆಡಿಎಸ್ ಗೆ ಬಿಟ್ಟುಕೊಡಬೇಕು ಎಂದು ಅಬಿಪ್ರಾಯ ಹೊರಹಾಕಿದ್ದಾರೆ. ಜೆಡಿಎಸ್ ಗೆ ಈ ಕ್ಷೇತ್ರ ಬಿಟ್ಟುಕೊಟ್ಟಲ್ಲಿ ಸಿ.ಪಿ.ಯೋಗೇಶ್ವರ್ ಮತ್ತು ಅವರ ತಂಡ ಎಂತಹ ಪಾತ್ರವನ್ನು ನಿರ್ವಹಿಸಲಿದೆ ಎನ್ನುವುದು ಕೂಡ ಕುತೂಹಲಕಾರಿ.

ಚುನಾವಣೆ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ನಲ್ಲಿಯೂ ಅತ್ಯಂತ ಚುರುಕಿನಿಂದ ರಾಜಕೀಯ ಚಟುವಟಿಕೆಗಳು ನಡೆದಿವೆ. ನೇರವಾಗಿ ರಾಮನಗರಕ್ಕೆ, ಚನ್ನಪಟ್ಟಣಕ್ಕೆ ತೆರಳಿದ ಉಪಮುಖ್ಯಮಂತ್ರಿ ಕಾಂಗ್ರೆಸ್ಸಿನ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಲ್ಲಿ ಅಭ್ಯರ್ಥಿ ಯಾರು ಎಂಬ ಪ್ರಶ್ನೆಗೆ 'ನಾನೇ ಇಲ್ಲಿ ಅಭ್ಯರ್ಥಿ' ಎನ್ನುವ ಮೂಲಕ ಈ ಚುನಾವಣೆಯಲ್ಲಿ ಸ್ಪರ್ಧೆಯ ತೀವ್ರತೆಯನ್ನು ಮತ್ತು ಈ ಕ್ಷೇತ್ರವನ್ನು ತಾವೇ ಗೆದ್ದುಕೊಳ್ಳುವ ಗಟ್ಟಿ ನಿರ್ಧಾರ ಇದೆ ಎನ್ನುವುದನ್ನು ಸಾರಿದ್ದಾರೆ. ಈಗಿನ ಚರ್ಚೆಗಳ ರೀತಿಯಲ್ಲಿ ಚನ್ನಪಟ್ಟಣ ಕ್ಷೇತ್ರಕ್ಕೆ ಕಳೆದ ಬಾರಿ ಲೋಕಸಭಾ ಚುನಾವಣೆಯಲ್ಲಿ ಸೋಲನ್ನಪ್ಪಿದ ಡಿ.ಕೆ. ಸುರೇಶ ಅವರನ್ನು ಅಭ್ಯರ್ಥಿಯಾಗಿಸಬಹುದು ಎನ್ನುವ ಮಾತುಗಳು ದಟ್ಟವಾಗಿ ಇವೆ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಚಂಡಿಕಾ ಯಜ್ಞವನ್ನು ಸುರೇಶ್ ಅವರ ಹೆಸರಿನಲ್ಲಿ ಮಾಡಿಸಿರುವುದು ಮತ್ತಷ್ಟು ಕುತೂಹಲವನ್ನ ಜನರಲ್ಲಿ ಹೆಚ್ಚಿಸಿದೆ. ಅಂತೂ, ಕಾಂಗ್ರೆಸ್ ಈ ಕ್ಷೇತ್ರವನ್ನು ತಾನು ಮತ್ತೆ ಗೆಲ್ಲಬೇಕು ಎನ್ನುವ ಗಟ್ಟಿ ನಿರ್ಧಾರದಲ್ಲಿದೆ.

ಬಸವರಾಜ್ ಬೊಮ್ಮಾಯಿ ಅವರ ಮಗ ಭರತ್ ಬೊಮ್ಮಾಯಿಯನ್ನು ಅಭ್ಯರ್ಥಿಯನ್ನಾಗಿಸಬೇಕು ಎನ್ನುವ ದೆಸೆಯಲ್ಲಿ ಬೊಮ್ಮಾಯಿಯವರು ಹೊರಗೆ ಅಬ್ಬರವಿಲ್ಲದೆ ತಮ್ಮದೇ ಆದ ಪ್ರಯತ್ನ ನಡೆಸಿದ್ದಾರೆ ಮತ್ತು ಬಹುತೇಕ ಅವರಿಗೆ ಬಿಜೆಪಿ ಟಿಕೆಟ್ ಕೊಡುವುದು ಖಚಿತವಾಗಿದೆ. ಏಕೆಂದರೆ ಬೊಮ್ಮಾಯಿಯವರನ್ನು ಹೊರತುಪಡಿಸಿ ಬೇರೆಯವರನ್ನು ಅಲ್ಲಿ ಸ್ಪರ್ಧಿಸಿ ಗೆಲ್ಲುವ ವಿಶ್ವಾಸವು ಬಿಜೆಪಿಗೆ ಇದ್ದಂತಿಲ್ಲ. ಹೇಗಿದ್ದರೂ ಬೊಮ್ಮಾಯಿ ಕುಟುಂಬಕ್ಕೆ ಟಿಕೆಟ್ ನೀಡಲೇಬೇಕಾದ ಒತ್ತಡಕ್ಕೆ ಬಿಜೆಪಿ ಒಳಗಾಗುತ್ತದೆ.

ಅದೇ ರೀತಿ ಸಂಡೂರಿನಲ್ಲಿ ಕಾಂಗ್ರೆಸ್ ನಾಲ್ಕನೇ ಬಾರಿ ಸಥ ಗೆದ್ದಿದ್ದ ಕ್ಷೇತ್ರ. ವಿಶೇಷವಾಗಿ ಇ. ತುಕಾರಾಮ್ ಇಲ್ಲಿ ಸತತವಾಗಿ ಗೆಲ್ಲುತ್ತಲೇ ಬಂದಿದ್ದಾರೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಅಭ್ಯರ್ಥಿಯಾಗಬೇಕೆಂದು ಪಿ.ಶ್ರೀರಾಮುಲು ಬಯಸಿ ಬಂದಿದ್ದರು ಆದರೆ ಇಲ್ಲಿನ ಜನತೆಯ ಅಭಿಪ್ರಾಯವನ್ನು ಕಂಡು ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ತುಕರಾಮ್ ರವರನ್ನು ಕಳೆದ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಯನ್ನಾಗಿಸಬೇಕು ಎನ್ನುವ ಸೂಚನೆ ಬಂದಾಗ ತುಕಾರಾಮ್ ಸುತಾರಾಮ್ ಒಪ್ಪಿರಲಿಲ್ಲ. ಕೊನೆಗೆ ಒಪ್ಪೊಕೊಂಡಾಗ ಈ ಕ್ಷೇತ್ರದಲ್ಲಿ ತಮ್ಮ ಮಗಳನ್ನು ಅಥವಾ ಕುಟುಂಬದವರನ್ನು ಸ್ಪರ್ಧಿಸಲು ಅವಕಾಶ ಕಲ್ಪಿಸಿ ಕೊಡುವುದಾಗಿ ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಜ್ಯದ ನಾಯಕತ್ವ ಒಪ್ಪಂದಕ್ಕೆ ಬಂದ ಬಳಿಕ ತುಕರಾಮ್ ಸ್ಪರ್ಧಿಸಿದ್ದಾರೆ ಎನ್ನುವ ಮಾಹಿತಿ ಅಂದೇ ಹೊರಗೆ ಬಂದಿತ್ತು. ಏಕೆಂದರೆ ತುಕಾರಾಮ್ ಅವರ ಬಳಿ ಹಣವಿದೆ ಮತ್ತು ಜನಪ್ರಿಯತೆಯು ಇದೆ ಎನ್ನುವುದು ಈಗಲೂ ಕೇಳಿ ಬರುತ್ತಿರುವ ಮಾತು. ಆದರೆ ನಾಲ್ಕನೇ ಬಾರಿಯೂ ಗೆದ್ದಿದ್ದ ತುಕರಾಮ್ ಅವರ ಈ ಕುಟುಂಬಕ್ಕೆ ಟಿಕೆಟ್ ನೀಡಿದಲ್ಲಿ ಬೇರೆಯವರಿಗೆ ಕಾಂಗ್ರೆಸ್ಸಿನಲ್ಲಿ ದುಡಿದ ಇತರೆ ಕಾರ್ಯಕರ್ತರಿಗೆ ಅವಕಾಶವೇ ಇಲ್ಲದಂತೆ ಆಗುತ್ತದೆ. ಈ ನಿರಾಕರಣೆಯನ್ನು ಒಪ್ಪಲಾಗದು ಎಂದು ಒಂದು ಪ್ರಬಲವಾದ ಗುಂಪು ಬಂಡಾಯವೆದ್ದು ಸಭೆ ನಡೆಸಿದೆ. ಬಳಿಕ ಈ ಗುಂಪಿನ ಜೊತೆಯಲ್ಲಿ ಮಾತನಾಡಲು ಸಚಿವ ಸಂತೋಷ್ ಲಾಡ್ ರವರು ಬೆಂಗಳೂರಿಗೂ ಕರೆದಿದ್ದಾರೆ. ಹಾಗೆ ನೋಡಿದರೆ ತುಕಾರಾಮರವರಿಗೆ ಎಲ್ಲಾ ರೀತಿಯಿಂದಲೂ ಬಲ ಮತ್ತು ಬೆಂಬಲ ಇರುವುದು ಸಚಿವ ಗಣಿಗಾರಿಕೆಯ ಹಣವಂತ ಸಂತೋಷ ಲಾಡ್ ಅವರದ್ದೇ. ಸಂತೋಷ್ ಲಾಡ್ ಅವರ ಬೆಂಬಲವಿಲ್ಲದೆ ಚುನಾವಣೆ ಗೆಲ್ಲುವುದು ಕಷ್ಟ ಎನ್ನುವುದು ಕೂಡ ಕಾಂಗ್ರೆಸ್ ನಾಯಕತ್ವಕ್ಕೆ ತಿಳಿಯದ ವಿಚಾರವೇನಲ್ಲ. ಅವರ ಮೇಲು ಅದು ಹೆಚ್ಚಿನ ಅವಲಂಬನೆಯನ್ನು ಹೊಂದಿದೆ. ಆದರೆ ಸಾಧಾರಣವಾಗಿ ಈ ಕ್ಷೇತ್ರದಲ್ಲಿ ಈ ಅವಧಿಯಲ್ಲಿ ಕಾಂಗ್ರೆಸ್ಸಿನ ಶಾಸಕರಾಗಿದ್ದ ಮತ್ತು ಸಂಸದರಾಗಿರುವ ತುಕರಾಮ್ ಅವರ ವಿರುದ್ಧದ ಮನೋಭಾವವು ಪುಟ 14 ಕ್ಕೆ

ರಾಜ್ಯಾದ್ಯಂತ ಸಂಘಟನೆ ವಿಸ್ತರಣೆಗೆ 'ದಲಿತ ಹಕ್ಕುಗಳ ಸಮಿತಿ' ಕಾರ್ಯಯೋಜನೆ:

ಹಲವು ಜಿಲ್ಲೆಗಳಲ್ಲಿ ನಡೆಯುತ್ತಿರುವ ಯಶಸ್ವಿ ಕಾರ್ಯಾಗಾರಗಳು



ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್) ತನ್ನ ಸಂಘಟನೆಯನ್ನು ರಾಜ್ಯಾದ್ಯಂತ ವಿಸ್ತರಿಸಲು ವ್ಯಾಪಕವಾಗಿ ಮುಂದಾಗಿದೆ. ಇದರ ಒಂದು ಭಾಗವಾಗಿ ಈಗಾಗಲೇ ಹಲವು ಜಿಲ್ಲೆಗಳಲ್ಲಿ ಕಾರ್ಯಾಗಾರಗಳನ್ನು ಯಶಸ್ವಿಯಾಗಿ ನಡೆಸಿದೆ. ಆಗಸ್ಟ್ 17ರಂದು ಉತ್ತರ ಕರ್ನಾಟಕದ ಕಲ್ಬುರ್ಗಿ ಜಿಲ್ಲೆಯಲ್ಲಿ ಮೊದಲ ಕಾರ್ಯಾಗಾರ ನಡೆಯಿತು. ಸೆಪ್ಟೆಂಬರ್ 8 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ನಡೆಯಿತು. ನಂತರ ಮಂಡ್ಯ, ರಾಮನಗರ, ವಿಜಯನಗರ, ಬೆಂಗಳೂರು ಉತ್ತರ, ಸೆಪ್ಟೆಂಬರ್, 29 ರಂದು ಉಡುಪಿ, ಅಕ್ಟೋಬರ್ 6ರಂದು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾರ್ಯಾಗಾರಗಳನ್ನು ಯಶಸ್ವಿಯಾಗಿ ಸಂಘಟಿಸಲಾಗಿದೆ.

ಪ್ರತಿಯೊಂದು ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲೆಯ 100 ಕಾರ್ಯಕರ್ತರನ್ನು ತೊಡಗಿಸಬೇಕೆಂಬ ಸಂಘಟನೆಯ ತೀರ್ಮಾನವನ್ನು ಅನುಷ್ಠಾನಗೊಳಿಸುವ ಪ್ರಯತ್ನದಲ್ಲಿ 60ರಿಂದ 70 ಕಾರ್ಯಕರ್ತರುಗಳು ಎಲ್ಲಾ ಜಿಲ್ಲೆಗಳಲ್ಲೂ ಪಾಲ್ಗೊಂಡಿದ್ದರು.

ಈ ಕಾರ್ಯಾಗಾರಗಳಲ್ಲಿ, ಡಾ.ಬಿ.ಆರ್. ಅಂಬೇಡ್ಕರ್ ರವರ ವೈಚಾರಿಕ ಚಿಂತನೆ, ದಲಿತರ ವಿಮೋಚನೆಯ ದಾರಿ, ಸಂವಿಧಾನದ ಆಶಯಗಳು, ಅಸ್ಪೃಶ್ಯತೆ, ಜಾತಿ ತಾರತಮ್ಯ, ದೌರ್ಜನ್ಯ ತಡೆ ಕಾಯ್ದೆಗಳ ಅರಿವು ಹಾಗೂ ಜಿಲ್ಲಾ ಮಟ್ಟದ ಕಾರ್ಯ ಯೋಜನೆಗಳ ಜಾರಿ ಕುರಿತಾದ ಉಪನ್ಯಾಸ ತರಗತಿಗಳನ್ನು ನಡೆಸಲಾಗಿದೆ.

ವಿವಿಧ ಸಂಘಟನೆಗಳ ಮುಖಂಡರು, ಪ್ರಗತಿಪರ ಚಿಂತಕರು ಕಾರ್ಯಾಗಾರಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದರು. ಹಿರಿಯ ಮುಖಂಡರಾದ ಯು.ಬಸವರಾಜ, ಜಿ.ಎನ್.ನಾಗರಾಜ್, ಡಾ.ಚಿನ್ನಸ್ವಾಮಿ ಸೋಸಲೆ, ಡಾ.ವಿರುಪಾಕ್ಷ ಪೂಜಾರಹಳ್ಳಿ, ಶ್ರೀರಾಮ ದಿವಾಣ ಮುಂತಾದವರು ಉಪನ್ಯಾಸ ನೀಡಿದರು. ಡಿಎಚ್‌ಎಸ್ ಸಂಘಟನೆಯ ರಾಜ್ಯ ಮುಖಂಡರಾದ ಗೋಪಾಲಕೃಷ್ಣ ಹರಳಹಳ್ಳಿ ಎನ್.ರಾಜಣ್ಣ, ಎನ್.ನಾಗರಾಜ್, ಬಿ.ರಾಜಶೇಖರಮೂರ್ತಿ, ಸಂಜೀವ್ ಬಳ್ಕೂರ್ ಮುಂತಾದವರು ಕಾರ್ಯಾಗಾರಗಳನ್ನು ನಡೆಸಿಕೊಟ್ಟರು.

ಮತ್ತಷ್ಟು ಜಿಲ್ಲೆಗಳಲ್ಲಿ ನಡೆದಿದೆ ಸಿದ್ದತೆ

ಫೆಬ್ರವರಿ 4 ಮತ್ತು 5 ರಂದು ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ನಡೆದ ಕರ್ನಾಟಕ 'ದಲಿತ ಹಕ್ಕುಗಳ ಸಮಿತಿ' (ಡಿಎಚ್‌ಎಸ್) ಯ ಮೂರನೇ ರಾಜ್ಯ ಸಮಾವೇಶದಲ್ಲಿ ರಾಜ್ಯಾದ್ಯಂತ ಸಂಘಟನೆಯನ್ನು ವಿಸ್ತರಿಸುವ ಗುರಿ ಹೊಂದಿತ್ತು ಹಾಗೂ ರಾಜ್ಯದ 20 ಜಿಲ್ಲೆಗಳು ಹಾಗೂ 100 ತಾಲೂಕುಗಳಲ್ಲಿ ಒಂದು ಸಾವಿರ ಗ್ರಾಮ ಘಟಕಗಳ ರಚನೆಗೆ ಯೋಜನೆ ರೂಪಿಸಲಾಗಿತ್ತು. ಸಮಾವೇಶದಲ್ಲಿ ಕೈಗೊಂಡ ಸಂಘಟನಾ ಕಾರ್ಯಯೋಜನೆ ತೀರ್ಮಾನದಂತೆ ಯೋಜನೆಯನ್ನು ಜಾರಿಗೊಳಿಸಲು ಡಿಎಚ್‌ಎಸ್ ಮುಂದಾಗಿದೆ. ಇದರ ಭಾಗವಾಗಿ ಮೊದಲ ಹಂತದಲ್ಲಿ ಎಲ್ಲೆಡೆ ಕಾರ್ಯಾಗಾರಗಳನ್ನು ಸಂಘಟಿಸುತ್ತಿದೆ. ಈಗಾಗಲೇ ನಡೆದಿರುವ ಕಾರ್ಯಾಗಾರಗಳ ಯಶಸ್ಸಿನಿಂದ ಉರುಪುಗೊಂಡಿರುವ ಡಿಎಚ್‌ಎಸ್‌ನ ಕಾರ್ಯಕರ್ತರು ಇತರೆ ಕಡೆಗಳಲ್ಲಿಯೂ ಕಾರ್ಯಾಗಾರ ನಡೆಸಲು ಹುಮ್ಮಸ್ಸಿನಿಂದ ಮುಂದಾಗಿದ್ದಾರೆ. ಈಗಾಗಲೇ ಚಿಕ್ಕಬಳ್ಳಾಪುರ, ತುಮಕೂರು, ಬಳ್ಳಾರಿ, ಮೈಸೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕಾರ್ಯಾಗಾರದ ಸಿದ್ಧತೆಗಳು ನಡೆದಿದೆ.


ಸಂಘಟನಾ ಸಮಿತಿಗಳ ರಚನೆ

ಕೆಲ ಜಿಲ್ಲೆಗಳಲ್ಲಿ ಹೊಸ ನಾಯಕತ್ವವನ್ನು ಆಯ್ಕೆ ಮಾಡುವ ಮೂಲಕ ಸಂಘಟನೆಗೆ ಬಲ ತುಂಬುವ ಕಾರ್ಯ ನಡೆದಿದೆ. ಅಕ್ಟೋಬರ್ 8ರಂದು ಕೋಲಾರ ಜಿಲ್ಲಾ ಸಮಿತಿ ಸಭೆ ಮತ್ತು 13ರಂದು ಬಿಜಾಪುರ ಜಿಲ್ಲಾ ಸಂಘಟನಾ ಸಮಿತಿ ಸಭೆ ನಡೆದಿದೆ. ಅಕ್ಟೋಬರ್ 25ರಂದು ಚಿತ್ರದುರ್ಗ, 30ರಂದು ರಾಯಚೂರು ಹಾಗೂ ನವೆಂಬರ್ 10ರಂದು ಬೀದರ್ ಜಿಲ್ಲೆಗಳ ಜಿಲ್ಲಾ ಸಂಘಟನಾ ಸಭೆಗಳಿಗೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ದಾವಣಗೆರೆ, ಯಾದಗಿರಿ, ಶಿವಮೊಗ್ಗ, ಕೊಡಗು, ಚಿತ್ರದುರ್ಗ, ವಿಜಯಪುರ, ರಾಯಚೂರು, ಕೊಪ್ಪಳಗಳಲ್ಲಿ ಪೂರ್ವಭಾವಿ ಸಭೆಗಳು ನಡೆದು ಸಂಘಟನಾ ಸಮಿತಿಗಳನ್ನು ರಚಿಸಲಾಗಿದ್ದು, ಚಟುವಟಿಕೆಗಳು ಆರಂಭವಾಗಿವೆ. ಶಾಖೆಗಳ ರಚನೆಯ ಜೊತೆಗೆ ಸಂಘಟನೆಯ ವಿಸ್ತರಣೆಯ ಕಾರ್ಯ ನಡೆಯುತ್ತಿದೆ. ಕಾರ್ಯಕರ್ತರಲ್ಲಿ ಉತ್ಸಾಹ, ಚೈತನ್ಯ ತುಂಬುವ ಕಾರ್ಯ ನಡೆದಿದೆ. ತಾಲೂಕುವಾರು ಸಭೆಯ ನಂತರ ಜಿಲ್ಲಾ ಮಟ್ಟದ ಸಂಘಟನಾ ಸಮಿತಿಗಳನ್ನು ಹಾಗೂ ಜಿಲ್ಲಾ ಸಮಿತಿಗಳನ್ನು ರಚಿಸುವ ಮೂಲಕ, ರಾಜ್ಯದಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸಲು ಬೇಕಾದ ಎಲ್ಲಾ ರೀತಿಯ ಪ್ರಯತ್ನ ನಡೆದಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

'ಧಮನಿತರ ಧ್ವನಿ ಮಾಧ್ಯಮ' ಎಂಬ ಯೂಟ್ಯೂಬ್ ಚಾನೆಲ್

ಸಮಾವೇಶದ ತೀರ್ಮಾನದಂತೆ ಸಂಕಲ್ಪ ಸ್ಮರಣ ಸಂಚಿಕೆ ಒಂದನ್ನು ಹೊರತರಲಾಗಿದೆ. ಹಾಗೂ 'ಧಮನಿತರ ಧ್ವನಿ ಮಾಧ್ಯಮ' ಎಂಬ ಯೂಟ್ಯೂಬ್ ಚಾನೆಲ್ ಒಂದನ್ನು ಪ್ರಾರಂಭಗೊಳಿಸಿದ್ದು, ಇದು ಸಂಘಟನೆಯ ನಿಲುವುಗಳನ್ನು, ಜಿಲ್ಲೆಗಳಲ್ಲಿ ನಡೆಯುವ ಹೋರಾಟಗಳನ್ನು ಹಾಗೂ ಸೈದ್ಧಾಂತಿಕ ವಿಚಾರಗಳನ್ನು ಚರ್ಚಿಸುವ ಮಾಧ್ಯಮವಾಗಿದೆ. ಸಂಘಟನೆಯ ಗುಣಾತ್ಮಕ ಬೆಳವಣಿಗೆ ಕಾಣುತ್ತಿದೆ. ರಾಜ್ಯದಲ್ಲಿ ನಾಯಕರು ಪೂರ್ಣಮಟ್ಟದಲ್ಲಿ ಕಾಂರ್ಯೋನ್ಮುಖರಾಗಿರುವುದನ್ನು ಕಾಣಬಹುದಾಗಿದೆ.



ಡಿಎಚ್‌ಎಸ್ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಾಗಾರ

ಅಕ್ಟೋಬರ್ 6, 2024 ರಂದು, ದಲಿತ ಹಕ್ಕುಗಳ ಸಮಿತಿ'ಯ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಾಗಾರ ಮಂಗಳೂರು ನಗರದ ಟೌನ್ ಹಾಲ್ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. ಕಾರ್ಯಾಗಾರದಲ್ಲಿ ಪ್ರಮುಖವಾಗಿ ಸಂವಿಧಾನದ ಆಶಯಗಳಾದ, ಜಾತ್ಯಾತೀತ, ಪ್ರಜಾಸತ್ತಾತ್ಮಕ, ಸಮಾಜವಾದಿ, ಸಮಾನತೆ, ಸಾಮಾಜಿಕ ನ್ಯಾಯ, ಒಕ್ಕೂಟತತ್ವ ಹಾಗೂ ಗಣತಂತ್ರ ಭಾರತದ ಪರಿಕಲ್ಪನೆಯ ಸಂರಕ್ಷಣೆ ಕುರಿತಂತೆ, ಹಾಗೂ ಮೂಲಭೂತ ಸಂವಿಧಾನಬದ್ಧ ಸೌಕರ್ಯಗಳಾದ, ಭೂಮಿ, ಉದ್ಯೋಗ, ನಿವೇಶನ, ಆಹಾರ ಭದ್ರತೆಯ ಹಕ್ಕುಗಳ– ಕುರಿತಂತೆ ದಲಿತ ಸಮುದಾಯದ ಮಧ್ಯೆ ಜಾಗೃತಿ ಮೂಡಿಸುವುದಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯಾದವ್ ಶೆಟ್ಟಿಯವರು ಕಾರ್ಯಾಗಾರದ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಬಂದು 78 ವರ್ಷಗಳಾದರೂ, ದಲಿತರ ಮೇಲೆ ನಡೆಯುವ ಅಸ್ಪೃಶ್ಯತಾ ದೌರ್ಜನ್ಯಗಳು ನಡೆಯುತ್ತಲೇ ಇರುವುದು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಇಂದಿಗೂ ಬಹುಸಂಖ್ಯೆಯ ದಲಿತರು ಬದಕಲು ಅಗತ್ಯವಿರುವ ಭೂಮಿ, ವಸತಿ, ನಿವೇಶನಗಳಂತ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರು ಹೆಚ್ಚಾಗಿ ತಮ್ಮ ಜೀವನ ನಿರ್ವಹಣೆಗೆ ಕೃಷಿಕೂಲಿಕಾರರಾಗಿಯೇ ದುಡಿಯುತ್ತಾ ಶೋಷಣೆಗೆ ಒಳಗಾಗಿದ್ದಾರೆ. ಮತ್ತೊಂದು ಕಡೆ ಜಾತಿ ಅಸ್ಪೃಶ್ಯತೆಯ ದೌರ್ಜನ್ಯದಿಂದ ದಮನಕ್ಕೆ ತುತ್ತಾಗುತ್ತಾರೆ. ಈ ನಿಟ್ಟಿನಲ್ಲಿ ಡಿಎಚ್‌ಎಸ್ ಸಂಘಟನೆ ದಲಿತರ ಮಧ್ಯೆ ಜಾಗೃತಿ ಮೂಡಿಸುವ ಉದ್ದೇಶದಿಂದ, ಈ ಕಾರ್ಯಾಗಾರವನ್ನು ಏರ್ಪಡಿಸಿದೆ. ಇದರ ಅನುಭವ ಪಡೆದು, ಈ ಪ್ರದೇಶದಲ್ಲಿ ದಲಿತ ಸಮುದಾಯವನ್ನು ಸಂಘಟಿಸಿ, ಅವರನ್ನು ಮುಖ್ಯವಾಹಿನಿ ಚಳುವಳಿಗೆ ತರಬೇಕೆಂಬ ಡಾ.ಅಂಬೇಡ್ಕರ್ ರವರ ಆಶಯವನ್ನು ಡಿಎಚ್‌ಎಸ್ ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲೆಯ ಡಿಎಚ್‌ಎಸ್ ಸಂಚಾಲಕರಾದ ಸಂಜೀವ ಬಳ್ಕೂರ್ ಅವರು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಉಪಯೋಜನೆ ಕುರಿತಂತೆ ಮಾತನಾಡಿ, ಸರ್ಕಾರ ಈ ಅನುದಾನದ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿರುವುದನ್ನು ಖಂಡಿಸಿದರು. ಬಜೆಟ್ ಮೂಲಕ ನೀಡುವ ಈ ಹಂಚಿಕೆಯ ಹಣವನ್ನು ದಲಿತರ ಅಭಿವೃದ್ಧಿಗಾಗಿಯೇ, ಕಾನೂನಾತ್ಮಕವಾಗಿ ಬಳಸಬೇಕೆಂದು ಆಗ್ರಹಿಸಿದರು.

ನಂತರ ಡಿಎಚ್‌ಎಸ್‌ನ ಕಾರ್ಯಕರ್ತರಿಗೆ ಕಾರ್ಯಾಗಾರವನ್ನು ನಡೆಸಲಾಯಿತು. ದಲಿತ್ ಶೋಷಣ್ ಮುಕ್ತಿ ಮಂಚ್ (ಡಿಎಸ್‌ಎಂಎಂ)ನ ಕೇಂದ್ರ ಸಮಿತಿಯ ಸದಸ್ಯರು ಹಾಗೂ ಡಿಎಚ್‌ಎಸ್‌ನ ರಾಜ್ಯ ಉಪಾಧ್ಯಕ್ಷರಾದ ನಾಗರಾಜ ನಂಜುಂಡಯ್ಯ ಉಪನ್ಯಾಸಕರಾಗಿ ಭಾಗವಹಿಸಿದ್ದರು. ಅವರು ಡಾ.ಅಂಬೇಡ್ಕರ್ ವೈಚಾರಿಕತೆ ಮತ್ತು ಅವರ ಜಾತಿ ವಿನಾಶದ ಪರಿಕಲ್ಪನೆ, ದಲಿತರ ವಿಮೋಚನೆ, ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ದಲಿತರ ಪಾತ್ರ ಕುರಿತಂತೆ ತರಗತಿ ತೆಗೆದುಕೊಂಡರು.

ಆದಿವಾಸಿ ಸಮನ್ವಯ ಸಮಿತಿಯ ರಾಜ್ಯ ಮುಖಂಡರಾದ ಕೃಷ್ಣಪ್ಪ ಕೊಂಚಾಡಿ ಅವರು ಡಿಎಚ್‌ಎಸ್‌ನ ಧ್ಯೇಯೋದ್ದೇಶಗಳ ಕುರಿತಂತೆ, ಉಪನ್ಯಾಸ ನೀಡಿದರು. ಕಾರ್ಯಾಗಾರದಲ್ಲಿ, ಮೂಡಬಿದ್ರೆ, ಉಲ್ಲಾಳ, ಬೆಳ್ತಂಗಡಿ ಮತ್ತು ಮಂಗಳೂರು ನಗರ ತಾಲ್ಲೂಕಿನ ಸುಮಾರು 70ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

ಕೃಷ್ಣಪ್ಪಕೊಣಾಜೆ ಅಧ್ಯಕ್ಷತೆ ವಹಿಸಿದ್ದರು. ಕೃಷ್ಣಎಂ. ರವರು ಕಾರ್ಯಾಗಾರದ ನಿರೂಪಣೆ ಮಾಡಿದರು.

ಕಾರ್ಯಾಗಾರದಲ್ಲಿ 10 ಮಂದಿಯ ಪದಾಧಿಕಾರಿಗಳನ್ನು ಒಳಗೊಂಡ 20 ಜನರ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದವರಿಗೆ ಹೊಸ ಉತ್ಸಾಹ ಹಾಗೂ ತಮ್ಮ ತಾಲೂಕಿನಾದ್ಯಂತ ಡಿಎಚ್‌ಎಸ್ ವಿಸ್ತರಿಸಲು ಸಕಾರಾತ್ಮಕವಾದ ಮನೋಭಾವ ತುಂಬುವಲ್ಲಿ ಕಾರ್ಯಾಗಾರ ಯಶಸ್ವಿಯಾಯಿತು.







ಐಸಿಡಿಎಸ್-50 - 'ಯೋಜನೆ'ಯಿಂದ 'ಕಾಯ್ದೆ'ಯೆಡೆಗೆ... ಸಾಗಲಿ

'ಪೂರ್ವ ಪ್ರಾಥಮಿಕ ಶಿಕ್ಷಣ ಬಲಗೊಂಡರೆ ಭಾರತದ ಭವಿಷ್ಯ ಉತ್ತಮಗೊಳ್ಳಲಿದೆ' –

'ಐಸಿಡಿಎಸ್ ಉಳಿಸಿ–ಮಕ್ಕಳನ್ನು ರಕ್ಷಿಸಿ'– ವಿಚಾರ ಸಂಕಿರಣದಲ್ಲಿ ಜಸ್ಟೀಸ್ ಎಸ್. ಮುರಳೀಧರ

ದೇಶದಾದ್ಯಂತ ತಾಯಿ–ಮಕ್ಕಳ ಆರೋಗ್ಯ ಸಂರಕ್ಷಣೆಯಲ್ಲಿ ಹಾಗೂ ಮಕ್ಕಳ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿರುವ ಮತ್ತು ವಹಿಸಬೇಕಾದ 'ಐಸಿಡಿಎಸ್'– (ಸಮಗ್ರ ಶಿಶು ಅಭಿವೃದ್ಧಿ ಯೋಜನೆ–Integrated Child Development Services.) ಅನ್ನು ಉಳಿಸುವ ನಿಟ್ಟಿನಲ್ಲಿ ಅಂಗನವಾಡಿ ನೌಕರರ ಸಂಘಟನೆಯ ಮುತುವರ್ಜಿಯಲ್ಲಿ – 'ಐಸಿಡಿಎಸ್ ಉಳಿಸಿ–ಮಕ್ಕಳನ್ನು ರಕ್ಷಿಸಿ' (Save ICDS- Save Children Fourm)ವೇದಿಕೆ ರಚನೆಯಾಗಿದ್ದು ಈ ವೇದಿಕೆ ಮೂಲಕ, ಪ್ರಸ್ತುತ ಬರಿಯ ಒಂದು 'ಸ್ಕೀಮ್' ಅಥವಾ 'ಯೋಜನೆ' ಮಾತ್ರ ಆಗಿರುವ 'ಐಸಿಡಿಎಸ್' ಅನ್ನು ಖಾಯಂ ಆದ 'ಕಾಯ್ದೆ'ಯ ಸ್ವರೂಪಕ್ಕೆ ತರಲು – ಪೌಷ್ಟಿಕತೆ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣಗಳನ್ನು ಹಕ್ಕಾಗಿಸಲು ಒತ್ತಾಯಿಸಿ ವಿಷಯದ ನಾನಾ ಮಗ್ಗಲುಗಳನ್ನು ಚರ್ಚಿಸಲು ಅಕ್ಟೋಬರ್ 6–7, 2024 ರಂದು ಎರಡು ದಿನಗಳ ವಿಚಾರ ಸಂಕಿರಣವನ್ನು ಬೆಂಗಳೂರಿನ ಶಿಕ್ಷಕರ ಸದನದಲ್ಲಿ ಸಂಘಟಿಸಲಾಗಿತ್ತು.

ವರದಿ: **ಎಚ್.ಎಸ್. ಸುನಂದ**

ವಿಶಿಷ್ಟ ಉದ್ಘಾಟನೆ

ವಿಚಾರ ಸಂಕಿರಣದ ಉದ್ಘಾಟನೆಯನ್ನು ವಿಶೇಷವಾಗಿ ನಡೆಸಲಾಯಿತು. ಅಂಗನವಾಡಿ ಫಲಾನುಭವಿಗಳಾದ 6 ಮಕ್ಕಳು, ಒಬ್ಬ ಗರ್ಭಿಣಿ, ಒಬ್ಬ ಬಾಣಂತಿ, ಆರು ಜನ ಅಂಗನವಾಡಿ ಕಾರ್ಯಕರ್ತೆಯರು ಘೋಷಣೆಗಳೊಂದಿಗೆ "ಪೌಷ್ಟಿಕತೆ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಹಕ್ಕಿನೆಡೆಗೆ" ಎಂಬ ಬ್ಯಾನರ್ ಅನಾವರಣಗೊಳಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪೂರ್ವ ಪ್ರಾಥಮಿಕ ಶಿಕ್ಷಣ ಬಲಗೊಂಡರೆ...
–ಜ. ಮುರಳೀಧರ

ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಒರಿಸ್ಸಾದ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಮುರಳೀಧರ ಅವರು ಮಾತನಾಡಿ "ಮಕ್ಕಳ ಉತ್ತಮ ಭವಿಷ್ಯವೇ ಭಾರತದ ಉತ್ತಮ ಭವಿಷ್ಯ. ಇದು ನಿಜವಾಗಬೇಕಾದರೆ ಅಂಗನವಾಡಿ ಕೇಂದ್ರಗಳು ಬಲಗೊಳ್ಳಬೇಕು, ಅಂಗನವಾಡಿಗಳಲ್ಲಿಯೇ ಪೂರ್ವಪ್ರಾಥಮಿಕ ಶಿಕ್ಷಣ ಸಿಗುವಂತಾಗಬೇಕು." ಎಂದು ದಿಕ್ಸೂಚಿ ಭಾಷಣದ ಮೂಲಕ ಆಗ್ರಹಿಸಿದರು.

ಮುಂದುವರಿದು ಮಾತನಾಡಿದ ಅವರು "ಮಾನವ ಅಭಿವೃದ್ಧಿ ಸೂಚಂಕ್ಯದಲ್ಲಿ ಭಾರತ ಹಿನ್ನಡೆ ಅನುಭವಿಸುತ್ತಿದೆ. ನಮ್ಮ ನೆರೆಯ ರಾಷ್ಟ್ರಗಳು ಸೂಚ್ಯಂಕದಲ್ಲಿ ಸುಧಾರಣೆ ಕಾಣುತ್ತಿವೆ. ನಮ್ಮಲ್ಲಿ ಸಾಕಷ್ಟು ನೈಸರ್ಗಿಕ ಸಂಪನ್ಮೂಲಗಳು, ಆರ್ಥಿಕ ಸಂಪನ್ಮೂಲ ಇದ್ದರೂ, ಇನ್ನೂ ಅಪೌಷ್ಟಿಕತೆ ಇದೆ. ಅಪೌಷ್ಟಿಕತೆ ಹೋಗಲಾಡಿಸಲು ಅಂಗನವಾಡಿ ಕೇಂದ್ರಗಳು ಸೇತುವೆಯಾಗಿ ಕೆಲಸ ಮಾಡುತ್ತಿವೆ. ಅವು ಉಳಿದು ಆ ಮಕ್ಕಳ ಶಿಕ್ಷಣ ಬಲಗೊಂಡಲ್ಲಿ ನಾವು ನೆಗತ ಸಾಧಿಸಲು ಸಾಧ್ಯ. ಹಾಗೆಯೇ ಅಂಗನವಾಡಿ ಕಾರ್ಯಕರ್ತೆಯರ ವೇತನವೂ ಹೆಚ್ಚಳ ಆಗಬೇಕು" ಎಂದರು.

"ಜಾತಿ ತಾರತಮ್ಯ, ವರ್ಗ ವಿಭಜನೆ, ಧರ್ಮಾಧಾರಿತ ದ್ವೇಷಬೀಜ ಬಿತ್ತುವ ಕೆಲಸ ಎಳೆಯ ಹಂತದಲ್ಲಿಯೇ ನಡೆಯುತ್ತಿರುವ ವಿಷಮಯ ಸಂಗತಿಗೆ ನಾವು ಎಲ್ಲ ಸಾಕ್ಷಿಗಳಾಗುತ್ತಿದ್ದೇವೆ. ಇದನ್ನು ತಡೆಯುವ ದೊಡ್ಡ ಜವಾಬ್ದಾರಿ ಅಂಗನವಾಡಿ ಕಾರ್ಯಕರ್ತೆಯರ ಮೇಲಿದೆ. ವಿವಿಧ ಪ್ರದೇಶದಲ್ಲಿ ಅಂಗನವಾಡಿ ನೌಕರರು ಗ್ರ್ಯಾಚ್ಯುಯಿಟಿಗಾಗಿ ಹೋರಾಟ ನಡೆಸಿದ್ದಾರೆ. ಕೆಲ ರಾಜ್ಯಗಳಲ್ಲಿ ಗ್ರ್ಯಾಚುಯುಟಿಯನ್ನು ಪಡೆದುಕೊಂಡಿದ್ದಾರೆ. ಇದು ಅವರ ನ್ಯಾಯಯುತ ಹಕ್ಕು" ಎಂದರು.

ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನ ಪ್ರಾಧ್ಯಾಪಕಿ, ಡಾ.ಸ್ವಾಮಿನಾಥನ್‌ರವರ ಪುತ್ರಿ ಪ್ರೊ. ಮಧುರಾ ಸ್ವಾಮಿನಾಥನ್ ಮಾತನಾಡಿ "ಶಾಲಾ ಪೂರ್ವ ಶಿಕ್ಷಣ ಮಕ್ಕಳ ಶೈಕ್ಷಣಿಕ ಬದುಕಿಗೆ ಬುನಾದಿ ಇದ್ದಂತೆ. 6 ತಿಂಗಳಿಂದ 6 ವರ್ಷದ ವರೆಗೆ ಮಕ್ಕಳ ಆರೋಗ್ಯ, ಕಲಿಕೆಯಲ್ಲಿ ಅಂಗನವಾಡಿ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಕೊಡುಗೆ ಪ್ರಮುಖವಾಗಿದೆ. ಅಂಗನವಾಡಿಗಳನ್ನು ಸುಧಾರಿಸಲು ವಿಶ್ವಸಂಸ್ಥೆ ಹಲವು ಸೂತ್ರಗಳನ್ನು ನೀಡಿದೆ. ಆ ಸೂತ್ರಗಳನ್ನು ಕೇಂದ್ರ ಸರ್ಕಾರ ಹಾಗೂ ಆಯಾ ರಾಜ್ಯಗಳ ಸರ್ಕಾರಗಳು ಜಾರಿ ಮಾಡಬೇಕು. ಅಂಗನವಾಡಿಗಳ ಮೂಲಕ ಬಾಣಂತಿಯರಿಗೆ ಪೌಷ್ಟಿಕ ಆಹಾರ ಸಿಗುತ್ತಿದೆ. ಆದರೆ ಅದು ಇನ್ನಷ್ಟು ಗುಣ ಮಟ್ಟದಿಂದ ಕೂಡಿರಬೇಕಿದೆ. ಈಗ ಸರ್ಕಾರ ಕೇವಲ ದಿನಕ್ಕೆ 42 ರೂ. ಖರ್ಚು ಮಾಡುತ್ತಿದೆ. ಅವರಿಗೆ ಒಂದು ದಿನಕ್ಕೆ 82 ರೂ. ಖರ್ಚು ಮಾಡಬೇಕು. ಮಕ್ಕಳಿಗೆ 8 ರೂ. ಮಾತ್ರ ಖರ್ಚು ಮಾಡುತ್ತಿದ್ದು, ಅದು ಹೆಚ್ಚಳ ಆಗಬೇಕು. ಈ ನಿಟ್ಟಿನಲ್ಲಿ ಹೋರಾಟಗಳು ರೂಪಗೊಳ್ಳಲಿ" ಎಂದು ಕರೆ ನೀಡಿದರು.

8,453 ಕೋಟಿ ರೂ. ಅನುದಾನ ಕಡಿತ
–ಎ.ಆರ್. ಸಿಂಧೂ

ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಅಖಿಲ ಭಾರತ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್. ಸಿಂಧು ಮಾತನಾಡಿ, "ಐಸಿಡಿಎಸ್‌ನ ಉದ್ದೇಶ ಈಡೇರಿಸುವಲ್ಲಿ ಮತ್ತು ಸೇವೆಗಳನ್ನು ಸುಧಾರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ನೀತಿ ಆಯೋಗದ ಶಿಫಾರಸ್ಸಿನಂತೆ 60:40 ರಂತೆ ಅನುಪಾತದಲ್ಲಿ ಬದಲಾವಣೆ ಆಯಿತು. ಇದರಿಂದ 8,453 ಕೋಟಿ ರೂ. ಅನುದಾನ ಕಡಿತವಾಗಿದೆ. ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ನೀಡಲು ವಿಳಂಬ ಮಾಡುತ್ತಿದೆ. ನಾಲ್ಕು ಕಂತುಗಳಲ್ಲಿ ಅನುದಾನ ಬಿಡುಗಡೆಯಾಗುತ್ತಿರುವ ಕಾರಣ ಸಮರ್ಪಕ ಸೇವೆಗಳನ್ನು ನೀಡಲು ವ್ಯತ್ಯಯವಾಗುತ್ತಿದೆ. ಪೂರ್ವ ಪ್ರಾಥಮಿಕ ಶಿಕ್ಷಣ ಹಕ್ಕಾಗಲಿ ಎಂಬುದು 1975ರ ಐಸಿಡಿಎಸ್ ಮಾರ್ಗದರ್ಶಿ ಸೂತ್ರಗಳಲ್ಲಿ ಒಂದಾಗಿದೆ. ಯೋಜನೆಯನ್ನು ಆರಂಭಿಸಿದಾಗಲೇ ಇದನ್ನು ಜಾರಿ ಮಾಡಿದ್ದರೆ ಸಾಕಷ್ಟು ಸುಧಾರಣೆ ಆಗುತ್ತಿತ್ತು. ಅಂಗನವಾಡಿಗಳು ಪಾಲನೆ ಮತ್ತು ಪೋಷಣೆಗೆ ಅಷ್ಟೆ ಸೀಮಿತವಾಗಬಾರದು. ಹಾಗಾಗಿ ಶಾಲಾಪೂರ್ವ ಶಿಕ್ಷಣ ಅಂಗನವಾಡಿಗಳಲ್ಲಿಯೇ ಜಾರಿಯಾಗಬೇಕು" ಎಂದು ಆಗ್ರಹಿಸಿದರು.

ಗ್ರ್ಯಾಚ್ಯುಯಿಟಿ ಕಾಯ್ದೆ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ
–ಎಸ್. ವರಲಕ್ಷ್ಮಿ

ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಪ್ರಾಸ್ತಾವಿಕವಾಗಿ ಮಾತನಾಡಿ, "ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕರಿಗೆ ಗ್ರ್ಯಾಚ್ಯುಯಿಟಿ ಕಾಯ್ದೆ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಕರ್ನಾಟಕದಲ್ಲಿ ಸಿಐಟಿಯು ಮತ್ತು ಅಂಗನವಾಡಿ ನೌಕರರ ಸಂಘ ಪರಿಣಾಮಕಾರಿಯಾಗಿ ಹೋರಾಟ ನಡೆಸಿದ ಕಾರಣ ಜಾರಿಯಾಗಿದೆ. ಇದು ಎಲ್ಲೆಡೆ ಜಾರಿಯಾಗಬೇಕು. ಅಂಗನವಾಡಿ ನೌಕರರು ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆ. ಇವರನ್ನು ಉದ್ಯೋಗಸ್ಥರೆಂದು ಪರಿಗಣಿಸಬೇಕು ಎಂದು 45ನೇ ವಿಶ್ವ ಕಾರ್ಮಿಕ ಸಮ್ಮೇಳನದಲ್ಲಿ ಶಿಫಾರಸ್ಸು ಮಾಡಲಾಗಿದ್ದರೂ ಅದು ಜಾರಿಯಾಗಿಲ್ಲ. ಸಮರ್ಪಕ ವೇತನ ಸಿಗುತ್ತಿಲ್ಲ. ಇದು ಕುಟುಂಬದ ನಿರ್ವಹಣೆಗೆ ಸಂಕಷ್ಟ ತಂದೊಡ್ಡಿದೆ." ಎಂದರು.

ಹೋರಾಟವನ್ನು ಇಡೀ ದೇಶ ಬೆಂಬಲಿಸಬೇಕು
–ಡಾ. ಸಬಿಹಾ ಭೂಮಿಗೌಡ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಕುಲಪತಿ ಡಾ. ಸಬೀಹಾ ಭೂಮಿಗೌಡ ಮಾತನಾಡಿ "ಈ ಸಮಾಜವನ್ನು ಕಟ್ಟುವಲ್ಲಿ ಅಂಗನವಾಡಿ ನೌಕರರ ಕೊಡುಗೆ ದೊಡ್ಡದಿದೆ. ಸಮಾಜದ ಹೊರೆಯನ್ನು ನಿಮ್ಮ ಮೇಲೆ ಹಾಕಿರುವ ಸರ್ಕಾರಗಳು ತಮ್ಮ ಮನಸಾಕ್ಷಿಯನ್ನು ಅವಲೋಕಿಸಿಕೊಳ್ಳಬೇಕಿದೆ. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಬಲಗೊಳಿಸಲು ಅದನ್ನು ಹಕ್ಕಾಗಿಸಲು ಹೋರಾಡುತ್ತಿರುವ ಅಂಗನವಾಡಿ ಹೋರಾಟವನ್ನು ಇಡೀ ದೇಶ ಬೆಂಬಲಿಸಬೇಕು" ಎಂದರು. ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದ ಆರಂಭದಲ್ಲಿ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು.



ಕಾನೂನಿನ ಅಗತ್ಯ ಮತ್ತು ರೂಪುರೇಷೆ

'ಐಸಿಡಿಎಸ್ ಮಾರ್ಗಸೂಚಿಯಂತೆ ಪೂರ್ವ ಪ್ರಾಥಮಿಕ ಶಿಕ್ಷಣ ಅಂಗನವಾಡಿ ಕೇಂದ್ರಗಳಲ್ಲಿಯೇ ಕಡ್ಡಾಯಗೊಳಿಸಲು ಕಾನೂನಿನ ಅಗತ್ಯ ಮತ್ತು ರೂಪುರೇಷೆ' ಎಂಬ ವಿಚಾರದ ಬಗ್ಗೆ ಗೋಷ್ಠಿ 1 ರಲ್ಲಿ ಎಚ್. ವಿ.ಮಂಜುನಾಥ್– ವಕೀಲರು ಉಚ್ಚನ್ಯಾಯಾಲಯ ಕರ್ನಾಟಕ, ಯಮುನಾ ಗಾಂವ್ಕರ್–ವಕೀಲರು, ಎಸ್. ಆರ್ ಶಶಾಂಕ್–ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ, ಬೆಂಗಳೂರು, ಉಷಾ–ಉಪನಿರ್ದೇಶಕರು, ಐಸಿಡಿಎಸ್ ಕೇಂದ್ರ ಕಛೇರಿ ಇವರುಗಳು ವಿಷಯ ಮಂಡನೆ ಮಾಡಿದರು.

'ಮಕ್ಕಳ ಸಮಗ್ರ ಬೆಳವಣಿಗೆಯ ಸವಾಲುಗಳು

'ಮಕ್ಕಳ ಸಮಗ್ರ ಬೆಳವಣಿಗೆಯ ಸವಾಲುಗಳು' ಎಂಬ ವಿಷಯವಾಗಿ ಗೋಷ್ಠಿ 2 ರಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಬಗ್ಗೆ ಡಾ. ನಿರಂಜನಾರಾಧ್ಯ, ಶಿಕ್ಷಣ ತಜ್ಞರು, ಉಷಾ, ಉಪನಿರ್ದೇಶಕರು ಐಸಿಡಿಎಸ್ ಕೇಂದ್ರ ಕಛೇರಿ, ಮಾನಸಿಕ ಬೆಳವಣಿಗೆ ಬಗ್ಗೆ ಡಾ.ರಜಿನಿ, ಮಾನಸಿಕ ತಜ್ಞರು ಉಪ ನಿರ್ದೇಶಕರು, ಕುಟುಂಬ ಮತ್ತು ಆರೋಗ್ಯ ಇಲಾಖೆ, 'ಅಪೌಷ್ಠಿಕತೆ' ಬಗ್ಗೆ ಸಿವಿಕ್ ಸಂಸ್ಥೆಯ ಕಾತ್ಯಾಯಿನಿ ಚಾಮರಾಜ್ ಮಾತನಾಡಿದರು.

ಜನಚಳುವಳಿಗಳ ಪಾತ್ರ

'ಐಸಿಡಿಎಸ್ ಬಲವರ್ಧನೆಯಲ್ಲಿ ಜನಚಳುವಳಿಗಳ ಪಾತ್ರ'ದ ಬಗ್ಗೆ ಗೋಷ್ಠಿ 3 ರಲ್ಲಿ ರೈತ ಚಳುವಳಿಯಿಂದ–ಬಡಗಲಪುರ ನಾಗೇಂದ್ರ, ದಲಿತ ಚಳುವಳಿಯಿಂದ–ಮಾವಳ್ಳಿ ಶಂಕರ್, ಕಾರ್ಮಿಕ ಚಳುವಳಿಯಿಂದ–ವಿ.ಜೆ.ಕೆ. ನಾಯರ್, ಕೃಷಿ ಕೂಲಿಕಾರರ ಚಳುವಳಿಯಿಂದ–ಸ್ವರ್ಣ ಭಟ್, ಮಹಿಳಾ ಚಳುವಳಿಯಿಂದ–ಡಾ. ಮಿನಾಕ್ಷಿ ಬಾಳಿ, ಶಿಕ್ಷಣ ತಜ್ಞರಾದ ಬಿ. ಶ್ರೀಪಾದ್ ಭಟ್ ಚರ್ಚೆ ಮಾಡಿದರು.

ಪುಸ್ತಕ ಬಿಡುಗಡೆ

ಇದೇ ಸಂದರ್ಭದಲ್ಲಿ 'ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಗ್ರ್ಯಾಚ್ಯುಟಿಗೆ ಅರ್ಹರೆ' ಪುಸ್ತಕವನ್ನು ಗಣ್ಯರು ಬಿಡುಗಡೆ ಮಾಡಿದರು.

ಕೇಂದ್ರ ಡಬ್ಲ್ಯೂಸಿಡಿ ಸಚಿವರ ಭೇಟಿ ಮಾಡಿಸುವೆ
– ವಿ. ಸೋಮಣ್ಣ

'ಐಸಿಡಿಎಸ್‌ನಲ್ಲಿ ಒಕ್ಕೂಟ ಸರ್ಕಾರಗಳ

ಪುಟ 10 ಕ್ಕೆ

ಪ್ರೊ. ಜಿ.ಎನ್.ಸಾಯಿಬಾಬಾ ಸಾವು; ಪ್ರಜಾಪ್ರಭುತ್ವದ ಮೇಲೊಂದು ಕಪ್ಪು ಚುಕ್ಕೆ

ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಮತ್ತು ನಾಗರಿಕ ಹಕ್ಕುಗಳ ಹೋರಾಟಗಾರ, ದಬ್ಬಾಳಿಕೆಯ ಪರಂಪರೆಯನ್ನು ಪ್ರತಿ ಹಂತದಲ್ಲೂ ಧಿಕ್ಕರಿಸಿದ ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್.ಸಾಯಿಬಾಬಾ (58) ಹೈದರಾಬಾದ್ ನಲ್ಲಿ ನಿಧನರಾದರು. ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಸಾಯಿಬಾಬಾ ಅವರು ವಾರದ ಹಿಂದೆ ನಿಮ್ಸ್ ಗೆ ದಾಖಲಾಗಿದ್ದರು. ಚಿಕಿತ್ಸೆ ಪಡೆಯುತ್ತಿದ್ದ ಅವರು ಅಕ್ಟೋಬರ್ 12ರ ರಾತ್ರಿ 8.30ಕ್ಕೆ ಕೊನೆಯುಸಿರೆಳೆದರು. ಪ್ರೊಫೆಸರ್ ಸಾಯಿಬಾಬಾರವರ ಆಶಯದಂತೆ ಅವರ ದೇಹವನ್ನು ಸಂಶೋಧನೆಗಾಗಿ ಗಾಂಧಿ ವೈದ್ಯಕೀಯ ಕಾಲೇಜಿಗೆ ಹಸ್ತಾಂತರಿಸಲಾಯಿತು. ಅವರು ಈಗಾಗಲೇ ತಮ್ಮ ಕಣ್ಣುಗಳನ್ನು ಎಲ್.ವಿ.ಪ್ರಸಾದ್ ಆಸ್ಪತ್ರೆಗೆ ದಾನ ಮಾಡಿದ್ದಾರೆ.

ಜಿ.ಎನ್.ಸಾಯಿಬಾಬಾ ಅವರು ಬುಡಕಟ್ಟು ಜನರ ಹಕ್ಕುಗಳಿಗಾಗಿ ಅತ್ಯಂತ ಸಕ್ರಿಯ ಧ್ವನಿಯಾಗಿದ್ದರು. ಬಡವರ, ಶೋಷಿತರ ಪರ, ಅನ್ಯಾಯ, ಸಾಮಾಜಿಕ ದಬ್ಬಾಳಿಕೆ ವಿರುದ್ಧ ಸಕ್ರಿಯವಾಗಿ ಹೋರಾಟ ನಡೆಸಿದ್ದರು. ಅವರು ತಮ್ಮ ಸ್ವಾತಂತ್ರ್ಯ ಮತ್ತು ಆರೋಗ್ಯಕ್ಕೆ ಧಕ್ಕೆ ಬಂದಾಗಲೂ ತುಳಿತಕ್ಕೊಳಗಾದ ಜನರಿಗೆ ಅನ್ಯಾಯವಾದಾಗ ಅದರ ವಿರುದ್ಧ ದಣಿವರಿಯದ ಹೋರಾಟಗಾರರಾಗಿದ್ದರು.

ಐದನೇ ವಯಸ್ಸಿನಲ್ಲಿ ಪೋಲಿಯೊ

ಗೋಕರಕೊಂಡ ನಾಗಸಾಯಿ ಬಾಬಾ ಅವರು 1967ರಲ್ಲಿ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಅಮಲಾಪುರಂನಲ್ಲಿ ಬಡ ರೈತ ಕುಟುಂಬದಲ್ಲಿ ಜನಿಸಿದರು. ಅವರ ಮನೆಗೆ ವಿದ್ಯುತ್ ಕೂಡ ಇರಲಿಲ್ಲ. ಐದನೇ ವಯಸ್ಸಿನಲ್ಲಿ ಪೋಲಿಯೊದಿಂದ ಎರಡೂ ಕಾಲುಗಳು ಸಂಪೂರ್ಣವಾಗಿ ಹಾನಿಗೊಳಗಾಗಿದ್ದವು. ಅವರು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯದಿಂದ ತಮ್ಮ ಪಿಜಿ ಮತ್ತು ದೆಹಲಿ ವಿಶ್ವವಿದ್ಯಾಲಯದಿಂದ (ಡಿಯು) ಪಿಎಚ್‌ಡಿ ಪೂರ್ಣಗೊಳಿಸಿದರು.



ಜೀವಾವಧಿ ಶಿಕ್ಷೆ

90 ಪ್ರತಿಶತ ಅಂಗವೈಕಲ್ಯದೊಂದಿಗೆ ಗಾಲಿಕುರ್ಚಿಗೆ ಸೀಮಿತವಾಗಿದ್ದ ಸಾಯಿಬಾಬಾ ಅವರು 2017ರಿಂದ ಸುಮಾರು ಒಂಬತ್ತು ವರ್ಷಗಳ ಕಾಲ ನಾಗ್ಪುರ ಜೈಲಿನಲ್ಲಿದ್ದರೆ, ಅವರೂ ಸೇರಿದಂತೆ ಇತರ ಐವರಿಗೆ ಮಾವೋವಾದಿಗಳೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ ಮಹಾರಾಷ್ಟ್ರ ಗಡ್ಚಿರೋಲಿ ಟ್ರಯಲ್ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತು. ಈ ಹಿಂದೆಯೂ 2014ರಿಂದ 2016ರವರೆಗೆ ಜೈಲುವಾಸ ಅನುಭವಿಸಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಇದೇ ವರ್ಷ ಮಾರ್ಚ್ 5ರಂದು ಮುಂಬೈ ಹೈಕೋರ್ಟ್ ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಿ ನಾಗ್ಪುರ ಜೈಲಿನಿಂದ ಬಿಡುಗಡೆ ಮಾಡಿತು.

ಸಾಯಿಬಾಬಾ ಮಾನವ ಹಕ್ಕುಗಳ ಕಾರ್ಯಕರ್ತ, ಬರಹಗಾರ ಮತ್ತು ಶಿಕ್ಷಣತಜ್ಞ ಎಂದು ಗುರುತಿಸಲ್ಪಟ್ಟಿದ್ದಾರೆ. ಅವರು ಜೈಲಿನಲ್ಲಿ ಕಷ್ಟದ ಜೀವನವನ್ನು ಕಳೆದರು. ಸಾಯಿಬಾಬಾ ಅವರು ಜೈಲಿನಲ್ಲಿದ್ದಾಗ ಪಿತ್ತಕೋಶದ ಸೋಂಕು ಮತ್ತು ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಹಲವು ಬಾರಿ ಅರ್ಜಿ ಸಲ್ಲಿಸಿದರೂ ಕೇಂದ್ರ ಸರಕಾರವಾಗಲಿ, ಮಹಾರಾಷ್ಟ್ರ ಸರಕಾರವಾಗಲಿ ವೈದ್ಯಕೀಯ ನೆರವು ನೀಡಲಿಲ್ಲ. ಜೈಲಿನಿಂದ ಬಿಡುಗಡೆಯಾದ ನಂತರ ಅವರು ಹೈದರಾಬಾದ್‌ನ ನಿಮ್ಸ್ ಆಸ್ಪತ್ರೆಯಲ್ಲಿ ನಿರಂತರ ಚಿಕಿತ್ಸೆ ಪಡೆಯುತ್ತಿದ್ದರು. ತೀವ್ರ ನಿಗಾ ವಹಿಸಲಾಗಿದೆ ಎಂಬ ವರದಿಗಳ ಹೊರತಾಗಿಯೂ ಅವರು ಅಕ್ಟೋಬರ್ 12ರ ರಾತ್ರಿ ಸಾವನ್ನಪ್ಪಿದರು. ದೇಶದೆಲ್ಲೆಡೆ ರಾಜಕೀಯ ಮುಖಂಡರು ಹಾಗೂ ಸಾರ್ವಜನಿಕರು ಸಾಯಿಬಾಬಾ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಪ್ರಜಾಪ್ರಭುತ್ವದ ಮೇಲೆ ಕಪ್ಪು ಚುಕ್ಕೆ

ಜಿ.ಎನ್.ಸಾಯಿಬಾಬಾರವರ ಸಾವು ಭಾರತದ ಪ್ರಜಾಪ್ರಭುತ್ವದ ಮೇಲೆ ಕಪ್ಪು ಚುಕ್ಕೆಯಾಗಿದೆ. ಇದು ಕೇವಲ ವ್ಯಕ್ತಿಯ ನಷ್ಟವಲ್ಲ; ಇದು ನಮ್ಮ ದೇಶದ ನ್ಯಾಯವ್ಯವಸ್ಥೆ ಹದಗೆಟ್ಟಿರುವುದನ್ನು ಮತ್ತು ಮೋದಿ ಸರ್ಕಾರದ ಮಾನವ ಹಕ್ಕುಗಳ ಉಲ್ಲಂಘನೆಯ ಪರಮಾವಧಿಯನ್ನು ಎತ್ತಿ ತೋರಿಸುವ ದುರಂತ ಘಟನೆಯಾಗಿದೆ.

ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮೋದಿ ಸರ್ಕಾರವು ಮಾತನಾಡುವುದೆಲ್ಲವೂ ಕೇವಲ ಬೊಗಳೆ ಮಾತುಗಳು ಎಂಬುದನ್ನು ಸಾಯಿಬಾಬಾರವರ ಜೀವನ ಮತ್ತು ಮರಣವು ನಮಗೆ ಸ್ಪಷ್ಟವಾಗಿ ತೋರಿಸುತ್ತದೆ.

ನ್ಯಾಯಕ್ಕಾಗಿ ಹೋರಾಡಿದ ಬುದ್ಧಿಜೀವಿಯ ಬದುಕು ಇಷ್ಟೊಂದು ಕಹಿಯಾದದ್ದು ಅತ್ಯಂತ ದುಃಖಕರ ಸಂಗತಿ. ಚಿತ್ರಹಿಂಸೆಯನ್ನು ಎದುರಿಸುವ ಸಾಯಿಬಾಬಾರವರ ಧೈರ್ಯ ಮತ್ತು ಅವರ ತತ್ವಗಳಲ್ಲಿ ದೃಢತೆ ಶ್ಲಾಘನೀಯವಾದುದು. ಅವರ ಸಾವಿನ ಸಂಪೂರ್ಣ ಹೊಣೆಯನ್ನು ಮೋದಿ ಸರ್ಕಾರ ಹೊರಬೇಕು.

ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮೋದಿ ಸರ್ಕಾರವು ಮಾತನಾಡುವುದೆಲ್ಲವೂ ಕೇವಲ ಬೊಗಳೆ ಮಾತುಗಳು ಎಂಬುದನ್ನು ಸಾಯಿಬಾಬಾರವರ ಜೀವನ ಮತ್ತು ಮರಣವು ನಮಗೆ ಸ್ಪಷ್ಟವಾಗಿ ತೋರಿಸುತ್ತದೆ. ಅಂತರಾಷ್ಟ್ರೀಯ ಒಪ್ಪಂದಗಳು ಮತ್ತು ದೇಶೀಯ ಕಾನೂನುಗಳನ್ನು ➚

ನಿನಗಾಗಿ ಕಾಯುವುದು ಎಷ್ಟು ಚಂದ

-ಜಿ.ಎನ್. ಸಾಯಿಬಾಬಾ

(ಕಾರಿರುಳಿನ ಕಗ್ಗತ್ತಲಿನಲ್ಲೂ ಖಾತರಿ ಮುಂಜಾವಿನ ಬಗ್ಗೆ ಕ್ರಾಂತಿಕಾರಿ ಆಶಾವಾದ ಬಿತ್ತುವ ಪ್ರೊ. ಜಿ. ಎನ್. ಸಾಯಿಬಾಬಾ ಅವರ ಮತ್ತೊಂದು ಕವನ)

ನಿನಗಾಗಿ ಕಾಯುವುದು ಎಷ್ಟು ಚಂದ
ಬಣಗುಟ್ಟುವ ದಿನಗಳ
ಮತ್ತು
ಬರಿದಾದ ರಾತ್ರಿಗಳ ನಡುವೆ..

ನಿನಗಾಗಿ ಕಾಯುವದು ಎಷ್ಟು ಚಂದ ..
ಅಸಹಜ ಸಾವುಗಳ
ಮತ್ತು
ಜೀವಂತ ಪ್ರಜಾತಂತ್ರದ
ನಿರ್ದಯೀ ಯುದ್ಧಗಳ
ನಡುವೆ ಕಂಗೆಟ್ಟು ಕೂತಿರುವಾಗ ..

ನಿನಗಾಗಿ ಕಾಯುವದು ಎಷ್ಟು ಚಂದ....
ಸೆರೆಮನೆಯ ಈ ಸರಳುಗಳ
ಅನುದಿನದ ಅನುಬಂಧಗಳನ್ನು

ಸಾಮಾಜಿಕ ಸಂಬಂಧಗಳನ್ನು ನಿರ್ಬಂಧಿಸಿವೆ
ಹೃದಯದ ಭಾಷೆಗೆ ನಿಷೇಧ ಹೇರಿ
ಪ್ರೀತಿಯನ್ನು ಬಹಿಷ್ಕರಿಸಿವೆ

ಕಂಡೂ ಕಾಣಿಸದ ಗಾಜಿನ
ಕಿಟಕಿಯ ಎದುರುಬದಿ
ನೀನು ನಿಂತಿದ್ದೀ.. .

ಹಿಂದಿರುವ ಹೆಣ್ಣು ಪೊಲೀಸು
"ಹಿಂದಿಯಲ್ಲೇ ಮಾತಾಡಬೇಕು"
ಎಂದು ಘರ್ಜಿಸುತ್ತಾಳೆ ..

ನನ್ನೆದೆಯ ಮಾತುಗಳು ಇಂಗುತ್ತವೆ ..
ಪ್ರೀತೀ ಮತ್ತು ಏಕಾಂತದ
ಭಾಷೆಯೇ ಮರೆತುಹೋದಂತೆ ಭಾಸವಾಗುತ್ತಿದೆ

ಆಳೆತ್ತರದ ಈ ಗೋಡೆಗಳು ದಿಢೀರನೆ
ಅಪರಿಚಿತರನ್ನಾಗಿಸಿವೆ ನಮ್ಮಿಬ್ಬರನ್ನು ..

ಕಣ್ಣುಕಿವಿಗಳಿರುವ ಕಿಟಕಿಗಳು..
ತಲೆಯ ಮೇಲೊಂದು ತೂಗುಕತ್ತಿ..
ಬೆನ್ನ ಹಿಂದಿರುವ ತಿವಿವ ಭರ್ಜಿ..ಗಳೆದುರು

ಜೀವವಿರುವ ಮಾತುಗಳು ಸಾಧ್ಯವೇ?
ಹೃದಯಗಳು ಹೆಪ್ಪುಗಟ್ಟುತ್ತವೆ ..
ನನಗೆ ಗೊತ್ತು..

ಬಂಧನದಲ್ಲಿ ಬೆಂದಿರುವ ಜೀವಕ್ಕೆ
ಒಂದೆರೆಡು ಸಿಹಿಮಾತುಗಳ
ಸಿಂಚನ ಮಾಡಲೆಂದೇ
ಸಾವಿರ ಮೈಲುಗಳ ದೂರದಿಂದ
ದಣಿವರಿಯದೆ ಬಂದಿರುವೆ ನೀನು ..

ನಮಗೆ ಕರುಣಿಸಲಾದ ಕೆಲವು ನಿಮಿಷಗಳಲ್ಲಿ
ಹಲವು ಕ್ಷಣಗಳು
ದಿಗ್ಭ್ರಾಂತ ಮೌನದಲ್ಲಿ
ಕಳೆದುಹೋಗುತ್ತವೆ ..

ಈ ಸರಳುಗಳ ಹಿಂದೆ
ನಾನು ಬಲು ಬೇಗ ಮುದುಕನಾಗುತ್ತಿದ್ದರೂ..

ನನ್ನೆದೆಯೊಳಗಿನ ನಿನ್ನ ನಗೆಮೊಗಕೆ
ಸದಾ ಆತುಕೊಂಡಿರುತ್ತೇನೆ...

ಜೀವಂತವಾಗುಳಿಯಲು,
ಈ ವಿಚಿತ್ರಕಾಲದ
ಸವಾಲಿನೆದುರು
ಸಾಧ್ಯವಿರುವಷ್ಟು ಮನುಷ್ಯನಾಗುಳಿಯಲು..

ನಿಜ
ಕಾದೂ ಕಾದೂ ಕಾಣುವ
ಪ್ರತಿಭೇಟಿಯ ನಂತರವೂ
ಇಬ್ಬರ ಎದೆಗಳೂ
ಪ್ರಕ್ಷುಬ್ಧ ಕಡಲಾಗುತ್ತದೆ ..

ಆದರೇನಂತೆ ..
ನಜೀಮ್ ಹಿಕ್ಮತ್ ಹೇಳುವಂತೆ :

"ಬದುಕಬೇಕು ಭರವಸೆಗಾಗಿ,
ನನ್ನೊಲವೆ,
ಬದುಕೆಂಬುದು ಒಂದು ಗಂಭೀರವಾದ ವಿಷಯ
ನನ್ನ ನಿನ್ನ ಒಲವಿನಂತೆ"

ಇಂಗ್ಲೀಷ್ ಮೂಲ: **ಜಿ.ಎನ್. ಸಾಯಿಬಾಬಾ**
ಕನ್ನಡಕ್ಕೆ: **ಶಿವಸುಂದರ್**

ಸಿಪಿಐ(ಎಂ) ಸಂತಾಪ

ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸಾಯಿಬಾಬಾ ಅವರ ನಿಧನಕ್ಕೆ ಸಂತಾಪ ಸೂಚಿಸಿದೆ. ಕೇಂದ್ರ ಸಮಿತಿ ಬಿಡುಗಡೆ ಮಾಡಿರುವ ಸಂದೇಶದಲ್ಲಿ, "ಮೋದಿ ಸರಕಾರದ ದಮನಕಾರಿ ನೀತಿಗೆ ಗುರಿಯಾಗಿ ಪ್ರೊ.ಜಿ.ಎನ್. ಸಾಯಿಬಾಬಾರವರ ನಿಧನಕ್ಕೆ ತೀವ್ರ ಸಂತಾಪಗಳು. ಜಿಎನ್ ಸಾಯಿಬಾಬಾ ಅವರಿಗೆ ಹಲವು ವರ್ಷಗಳ ಕಾಲ ಜಾಮೀನು ನಿರಾಕರಿಸಲಾಗಿತ್ತು, ತೀವ್ರ ವೈದ್ಯಕೀಯ ವಿಕಲಾಂಗ ವ್ಯಕ್ತಿಗೆ ತುರ್ತು ವೈದ್ಯಕೀಯ ಆರೈಕೆಯನ್ನು ನಿರಾಕರಿಸಲಾಯಿತು. ಚಿತ್ರಹಿಂಸೆಯನ್ನು ಧೈರ್ಯವಾಗಿ ಎದುರಿಸಲು ಮತ್ತು ನ್ಯಾಯಕ್ಕಾಗಿ ಹೋರಾಡಲು ಮೀಸಲಾದ ಜೀವನ ಅವರದು. ಅವರ ಸಾವಿಗೆ ಮೋದಿ ಸರಕಾರವೇ ಸಂಪೂರ್ಣ ಹೊಣೆ. ತನಗಾದ ಅನ್ಯಾಯದ ವಿರುದ್ಧ ಕೋಪ ಮತ್ತು ದುಃಖದಲ್ಲಿ ನ್ಯಾಯಕ್ಕಾಗಿ ಹೋರಾಡಿದ ಈ ವೀರ ಹೋರಾಟಗಾರನಿಗೆ ನಾವು ಗೌರವ ಸಲ್ಲಿಸುತ್ತೇವೆ. ಅವರ ಪತ್ನಿ ವಸಂತಾ ಮತ್ತು ಮಗಳು ಮಂಜೀರಾ ಅವರಿಗೂ ನಾವು ಸಾಂತ್ವನ ಹೇಳುತ್ತೇವೆ ಎಂದು ಸಿಪಿಐ(ಎಂ) ಹೇಳಿದೆ.

ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ನಿಲ್ಲಿಸಿ



ಪ್ರಕಾಶ್ ಕಾರತ್

ಬಿಜೆಪಿಯ 'ಬೇಟಿ ಬಚಾವೋ' (ಹೆಣ್ಣು ಮಕ್ಕಳನ್ನು ರಕ್ಷಿಸಿ) ಘೋಷಣೆಯ ವಿಡಂಬನೆ ಎನ್ನುವ ರೀತಿಯಲ್ಲಿ ಕಳೆದ ಕೆಲವು ತಿಂಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಕಳವಳಕಾರಿ ಪ್ರಮಾಣದಲ್ಲಿ ಭಯಾನಕ ಹಿಂಸಾಚಾರಗಳು ಹೆಚ್ಚುತ್ತಿವೆ. ಅವುಗಳಲ್ಲಿ ಅನೇಕ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ಸೇರಿವೆ. ಭಾರತದಲ್ಲಿ ಇಂದು ಪ್ರತಿದಿನ 86ಕ್ಕೂ ಹೆಚ್ಚು ಅತ್ಯಾಚಾರ ಪ್ರಕರಣಗಳು ನಡೆಯುತ್ತಿದ್ದು, ಪ್ರತಿ ಒಂದು ಗಂಟೆಗೆ ಮಹಿಳೆಯರ ವಿರುದ್ಧದ ಕನಿಷ್ಠ 49 ಅಪರಾಧಗಳು ನಡೆಯುತ್ತಿವೆ. ಬಹುತೇಕ ಪ್ರಕರಣಗಳು ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಬಿಹಾರದಲ್ಲಿ ನಡೆಯುತ್ತಿವೆ. ಟಿಎಂಸಿ ಆಡಳಿತದ ಪಶ್ಚಿಮ ಬಂಗಾಳದಲ್ಲಿ ಮಹಿಳೆಯರು ಮತ್ತು ಅಪ್ರಾಪ್ತರ ಮೇಲೆ ಭಯಾನಕ ದೌರ್ಜನ್ಯಗಳು ನಡೆದಿರುವುದನ್ನು ಕಂಡಿದ್ದೇವೆ. ಎನ್‌ಡಿಎ ಭಾಗವಾಗಿರುವ ಪ್ರಬಲ ರಾಜಕೀಯ ಪಕ್ಷವೊಂದಕ್ಕೆ ಸೇರಿದ್ದು, ಕಳೆದ ಲೋಕಸಭೆ ಚುನಾವಣೆಯಲ್ಲಿ ಸೋತ ಕರ್ನಾಟಕದ ಸಂಸತ್ ಸದಸ್ಯರೊಬ್ಬರು ನೂರಾರು ಮಹಿಳೆಯರ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ನಡೆಸಿ, ಅವುಗಳನ್ನು ಚಿತ್ರೀಕರಿಸಿ ಮೊಬೈಲ್ ಫೋನ್‌ನಲ್ಲಿ ಸೇವ್ ಮಾಡಿಕೊಂಡಿದ್ದಾರೆ. ಬಹಳಷ್ಟು ಸಂತ್ರಸ್ತರು ಅವರದೇ ಪಕ್ಷದವರಾಗಿದ್ದಾರೆ.

ಈ ಘಟನೆಗಳ ಬಗ್ಗೆ ಕೆಲವು ಕಡೆಗಳಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದೆ. ಆದರೆ ದುರದೃಷ್ಟವಶಾತ್ ಅವುಗಳು ಹೆಚ್ಚು ಪರಿಣಾಮ ಬೀರಿಲ್ಲ. ಪಶ್ಚಿಮ ಬಂಗಾಳದ ಸರಕಾರಿ ಆಸ್ಪತ್ರೆಗಳ ವೈದ್ಯರು ನಡೆಸುತ್ತಿರುವ ಪ್ರತಿಭಟನೆಗೆ ಅಭೂತಪೂರ್ವ ರೀತಿಯಲ್ಲಿ ಬೆಂಬಲ ಹರಿದು ಬರುತ್ತಿರುವುದು ಇದಕ್ಕೆ ಒಂದು ಮಹತ್ವದ ಅಪವಾದವಾಗಿದೆ. ಪಶ್ಚಿಮ ಬಂಗಾಳದ ಪ್ರತಿಭಟನೆಯು ಒಂದು ಜನಾಂದೋಲನವಾಗಿ ರೂಪುಗೊಳ್ಳುತ್ತಿದ್ದು, ಸರಕಾರ ಮತ್ತು ಕ್ರಿಮಿನಲ್‌ಗಳಿಗೆ ಪ್ರೋತ್ಸಾಹ ಹಾಗೂ ರಕ್ಷಣೆ ನೀಡುವಲ್ಲಿ ಅದರ ಪಾತ್ರವನ್ನು ಬಯಲು ಮಾಡಿದೆ ಮಾತ್ರವಲ್ಲದೆ ನ್ಯಾಯದ ಮುಂದಿರುವ ಅಡೆತಡೆಗಳನ್ನು ನಿವಾರಿಸುವುದನ್ನು ಅದು ಖಾತರಿಪಡಿಸಲು ಪ್ರಯತ್ನಿಸಿದೆ. ಇತರ ರಾಜ್ಯಗಳಲ್ಲಿ ನಮ್ಮ ಸಂಗಾತಿಗಳು ಅದರಿಂದ ಕಲಿಯಬೇಕಾದ ಪಾಠ ಬಹಳಷ್ಟಿದೆ.

ವಿವಿಧ ರಾಜ್ಯಗಳಲ್ಲಿನ ಪ್ರಕರಣಗಳಲ್ಲಿ ಸಮಾನವೆನಿಸುವ ಅನೇಕ ಅಂಶಗಳಿವೆ. ಬಹುತೇಕ ಪ್ರಕರಣಗಳಲ್ಲಿ, ಸಂತ್ರಸ್ತರು ಅಥವಾ ಅವರ ಕುಟುಂಬಗಳ ಸದಸ್ಯರು ನ್ಯಾಯಕ್ಕಾಗಿ ನಡೆಸುವ ಹೋರಾಟದಲ್ಲಿ ಪೊಲೀಸರು ಅಡ್ಡಿಯಾಗಿರುವುದು ಕಂಡು ಬರುತ್ತದೆ. ಕಿರುಕುಳ ಮಾತ್ರವೇಕೆ ಅತ್ಯಾಚಾರದ ಕೇಸ್‌ಗಳಲ್ಲಿ ಕೂಡ ಸಂತ್ರಸ್ತರ ದೂರುಗಳನ್ನು ಆಲಿಸಲೂ ಪೊಲೀಸರು ನಿರಾಕರಿಸಿದ ಪ್ರಕರಣಗಳು ಒಂದರ ಮೇಲೊಂದು ವರದಿಯಾಗುತ್ತಿವೆ. ಇದು ಅನೇಕ ಸಂದರ್ಭಗಳಲ್ಲಿ ದುಷ್ಕರ್ಮಿಗಳು ಹಿಂಸಾಚಾರ, ಅತ್ಯಾಚಾರ ಮತ್ತು ಕೊಲೆ ಕೂಡ ಮಾಡಲು ಪ್ರೋತ್ಸಾಹ ನೀಡಿದಂತೆ ಆಗಿದೆ.

ಆರೋಪಿ ಅಥವಾ ಆರೋಪಿಗಳು ಆಳುವ ಪಕ್ಷಗಳ ಬೆಂಬಲಿಗರು ಎಂದು ಕಂಡು ಬಂದಲ್ಲಿ, ರಾಜ್ಯ ಸರಕಾರಗಳು ಆರೋಪಿಗಳಿಗೆ ರಕ್ಷಣೆ ನೀಡುವುದು ಇನ್ನೊಂದು ಸಮಾನ ಅಂಶವಾಗಿದೆ. ಇದು ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಸರ್ವೇಸಾಮಾನ್ಯವಾಗಿದೆ. ಉತ್ತರ ಪ್ರದೇಶದಲ್ಲಿ ಅಪ್ರಾಪ್ತೆಯ ಮೇಲೆ ಅತ್ಯಾಚಾರ ನಡೆಸಿದ ಆರೋಪಿಯಾದ ಬಿಜೆಪಿ ಶಾಸಕನನ್ನು ಹೈ ಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಿದ ನಂತರವಷ್ಟೇ ಬಂಧಿಸಿ ವಿಚಾರಣೆಗೆ ಒಳಪಡಿಸಿ ಶಿಕ್ಷೆ ನೀಡಲಾಗಿದೆ. ತೀರಾ ಇತ್ತೀಚೆಗೆ, ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು) ವಿದ್ಯಾರ್ಥಿನಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಬಿಜೆಪಿ ಮೀಡಿಯಾ ಸೆಲ್‌ನ ಮೂವರು ನಾಯಕರನ್ನು ವಿದ್ಯಾರ್ಥಿಗಳ ತೀವ್ರ ಪ್ರತಿಭಟನೆ ನಂತರವಷ್ಟೇ ಬಂಧಿಸಲಾಗಿತ್ತು. ಆದರೆ ಕೆಲವು ತಿಂಗಳ ನಂತರ ಅವರನ್ನು ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದ್ದು, ಪ್ರತಿಭಟನೆ ನಿರತ ವಿದ್ಯಾರ್ಥಿಗಳನ್ನು ಅಮಾನತು ಮಾಡಲಾಗಿದ್ದು ಹೊರ ಹಾಕಲಾಗುವ ಭೀತಿ ಎದುರಿಸುತ್ತಿದ್ದಾರೆ.

ಕುಖ್ಯಾತ ಬಿಲ್ಕಿಸ್ ಬಾನೋ ಪ್ರಕರಣದಲ್ಲಿ ಗ್ಯಾಂಗ್ ರೇಪ್ ಮತ್ತು ಕೊಲೆಗೆ ಶಿಕ್ಷೆಗೆ ಒಳಗಾದವರಿಗೆ ಪದೇ ಪದೇ ಪೆರೋಲ್ ನೀಡಿದ್ದಲ್ಲದೆ, ಕೊನೆಗೆ ಅವರ ಶಿಕ್ಷೆಯನ್ನು ಕಡಿತಗೊಳಿಸಿ ಬಿಡುಗಡೆ ಆಗುವಲ್ಲಿ ಗುಜರಾತ್ ಮತ್ತು ಕೇಂದ್ರ ಸರಕಾರದ ಪಾತ್ರ ಎಲ್ಲರಿಗೂ ತಿಳಿದಿರುವಂಥದ್ದೇ ಆಗಿದೆ. ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿರುವ ಬಾಬಾ ರಾಮ್ ರಹೀಮ್ ವಿವಿಧ ಚುನಾವಣೆಗಳಲ್ಲಿ ಬಿಜೆಪಿ ಪರ ಪ್ರಚಾರ ನಡೆಸಲು ಅನುಕೂಲವಾಗುವಂತೆ ಹರ್ಯಾಣದ ಬಿಜೆಪಿ ಸರಕಾರ ಪದೇ ಪದೇ ಆತನಿಗೆ ಪೆರೋಲ್ ನೀಡುತ್ತಿದೆ.

ಇಂಥ ಅನೇಕ ಪ್ರಕರಣಗಳನ್ನು ಬೆಳಕಿಗೆ ತರುವಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವ ಮಾಧ್ಯಮ ಕೂಡ ಅಸಂವೇದನಾಶೀಲ, ಸೆಕ್ಸಿಸ್ಟ್ ಮತ್ತು ಅವಮಾನಕಾರಿ ಭಾಷೆ ಬಳಸುವಲ್ಲಿ ಅಪರಾಧಿಯೂ ಆಗಿದೆ. ಸಂತ್ರಸ್ತರು ಅಥವಾ ಬದುಕುಳಿದವರೇ ಆ ಹಿಂಸಾಚಾರಕ್ಕೆ ಕಾರಣೀಕರ್ತರು ಎಂದು ಕೂಡ ಮಾಧ್ಯಮ ಬಿಂಬಿಸುತ್ತದೆ. ಚುನಾಯಿತ ಪ್ರತಿನಿಧಿಗಳು, ಸರಕಾರದ ಪ್ರತಿನಿಧಿಗಳು ಮತ್ತು ಪೊಲೀಸರು ಹಾಗೂ ಆಡಳಿತದ ಪ್ರತಿನಿಧಿಗಳ ಸಹಿತ ಸಾರ್ವಜನಿಕ ಜೀವನದಲ್ಲಿರುವ ವಿವಿಧ ಜನರ ಪ್ರತಿಕ್ರಿಯೆ ಅಥವಾ ಹೇಳಿಕೆಗಳನ್ನು ವರದಿ ಮಾಡುವ ಮೂಲಕ ಮಾಧ್ಯಮಗಳು ಹೀಗೆ ಮಾಡುತ್ತಿವೆ.

ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಹೆಚ್ಚುತ್ತಿರುವ ಹಿಂಸಾಚಾರದ ವಿರುದ್ಧ ಹೋರಾಡುವ ನಿಟ್ಟಿನಲ್ಲಿ, ಸೆಪ್ಟೆಂಬರ್‌ನಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಈ ವಿಚಾರದಲ್ಲಿ ಪ್ರಚಾರಾಂದೋಲನ ನಡೆಸುವಂತೆ ಪಕ್ಷದ ಎಲ್ಲ ಸಮಿತಿಗಳಿಗೆ ಕರೆ ನೀಡಿತ್ತು. ದೌರ್ಜನ್ಯಗಳ ಮೇಲೆ ಗಮನ ಕೇಂದ್ರೀಕರಿಸುವುದು ಮಾತ್ರವಲ್ಲದೆ, ಈ ಆಂದೋಲನವು ಕರ್ತವ್ಯಲೋಪವೆಸಗಿದ ಪೊಲೀಸ್ ಮತ್ತು ಆಡಳಿತಾತ್ಮಕ ಸಿಬ್ಬಂದಿಗೆ ಶಿಕ್ಷೆ ಮುಂತಾದ ಪ್ರಮುಖ ಬೇಡಿಕೆಗಳನ್ನು ಕೂಡ ಪ್ರಚಾರಾಂದೋಲನ ಕೈಗೆತ್ತಿಕೊಳ್ಳಬೇಕು. ಯಾವುದೇ ರಾಜ್ಯ ಸರಕಾರವು ಆರೋಪಿಯನ್ನು ರಕ್ಷಿಸುತ್ತಿದೆ ಎಂದು ಕಂಡು ಬಂದಲ್ಲಿ ಅದನ್ನು ಬಯಲು ಮಾಡಬೇಕು ಹಾಗೂ ಇಂಥ ಪ್ರಕರಣಗಳನ್ನು ವರದಿ ಮಾಡುವ ಮಾಧ್ಯಮದ ಮೇಲೆ ಕಟ್ಟುನಿಟ್ಟಿನ ಕಣ್ಗಾವಲು ಇಡಬೇಕು. ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳು ಬದುಕುಳಿದವರು ಮತ್ತು ಸಂತ್ರಸ್ತರಿಗೆ ಬೆಂಬಲ ಹಾಗೂ ಕಾನೂನು ನೆರವು ಒದಗಿಸಬೇಕು ಮತ್ತು ನ್ಯಾಯ ಸಿಗುವುದನ್ನು ಖಾತರಿಪಡಿಸಲು ಪ್ರಯತ್ನಿಸಬೇಕು.

ಅನು: ವಿಶ್ವ

↘ಉಲ್ಲಂಘಿಸಿ ಅಂಗವಿಕಲ ವ್ಯಕ್ತಿಯನ್ನು ಕ್ರೂರವಾಗಿ ನಡೆಸಿಕೊಂಡ ಸರ್ಕಾರವು ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ.

ಈ ಸರ್ಕಾರದ ಅಡಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದು ಕೇವಲ ಕಲ್ಪನೆಯಾಗಿಬಿಟ್ಟಿದೆ. ಎಲ್ಲಾ ಭಿನ್ನಮತೀಯರನ್ನು ದೇಶದ್ರೋಹಿಗಳೆಂದು ಪರಿಗಣಿಸಲಾಗುತ್ತದೆ. ಅವರ ಮೇಲೆ ಸುಳ್ಳು ಆರೋಪ ಹೊರಿಸಿ ಜೈಲಿಗಟ್ಟಲಾಗಿದೆ. ಸಾಯಿಬಾಬಾ, ವರವರ ರಾವ್, ಸುಧಾ ಭಾರದ್ವಾಜ್ ಅವರಂತಹ ಬುದ್ಧಿಜೀವಿಗಳ ಜೀವನವೇ ಇದಕ್ಕೆ ಸಾಕ್ಷಿ.

ಸಾಯಿಬಾಬಾರವರ ಸಾವು ನಮ್ಮೆಲ್ಲರನ್ನೂ ಚಿಂತನೆಗೆ ಹಚ್ಚಬೇಕು. ಮೋದಿ ಆಡಳಿತದ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಬೇಕು. ಈ ಸರ್ಕಾರದ ನೀತಿಗಳು ಬದಲಾಗಬೇಕು. ಮಾನವ ಹಕ್ಕುಗಳನ್ನು ಗೌರವಿಸಬೇಕು. ವಿಕಲಚೇತನರ ಹಕ್ಕುಗಳನ್ನು ರಕ್ಷಿಸಬೇಕು. ನ್ಯಾಯಾಂಗ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು. ಇಲ್ಲದಿದ್ದರೆ, ಭಾರತದ ಪ್ರಜಾಪ್ರಭುತ್ವವು ಕೇವಲ ನಾಮಮಾತ್ರವಾಗಿ ಉಳಿಯುತ್ತದೆ. ಪರ್ಯಾಯ ದೃಷ್ಟಿಕೋನ ಹೊಂದಿರುವವರನ್ನು ಹತ್ತಿಕ್ಕುವ ಬದಲು ಸಂವಾದದಲ್ಲಿ ತೊಡಗುವಂತಾಗಬೇಕು. ಹಾಗಾದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಬೆಳೆಯುತ್ತದೆ. ❍

ಜಿ.ಎನ್.ಸಾಯಿಬಾಬಾರವರ ಸಾವು ನಮ್ಮ ಅಪರಾಧ-ನ್ಯಾಯ ವ್ಯವಸ್ಥೆಯ ಮೇಲೊಂದು ಖೇದಕಾರಿ ಟಿಪ್ಪಣಿ-ಎನ್‌ಪಿಆರ್‌ಡಿ

ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಅಕ್ಟೋಬರ್ 13 ರಂದು ಒಂದು ಹೇಳಿಕೆ ನೀಡಿ ಡಾ. ಜಿ.ಎನ್.ಸಾಯಿಬಾಬಾರವರ ಅಕಾಲಿಕ ಮರಣಕ್ಕೆ ಆಳವಾದ ಆಘಾತ ಮತ್ತು ವೇದನೆ ವ್ಯಕ್ತಪಡಿಸುವುದಾಗಿ ಹೇಳಿದೆ.

ಹತ್ತು ವರ್ಷಗಳ ದೀರ್ಘ ಕಾಲ ಜೈಲಿನಲ್ಲಿಟ್ಟಿದ್ದ ಅವರನ್ನು ಕೆಲವೇ ತಿಂಗಳುಗಳ ಹಿಂದೆಯಷ್ಟೇ ಬಿಡುಗಡೆ ಮಾಡಲಾಗಿತ್ತು. ಅವರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲಾಗಿತ್ತು, ಇವುಗಳ ವಿರುದ್ಧ ಅವರು ಸತತವಾಗಿ ಕಾನೂನು ಹೋರಾಟ ನಡೆಸಬೇಕಾಯಿತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಅವರನ್ನು ಖುಲಾಸೆ ಮಾಡಿತು. ದುರದೃಷ್ಟವಶಾತ್, ಇದು ಅಲ್ಪಾವಧಿಯ ಸ್ವಾತಂತ್ರ್ಯವಾಯಿತು ಎಂದು ಎನ್‌ಪಿಆರ್‌ಡಿ ಖೇದ ವ್ಯಕ್ತಪಡಿಸಿದೆ.

ವಿಕಲಾಂಗರಾಗಿದ್ದ ಸಾಯಿಬಾಬಾರವರಿಗೆ ಆರೋಗ್ಯದ ಸಮಸ್ಯೆಗಳಿದ್ದವು. ಸುದೀರ್ಘ ಸೆರೆವಾಸದಿಂದಾಗಿ ಈ ಸಮಸ್ಯೆಗಳಲ್ಲಿ ಕೆಲವು ಸಂಕೀರ್ಣಗೊಂಡವು ಮತ್ತು ಹೊಸ ಸಮಸ್ಯೆಗಳು ಸೇರಿಕೊಂಡವು. ಪೋಲಿಯೊ ಅವರ ಎರಡೂ ಕಾಲುಗಳ ಮೇಲೆ ಪರಿಣಾಮ ಬೀರಿತ್ತಲ್ಲದೆ, ಬೆನ್ನುಮೂಳೆಯ ಮತ್ತು ನರ ವ್ಯವಸ್ಥೆಯ ಹೆಚ್ಚುತ್ತ ಹೋಗುವ ಗುಣಪಡಿಸಲಾಗದ ಪರಿಸ್ಥಿತಿಗಳು ಇದ್ದವು. ಅವರ ಒಂದು ತೋಳು ಪೋಲೀಸರು ಬಂಧಿಸುವ ವೇಳೆಯಲ್ಲಿ ಉಂಟುಮಾಡಿದ ಗಾಯಗಳಿಂದಾಗಿ ಕೆಲಸ ಮಾಡುವುದನ್ನು ನಿಲ್ಲಿಸಿತ್ತು, ಇನ್ನೊಂದು ಅವರನ್ನು ನಾಗ್ಪುರ ಜೈಲಿನಲ್ಲಿ ಕುಖ್ಯಾತ ಅಂಡಾ ಸೆಲ್‌ನಲ್ಲಿ ಅನಾರೋಗ್ಯಕರ ಸ್ಥಿತಿಯಲ್ಲಿ ಇರಿಸಿದ್ದಾಗ ಸೂಕ್ತ ವೈದ್ಯಕೀಯ ಶುಶ್ರೂಷೆಯನ್ನು ನಿರಾಕರಿಸಿದ್ದರಿಂದಾಗಿ ಕೆಲಸ ಮಾಡುತ್ತಿರಲಿಲ್ಲ.

ಫೆಬ್ರವರಿ 2017ರಲ್ಲಿ, ಜಾಮೀನಿನ ಮೇಲಿದ್ದ ಸಮಯದಲ್ಲಿ ದೆಹಲಿಯ ಆಸ್ಪತ್ರೆಯಲ್ಲಿದ್ದಾಗ ಅವರು ತೀವ್ರವಾದ ಪ್ಯಾಂಕ್ರಿಯಾಟೈಟಿಸ್ (ಮೇದೋಜೀರಕ ಗ್ರಂಥಿಯ ಕಾಯಿಲೆ)ನಿಂದ ನರಳುತ್ತಿದ್ದಾಗ, ಅದು ಪಿತ್ತಕೋಶದ ಕಲ್ಲುಗಳನ್ನು ತಟ್ಟಿದೆ ಎಂದು ಪತ್ತೆಯಾಯಿತು. ಅದಕ್ಕಾಗಿ ತಕ್ಷಣ ಶಸ್ತ್ರಚಿಕಿತ್ಸೆಗೊಳಗಾಗಬೇಕು ಎಂದು ಸಲಹೆ ನೀಡಲಾಯಿತು. ಅವರು ಪಿತ್ತಕೋಶದ ಕಲ್ಲುಗಳ ಶಸ್ತ್ರಚಿಕಿತ್ಸೆ ಮತ್ತು ಶುಶ್ರೂಷೆ ಪಡೆಯಲು ಜಾಮೀನು ಅಥವ ಪೆರೋಲ್ ಕೊಡಬೇಕೆಂದು ಮತ್ತೆ-ಮತ್ತೆ ಮನವಿ ಮಾಡಿಕೊಂಡರೂ ಅದನ್ನು ನಿರಾಕರಿಸಲಾಯಿತು ಎಂದಿರುವ ಎನ್‌ಪಿಆರ್‌ಡಿ, ಕಡು ಅಪರಾಧಿಗಳು, ಕೊಲೆಗಡುಕರು ಮತ್ತು ಅತ್ಯಾಚಾರಿಗಳಿಗೂ ಜಾಮೀನು ಅಥವ ಪೆರೋಲ್ ನೀಡುತ್ತಿರುವಾಗ ಇವರಿಗೆ ನಿರಾಕರಿಸಿರುವುದು ನಮ್ಮ ಅಪರಾಧ ನ್ಯಾಯ ವ್ಯವಸ್ಥೆಯ ಬಗ್ಗೆ ಒಂದು ಬೇಸರ ಉಂಟುಮಾಡುವ ವ್ಯಾಖ್ಯಾನ ಎಂದು ಟಿಪ್ಪಣಿ ಮಾಡುತ್ತ, ಸ್ಟಾನ್ ಸ್ವಾಮಿ ಕಸ್ಟಡಿಯಲ್ಲಿದ್ದಾಗಲೇ ನಿಧನರಾದರು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ ಎಂದಿದೆ.

ಎನ್‌ಪಿಆರ್‌ಡಿ ಅವರ ಬಂಧನವನ್ನು ಮತ್ತು ಅವರನ್ನು ಯಾವ ಸ್ಥಿತಿಯಲ್ಲಿ ಜೈಲಿನಲ್ಲಿ ಇರಿಸಲಾಗಿದೆ ಎಂಬುದನ್ನು ವಿರೋಧಿಸಿ ಮತ್ತೆ-ಮತ್ತೆ ಪ್ರತಿಭಟನೆ ಮಾಡಿದೆ, ಹೀಗೆ ಇರಿಸುವುದು ಹೇಗೆ ಅವರ ಬದುಕಿನ, ಘನತೆಯ ಮತ್ತು ಚಿತ್ರಹಿಂಸೆಯಿಂದ, ಪುಟ 10 ಕ್ಕೆ

ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಿಗೆ ಮುಕ್ತ ಮತ್ತು ನ್ಯಾಯಸಮ್ಮತವಾದ ಚುನಾವಣೆಗಳನ್ನು ಸಮತಟ್ಟಾದ ಆಧಾರದಲ್ಲಿ ನಡೆಸುವುದು ನಮ್ಮ ಪ್ರಜಾಸತ್ತಾತ್ಮಕ ಚೌಕಟ್ಟಿನ ಮೂಲಾಧಾರವಾಗಿದೆ. ಒಂದು ರಾಷ್ಟ್ರ, ಒಂದು ಚುನಾವಣೆ ಎಂಬ ಪರಿಕಲ್ಪನೆಯು ಈ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತದೆ. ಏಕೆಂದರೆ ಇದು ಸಾಂವಿಧಾನಿಕವಾಗಿ ಸ್ಥಾಪಿತವಾದ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರದ ವಿಕೇಂದ್ರೀಕರಣವನ್ನು ನಿರ್ಲಕ್ಷಿಸುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಒಮ್ಮೆಲೆ 'ಒಂದು ರಾಷ್ಟ್ರ, ಒಂದು ಚುನಾವಣೆ'ಯ ಕಲ್ಪನೆಯು ತೀವ್ರವಾದ ಕೇಂದ್ರೀಕರಣವನ್ನು ಪ್ರತಿಪಾದಿಸುತ್ತದೆ. ಇದು ಸಂವಿಧಾನದಲ್ಲಿ ಪ್ರತಿಪಾದಿಸಿರುವ ಒಕ್ಕೂಟ ಪ್ರಭುತ್ವ ಸ್ವರೂಪಕ್ಕೆ ಮತ್ತು ಆಡಳಿತ ಅಧಿಕಾರಗಳ ಸೂಕ್ಷ್ಮ ವಿಕೇಂದ್ರೀಕರಣಕ್ಕೆ ಬೆದರಿಕೆ ಉಂಟುಮಾಡುತ್ತದೆ.

ನಿಲೋತ್ಪಲ್ ಬಸು

ಒಂದು ರಾಷ್ಟ್ರ ಒಂದು ಚುನಾವಣೆ: ಸಂವಿಧಾನವನ್ನು ಹಾಳು ಮಾಡುವ ಪಾಕ ವಿಧಾನ



ಇತ್ತೀಚಿನ ಚುನಾವಣಾ ಸಂದರ್ಭಗಳಲ್ಲಿ ಆಡಳಿತಾರೂಡ ಪಕ್ಷವಾದ ಬಿಜೆಪಿಯ ಭವಿಷ್ಯವು ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ, 'ಒಂದು ರಾಷ್ಟ್ರ, ಒಂದು ಚುನಾವಣೆ' (ONOE) ಘೋಷಣೆ ಹೊರಬಂದಿದೆ. ಇದರ ಮೊದಲ ನೋಟದ ಘೋಷವಾಕ್ಯ'ದಲ್ಲಿಯೇ ಮತ್ತೊಂದು 'ಜುಮ್ಲಾ' ಎಂಬ ಭಾವನೆಯನ್ನು ನೀಡುತ್ತದೆ. ಇದು ಬಿಜೆಪಿ ನೇತೃತ್ವದ ಆಡಳಿತವು ಒಂದು ರಾಷ್ಟ್ರ, ಒಂದು ತೆರಿಗೆ, ಒಂದು ರಾಷ್ಟ್ರ ಒಂದೇ ಭಾಷೆ, ಇತ್ಯಾದಿ ತನ್ನ ರಾಜಕೀಯ ಗುರುವಾದ ಆರ್‌ಎಸ್‌ಎಸ್ ನ ಘೋಷಣೆಗಳನ್ನು ಪ್ರತಿ ಧ್ವನಿಸುತ್ತದೆ. ಆದಾಗ್ಯೂ, ಇದು ಕೇವಲ ವಾಕ್ಚಾತುರ್ಯದ ನಿರರ್ಥಕ ಕಾರ್ಯವಿಧಾನದ ವ್ಯಾಯಮ ಇರಬಹುದೆಂದು ತಳ್ಳಿಹಾಕುವುದು ತಪ್ಪಾಗುತ್ತದೆ. ಇದು ವಾಸ್ತವವಾಗಿ, ಪ್ರಸ್ತುತ ಭಾರತೀಯ ಜನತೆಯನ್ನು ಬಾಧಿಸುತ್ತಿರುವ ಜೀವನೋಪಾಯ ಮತ್ತು ಬದುಕುಳಿಯುವಿಕೆಯ ನೈಜ ಸಮಸ್ಯೆಗಳಿಂದ ದಿಕ್ಕು ತಪ್ಪಿಸುವ ಹತಾಶ ಪ್ರಯತ್ನ ಇದಾಗಿದೆ.

ಇದು, ಸಾಮ್ರಾಜ್ಯಶಾಹಿ–ವಿರೋಧಿ ಸ್ವಾತಂತ್ರ್ಯ ಹೋರಾಟದ ನಂತರ ಹೊರಹೊಮ್ಮಿದ 'ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಗಣರಾಜ್ಯ'ವನ್ನು ಆಳವಾಗಿ ದ್ವೇಷಿಸುವ ದೃಷ್ಟಿಯಿಂದ ಹುಟ್ಟಿಕೊಂಡಿದೆ ಎಂಬ ಅಂಶವನ್ನು ಕಡೆಗಣಿಸುವಂತಿಲ್ಲ.

ದಕ್ಷಿಣ ಮತ್ತು ಉತ್ತರ ಭಾರತದ ಎರಡರಲ್ಲೂ ಹಲವಾರು ಭಾಷಾವಾರು ರಾಜ್ಯಗಳ ರಚನೆಗೆ ಕಾರಣವಾದ ರಾಜ್ಯಗಳ ಮರುಸಂಘಟನೆ ಕಾಯಿದೆಯನ್ನು ಅನುಸರಿಸಿ, ಭಾಷಾವಾರು ತತ್ವಗಳ ಮೇಲೆ ರಾಜ್ಯಗಳನ್ನು ಮರುಸಂಘಟಿಸುವ ಪ್ರಕ್ರಿಯೆಯ ಬಗೆಗಿನ ವಿರೋಧಾಭಾಸವನ್ನು ಇದು ಪ್ರತಿಬಿಂಬಿಸುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ, ಇದು ಭಾರತೀಯ ಜನರ ವೈವಿಧ್ಯತೆ ಭಾವನೆಗೆ ಸವಾಲೊಡ್ಡುವ ಸೂಕ್ಷ್ಮ ಪ್ರಯತ್ನವಾಗಿದೆ ಮತ್ತು ಆಡಳಿತದ ಪ್ರಮುಖ ಅಂಶವಾಗಿರುವ ಅಧಿಕಾರ ವಿಕೇಂದ್ರೀಕರಣವನ್ನು ಕಡ್ಡಾಯವಾಗಿ ವಿರೋಧಿಸುವುದು ಇದರ ಮೂಲ ಸಾರವಾಗಿದೆ.

ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಿಗೆ ಮುಕ್ತ ಮತ್ತು ನ್ಯಾಯಸಮ್ಮತವಾದ ಚುನಾವಣೆಗಳನ್ನು ಸಮತಟ್ಟಾದ ಆಧಾರದಲ್ಲಿ ನಡೆಸುವುದು ನಮ್ಮ ಪ್ರಜಾಸತ್ತಾತ್ಮಕ ಚೌಕಟ್ಟಿನ ಮೂಲಾಧಾರವಾಗಿದೆ. ಒಂದು ರಾಷ್ಟ್ರ, ಒಂದು ಚುನಾವಣೆ ಎಂಬ ಪರಿಕಲ್ಪನೆಯು ಈ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತದೆ. ಏಕೆಂದರೆ ಇದು ಸಾಂವಿಧಾನಿಕವಾಗಿ ಸ್ಥಾಪಿತವಾದ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರದ ವಿಕೇಂದ್ರೀಕರಣವನ್ನು ನಿರ್ಲಕ್ಷಿಸುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಒಮ್ಮೆಲೆ 'ಒಂದು ರಾಷ್ಟ್ರ, ಒಂದು ಚುನಾವಣೆ'ಯ ಕಲ್ಪನೆಯು ತೀವ್ರವಾದ ಕೇಂದ್ರೀಕರಣವನ್ನು ಪ್ರತಿಪಾದಿಸುತ್ತದೆ. ಇದು ಸಂವಿಧಾನದಲ್ಲಿ ಪ್ರತಿಪಾದಿಸಿರುವ ಒಕ್ಕೂಟ ಪ್ರಭುತ್ವ ಸ್ವರೂಪಕ್ಕೆ ಮತ್ತು ಆಡಳಿತ ಅಧಿಕಾರಗಳ ಸೂಕ್ಷ್ಮ ವಿಕೇಂದ್ರೀಕರಣಕ್ಕೆ ಬೆದರಿಕೆ ಉಂಟುಮಾಡುತ್ತದೆ.

ONOE ಮೇಲಿನ ಉನ್ನತ ಮಟ್ಟದ ಸಮಿತಿ(HLC)ಯ ಶಿಫಾರಸ್ಸುಗಳನ್ನು ಆಳವಾಗಿ ಅಭ್ಯಾಸ ಮಾಡಿದಾಗ, ವಕ್ರದೃಷ್ಟಿಯ ಇಂತಹ ಅಂಶಗಳು ಸ್ಪಷ್ಟಗೊಳ್ಳುತ್ತವೆ.

ಎಚ್‌ಎಲ್‌ಸಿಯ ಶಿಫಾರಸ್ಸುಗಳಲ್ಲಿ ಉಲ್ಲೇಖಿಸಿರುವ ವಿಧಾನಗಳು ಮತ್ತು ಅದರ ಕಾರ್ಯವಿಧಾನಗಳ ನಿಯಮಗಳು ಸ್ಪಷ್ಟವಾಗಿ ಮೊದಲ ಹಂತದಲ್ಲೇ ಗೋಚರಿಸುತ್ತದೆ. ಜನರು ಪ್ರತಿನಿಧಿಸುವ ಸಂಸತ್ ಎಂಬ ಮನೆ (ಲೋಕಸಭೆ) ಮತ್ತು ರಾಜ್ಯ ಶಾಸಕಾಂಗ (ವಿಧಾನಸಭೆ)ಗಳಿಗೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಲು ಮಾಡಿರುವ ಶಿಫಾರಸುಗಳನ್ನು ಅದರಲ್ಲಿ ಪ್ರಮುಖವಾಗಿ, 'ವಿಧಾನಸಭೆಗಳು, ಪುರಸಭೆಗಳು ಮತ್ತು ಪಂಚಾಯಿತಿ'ಗಳು, ಭಾರತದ ಸಂವಿಧಾನ ಮತ್ತು ಇತರ ಶಾಸನಬದ್ಧ ನಿಬಂಧನೆಗಳ ಅಡಿಯಲ್ಲಿ ಅಸ್ತಿತ್ವದಲ್ಲಿರುವ ಚೌಕಟ್ಟನ್ನು ಗಮನದಲ್ಲಿಟ್ಟುಕೊಂಡು, ಸಂವಿಧಾನಕ್ಕೆ ನಿರ್ದಿಷ್ಟ ತಿದ್ದುಪಡಿಗಳನ್ನು ತರಬೇಕಾಗಿದೆ. 1950ರ ಜನತಾ ಪ್ರಾತಿನಿಧ್ಯ ಕಾಯಿದೆ, 1951ರ ಪ್ರಜಾಪ್ರತಿನಿಧಿ ಕಾಯ್ದೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ಉದ್ದೇಶಕ್ಕಾಗಿ ತಿದ್ದುಪಡಿಗಳ ಅಗತ್ಯವಿರುವ ಯಾವುದೇ ಇತರ ಕಾನೂನು ಅಥವಾ ನಿಯಮಗಳನ್ನು ಪರಿಶೀಲಿಸಲು ಶಿಫಾರಸ್ಸು ಮಾಡಿದೆ. ಒಟ್ಟಾರೆಯಾಗಿ ಎಲ್ಲದಕ್ಕೂ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ ಉದ್ದೇಶ ಹೊಂದಿದೆ.

ಆರ್‌ಎಸ್‌ಎಸ್ ನಿಲುವು ಸ್ಪಷ್ಟಗೊಳ್ಳುತ್ತದೆ

ಒಂದು ರಾಷ್ಟ್ರ, ಒಂದು ಚುನಾವಣೆಗೆ ಶಿಫಾರಸ್ಸು ಮಾಡಿರುವ HLCಯು ಸಂಸತ್ತು, ರಾಜ್ಯ ಶಾಸಕಾಂಗಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದ ಚುನಾವಣೆಗಳು ಅಗತ್ಯವಿದೆಯೇ ಎಂದು ಪ್ರಜಾಸತ್ತಾತ್ಮಕವಾಗಿ ಚರ್ಚಿಸುವ ಕಾರ್ಯವನ್ನು ಕೈಬಿಟ್ಟಂತಿದೆ. ಬದಲಿಗೆ, ಇದು ಒಂದು ಉತ್ತಮ ಶಿಫಾರಸು ಎಂದು ಪ್ರಸ್ತುತ ಪಡಿಸಲಾಗಿದೆ. ಹಾಗೆಯೇ, ಸಮಿತಿಯ ಪಾತ್ರವು ಈ ಯೋಜನೆಯನ್ನು ಹೇಗೆ ಕಾರ್ಯಗತಗೊಳಿಸಬೇಕು ಎಂಬುದರ ವಿವರಗಳನ್ನು ಈ ಸಮಿತಿಯೇ ರೂಪಿಸುತ್ತದೆ. ಹಾಗಾಗಿ, ಈ ಆದೇಶವನ್ನು ನೀಡಿದರೆ, ಸಮಿತಿಯ ತೀರ್ಮಾನಗಳು ಆಶ್ಚರ್ಯ ಅಥವಾ ಊಹಾಪೋಹಗಳಿಗೆ ಆಸ್ಪದ ಮಾಡಿಕೊಡುವ ಸಾಧ್ಯತೆ ಹೆಚ್ಚಾಗಿದೆ. ಇಲ್ಲಿ ಆರ್‌ಎಸ್‌ಎಸ್–ಬಿಜೆಪಿಯ ಪ್ರಜಾಸತ್ತಾತ್ಮಕ ವಿರೋಧಿ ನಿಲುವು ಸ್ಪಷ್ಟಗೊಳ್ಳುತ್ತದೆ.

ಈ ನಿಟ್ಟಿನಲ್ಲಿ ಯಾವುದೇ ಸಂದೇಹಗಳಿದ್ದರೂ, HLCಯೇ ಅವುಗಳನ್ನು ಹೋಗಲಾಡಿಸಬೇಕು ಎಂಬ ಅಂಶವನ್ನು ಒತ್ತಿ ಹೇಳಲಾಗಿದೆ. ಹಾಗಾಗಿಯೇ ಸಮಿತಿಯ ಮುಖ್ಯಸ್ಥರಾಗಿ ಮಾಜಿ ರಾಷ್ಟ್ರಪತಿಗಳ ನೇಮಕವೂ ಕೂಡಾ ಡಾ.ಅಂಬೇಡ್ಕರ್ ಆಗಾಗ್ಗೆ ಮಾತನಾಡುವ "ಸಾಂವಿಧಾನಿಕ ನೈತಿಕತೆ"ಗೆ ವಿರುದ್ಧವಾಗಿದೆ. ಜೊತೆಗೆ, ಕ್ಯಾಬಿನೆಟ್‌ನ ಇಬ್ಬರು ಸದಸ್ಯರು ಮತ್ತು "ಥಿಂಕ್ ಟ್ಯಾಂಕ್ಸ್" ಎಂದು ಕರೆಯಲ್ಪಡುವ ಕೆಲವು ಸದಸ್ಯರನ್ನು ಹೆಚ್ಚುವರಿಯಾಗಿ ಸಮಿತಿಗೆ ಸೇರಿಸಿರುವುದು ಆಸ್ಪದಕ್ಕೆ ಅಥವಾ ಸಂಭಾವ್ಯ ಸಂಘರ್ಷಗಳ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ.

ವರದಿಯ ಒಳ ಅರಿವು ತುಂಬಾ ದೊಡ್ಡದಾಗಿದೆ. ಇದು 19,000 ಪುಟಗಳನ್ನು ಒಳಗೊಂಡಿದೆ. ಆದಾಗ್ಯೂ, ಅದರಲ್ಲಿ ಹೆಚ್ಚಿನವು 'ಶಬ್ದ ಮತ್ತು ಕೋಪ' ಯಾವುದನ್ನೂ ತರುವಂತಿಲ್ಲದಂತಿದೆ. ಅಂದರೆ, ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಅವಕಾಶ ಇಲ್ಲ. ಈ ಶಿಫಾರಸ್ಸಿನಲ್ಲಿ ಕಾರ್ಯಾಚರಣೆಯ ಭಾಗವು ಕೇವಲ 200 ಪುಟಗಳಷ್ಟು ಉದ್ದವಾಗಿದೆ. ಉಳಿದ ವಿಷಯವು 1932ರ ಫ್ರ್ಯಾಂಚೈಸ್ ಸಮಿತಿ ವರದಿ, ವಿವಿಧ ಕಾನೂನು ಆಯೋಗದ ವರದಿಗಳು, ಸಂಸದೀಯ ಸ್ಥಾಯಿ ಸಮಿತಿ ವರದಿಗಳು ಮತ್ತು ಎಲ್ಲಾ ರಾಜ್ಯಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಕಾನೂನುಗಳಂತಹ ಅನುಬಂಧಗಳನ್ನು ಒಳಗೊಂಡಿದೆ.

ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಿಗೆ ಚುನಾವಣೆಗಳನ್ನು ನಡೆಸುವ ಸಮಯ ಮತ್ತು ಕಾರ್ಯವಿಧಾನಗಳನ್ನು ನಿಗದಿಪಡಿಸಲು ಅಸ್ತಿತ್ವದಲ್ಲಿರುವ ಸಾಂವಿಧಾನಿಕ ನಿಬಂಧನೆಗಳ ಕುರಿತಂತೆ ಇದರಲ್ಲಿ ಯಾವುದೇ ಉಲ್ಲೇಖವಿಲ್ಲ. ಸಂವಿಧಾನಬದ್ಧ ಅಸೆಂಬ್ಲಿಯಲ್ಲಿ ಉತ್ಸಾಹಭರಿತ ಮತ್ತು ಕಠಿಣ ಚರ್ಚೆಗಳಿಗೂ ಕೂಡ ಯಾವುದೇ ಉಲ್ಲೇಖವಿಲ್ಲ. ಈ ಸುದೀರ್ಘವಾದ, ತೆರಿಗೆದಾರ–ನಿಧಿಯ ಬಗ್ಗೆ ಮೂಲಭೂತ ನಿರರ್ಥಕತೆ ಸ್ಪಷ್ಟವಾಗಿದೆ. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸಿದ 73 ಮತ್ತು 74ನೇ ಸಂವಿಧಾನದ ತಿದ್ದುಪಡಿಗಳ ಅಂಗೀಕಾರಕ್ಕೆ ಕಾರಣವಾದ ಸಂಸತ್ತಿನಲ್ಲಿ ನಡೆದ ಚರ್ಚೆಗಳ ಬಗ್ಗೆಯೂ ಯಾವುದೇ ಉಲ್ಲೇಖವಿಲ್ಲ.

ಇದರಿಂದ ಸರ್ಕಾರ ಮತ್ತು ಬಿಜೆಪಿಯ ರಾಜಕೀಯ ಉದ್ದೇಶಗಳು HLC ಯ ಅಂತಿಮ ಶಿಫಾರಸುಗಳಲ್ಲಿ ಸ್ಪಷ್ಟವಾಗಿ ಪ್ರತಿಫಲಿಸುತ್ತದೆ.

ಇದು 'ಜುಮ್ಲಾ' ಅಲ್ಲ

ಯಾವುದೇ ಒಂದು ಹೇಳಿಕೆಯನ್ನು 'ಜುಮ್ಲಾ' (ಸುಳ್ಳು) ಎಂದು ಕರೆಯಬೇಕಾದರೆ, ಅದು ಕಾರ್ಯಸಾಧ್ಯತೆಯಲ್ಲಿ ಹೋಲಿಕೆಯನ್ನು ಹೊಂದಿರಬೇಕು. ಆದರೆ ಒಂದು ರಾಷ್ಟ್ರ, ಒಂದು ಚುನಾವಣೆಯ ಪದಗುಚ್ಛವು ಆ ರೀತಿಯಲಿಲ್ಲ. ಏಕೆಂದರೆ ಉನ್ನತ ಮಟ್ಟದ ಸಮಿತಿಯೇ ಸ್ವತಃ ತನ್ನ ಶಿಫಾರಸುಗಳಿಗೆ ಸಂವಿಧಾನಕ್ಕೆ ಕನಿಷ್ಠ 15 ತಿದ್ದುಪಡಿಗಳ ಅಗತ್ಯವಿದೆ ಎಂದು ಸ್ಪಷ್ಟಗೊಳಿಸಿದೆ. ಆದರೆ, ಅಸ್ತಿತ್ವದಲ್ಲಿರುವ ಹಲವಾರು ಇತರೆ ಕಾನೂನುಗಳಿಗೆ ಬದಲಾವಣೆಗಳನ್ನು ಉಲ್ಲೇಖಿಸಬಾರದು ಎಂದಿದೆ. ಇವೆಲ್ಲವೂ ಅನುಮಾನ, ಆಸ್ಪದಕ್ಕೆ ಎಡೆಮಾಡಿಕೊಟ್ಟಂತಿದೆ.

ಲೋಕಸಭೆ ಮತ್ತು ರಾಜ್ಯಸಭೆಯ ಪ್ರಸ್ತುತ ಸಂಯೋಜನೆಯು ಬಿಜೆಪಿ ತನ್ನ ಬೆಂಬಲಿತ ಪಕ್ಷಗಳನ್ನು ಮೈತ್ರಿಯೊಳಗೆ ಹೊಂದಿದ್ದರು ಸಹಾ, ಈ ತಿದ್ದುಪಡಿಗಳ ಅಂಗೀಕಾರವನ್ನು ಖಾತರಿಪಡಿಸಲಾಗದ ಪರಿಸ್ಥಿತಿಯನ್ನು ಎದುರಿಸ ಬೇಕಾಗುತ್ತದೆ. ಇದನ್ನು ಮನಗಂಡ ಬಿಜೆಪಿ ನಾಯಕತ್ವ ವಿರೋಧ ಪಕ್ಷಗಳ ಮನವೊಲಿಸಲು ಹೇಗೆ ಅಲೋಚಿಸುತ್ತದೆ ಎಂಬುದು ಮುಂದಿನ ದಿನಗಳಲ್ಲಿ ತಿಳಿಯುತ್ತದೆ.



ಆದಾಗ್ಯೂ, ಯಾವುದೇ ಪ್ರಮುಖ ರಾಜಕೀಯ ಪಕ್ಷಗಳು ಈ ಶಿಫಾರಸ್ಸುಗಳನ್ನು ಬೆಂಬಲಿಸುವುದಿಲ್ಲ ಎಂದು HLCಯ ಸ್ವಂತ ದಾಖಲೆಗಳು ತೋರಿಸುತ್ತವೆ. ಇದರ ಪರಿಕಲ್ಪನೆ ಅಥವಾ ಪ್ರಸ್ತಾಪಗಳನ್ನು HLCಯ ಮೂಲ ಸಂಯೋಜನೆಯಲ್ಲಿ, ಒಬ್ಬ ಸದಸ್ಯರು ಮಾತ್ರ ವಿರೋಧ ಪಕ್ಷವನ್ನು ಪ್ರತಿನಿಧಿಸುತ್ತಿದ್ದರು. ಆಗಿನ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾದ ಅಧಿರ್ಚೌದರಿ, ಇವರು ಆರ್‌ಎಸ್‌ಎಸ್–ಬಿಜೆಪಿ ಸಂಯೋಜನೆಯ ಪೂರ್ವ ನಿರ್ಧರಿತ ರಾಜಕೀಯ ಕಾರ್ಯಸೂಚಿಯ ವಿಧಾನವನ್ನು HLC ಅನುಸರಿಸಲು ಮುಂದಾದ ಕಾರಣ, ಸಮಿತಿಗೆ ರಾಜೀನಾಮೆ ನೀಡಿ ಹೊರಬಂದರು. ನಂತರ ONOE ಯೋಜನೆಯ ಉದ್ದೇಶವನ್ನು ಬಹಿರಂಗಪಡಿಸಿದರು.

HLC ಹೇಳಿಕೊಂಡಂತೆ ONOE ಪ್ರಸ್ತಾಪದ ಸಮರ್ಥನೆಯು ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ ಮೂಲಕ 5,000 ಕೋಟಿ ರೂಪಾಯಿಗಳನ್ನು ಉಳಿಸುತ್ತದೆ. ಆದಾಗ್ಯೂ, ಈ ಹಕ್ಕನ್ನು ದೃಢೀಕರಿಸಲು ಯಾವುದೇ ನೈಜ ಕಾರ್ಯವಿಧಾನಗಳನ್ನು ಅನುಸರಿಸಲು ಸಮಿತಿಯು ವಿಫಲವಾಗಿದೆ. ನಮ್ಮ ಸಂವಿಧಾನದ ಸ್ವರೂಪವೇ ಜನಕೇಂದ್ರಿತ ಮತ್ತು ಎಲ್ಲರನ್ನೂ ಒಳಗೊಳ್ಳುವುದು ಎಂಬ ಅಂಶವನ್ನು ಕಡೆಗಣಿಸಲಾಗಿದೆ. HLCಯ ಪ್ರಸ್ತಾವನೆಯು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮತದಾರರ ಸಾಂವಿಧಾನಿಕ ಹಕ್ಕನ್ನು ನಿರಂಕುಶವಾಗಿ ಕಸಿದುಕೊಳ್ಳಲು ಪ್ರಯತ್ನಿಸುತ್ತದೆ. ದೇಶದಲ್ಲಿ ಚುನಾವಣಾ ಪ್ರಕ್ರಿಯೆಯು ಏಕಕಾಲದ ಚುನಾವಣೆಗಳೊಂದಿಗೆ ಪ್ರಾರಂಭವಾಯಿತು ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಲು HLC ಗೆ ಸಾಧ್ಯವಾಗಿಲ್ಲ.

ರಾಜಕೀಯ ಪರಿಸ್ಥಿತಿಯಲ್ಲಿನ ಬದಲಾವಣೆಗಳು ಮತ್ತು ಜನರ ಗ್ರಹಿಕೆಗಳು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟಗಳೆರಡರಲ್ಲೂ, ಬಹುಮತದ ಬೆಂಬಲವನ್ನು ಉಳಿಸಿಕೊಳ್ಳಲು ವಿಫಲವಾಗಿವೆ. ಐದು ವರ್ಷಗಳ ನಿಗದಿತ ಅವಧಿಗೆ ಪ್ರತಿನಿಧಿಗಳನ್ನು ಆಯ್ಕೆಮಾಡಲು ಚುನಾವಣೆಗಳನ್ನು ಉದ್ದೇಶಿಸಲಾಗಿತ್ತು, ಆದರೆ ಆಡಳಿತ ವ್ಯವಸ್ಥೆಗಳು ಕುಸಿದಾಗ ಚುನಾವಣೆಗಳನ್ನು ನಡೆಸಬೇಕಾಗುತ್ತದೆ ಎಂಬುದಕ್ಕೆ ಎಚ್‌ಎಲ್‌ಸಿ ಮೌನತಾಳಿದೆ.

ಏಕಕಾಲಿಕ ಚುನಾವಣೆಗಳನ್ನು ಖಚಿತ ಪಡಿಸಿಕೊಳ್ಳಲು, ಲೋಕಸಭೆಯ ಅಧಿಕಾರದ ಅವಧಿಯೊಂದಿಗೆ ಸಿಂಕ್ರೊನೈಸ್ ಮಾಡಲು ರಾಜ್ಯ ಅಸೆಂಬ್ಲಿಗಳ ನಿಯಮಗಳನ್ನು ಮೊಟಕುಗೊಳಿಸಲು HLC ಶಿಫಾರಸು ಮಾಡಿದೆ. ಇದು ಐದು ವರ್ಷಗಳ ಪ್ರತಿನಿಧಿ ಚುನಾವಣೆಗಳ ಮೂಲಭೂತ ಸಾಂವಿಧಾನಿಕ ಅವಶ್ಯಕತೆಗಳನ್ನು ಉಲ್ಲಂಘಿಸಿ ಗಾಳಿಗೆ ತೂರಿದೆ. ಇದಲ್ಲದೆ, ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಜಾರಿಗೆ ತರಲು ಸಾಂವಿಧಾನಿಕವಾಗಿ ಐದು ವರ್ಷಗಳ ಅವಧಿಯನ್ನು ಒದಗಿಸಿದ ರಾಜಕೀಯ ಪಕ್ಷಗಳಿಗೆ ಅಂತಹ ಹಕ್ಕನ್ನು ಸ್ಪಷ್ಟವಾಗಿ ನಿರಾಕರಿಸಲಾಗುತ್ತದೆ.

ಚುನಾವಣಾ ನೀತಿಗಳ ಮುಂದುವರಿಕೆಗೆ ಸಂಬಂಧಿಸಿದಂತೆ ಎಚ್‌ಎಲ್‌ಸಿ ಯ ಶಿಫಾರಸ್ಸು, ಜನರ ಚುನಾಯಿತ ಪ್ರತಿನಿಧಿಗಳಿಗಿಂತ ತಜ್ಞರು ಮತ್ತು ಚಿಂತಕರ ಟ್ಯಾಂಕ್‌ಗಳಿಗೆ ಆದ್ಯತೆ ನೀಡುವ ನವ ಉದಾರವಾದಿ ಮಾದರಿಯಿಂದ ರೂಪಿತಗೊಂಡ ಮತ್ತೊಂದು ವೈಶಿಷ್ಟ್ಯವಾಗಿದೆ. ಇದು ಚುನಾವಣಾ ಪ್ರಕ್ರಿಯೆಯನ್ನು ಜನರ ಗ್ರಹಿಕೆಯ ಅಗತ್ಯತೆಗಳು ಮತ್ತು ಅವಶ್ಯಕತೆಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸುತ್ತದೆ. ನವ ಉದಾರವಾದ ಆರ್ಥಿಕ ನೀತಿಯ ಬಗ್ಗೆ ಅಮೂರ್ತ ಪ್ರತಿಪಾದನೆಗಳಿಗೆ ಒಳಪಡಿಸುತ್ತದೆ. ಇದು ಮೂಲಭೂತವಾಗಿ ಪ್ರಜಾಪ್ರಭುತ್ವ ವಿರೋಧಿ ಮತ್ತು ಜನವಿರೋಧಿಯಾಗಿದೆ.

ಸಂವಿಧಾನ ರಚನೆ ಮತ್ತು
ರಾಜ್ಯ ಮರುಸಂಘಟನೆ ಕಾಯಿದೆ

ಲೋಕಸಭೆ ಚುನಾವಣೆಯಲ್ಲಿ 370 ಸ್ಥಾನಗಳನ್ನು ಮತ್ತು ಅದರ ಮಿತ್ರಪಕ್ಷಗಳೊಂದಿಗೆ 400 ಸ್ಥಾನಗಳನ್ನು ಗಳಿಸುವುದು ಬಿಜೆಪಿಯ ಕರೆಯಾಗಿತ್ತು. ನರೇಂದ್ರ ಮೋದಿಯವರು ಕೂಡ ಈ ಘೋಷಣೆಯನ್ನು ನಿಯಂತ್ರಣವಿಲ್ಲದೆ ಒತ್ತಿ ಒತ್ತಿ ಹೇಳುತ್ತಿದ್ದರು. ಆದರೆ, ಸಾಧಿಸಲಾಗಲಿಲ್ಲ. ಆದಾಗ್ಯೂ, ಅರುಣ್ ಗೋವಿಲ್ ಮತ್ತು ಅನಂತ ಹೆಗಡೆಯಂತಹ ಅವರ ಕೆಲವು ಅತ್ಯಾಧುನಿಕ ಸಹೋದ್ಯೋಗಿಗಳು (ಗೊಡ್ಡು ಸಂಪ್ರದಾಯವಾದಕ್ಕೆ ಮೆತ್ತಿಕೊಂಡವರು) ಸಮಗ್ರವಾಗಿ ಸಾಂವಿಧಾನಿಕ ತಿದ್ದುಪಡಿಯನ್ನು ಕೈಗೊಳ್ಳುವುದಕ್ಕಾಗಿಯೇ 400 ಸೀಟುಗಳ ಅಗತ್ಯವಿದೆ ಎಂದು ಮತ್ತಷ್ಟು ವಿವರಿಸುವ ಮೂಲಕ 'ಬೆಕ್ಕನ್ನು ಚೀಲದಿಂದ ಹೊರಕ್ಕೆ' ಬಿಟ್ಟರು. ಈ ಘೋಷಣೆಯು ಮತದಾರರ ವಿವಿಧ ವಿಭಾಗಗಳಲ್ಲಿ, ವಿಶೇಷವಾಗಿ ಪರಿಶಿಷ್ಟ ಜಾತಿಗಳ ಸಮುದಾಯಗಳಲ್ಲಿ ಆತಂಕವನ್ನು ತೀವ್ರಗೊಳಿಸಿತು.

"ಸಂವಿಧಾನವನ್ನು ಉಳಿಸಿ ಮತ್ತು ಭಾರತವನ್ನು



ಉಳಿಸಿ" ಎಂಬ ಪ್ರತಿ ಧ್ವನಿಯೊಂದಿಗೆ ಪ್ರಚಾರ ಅಬ್ಬರಿಸಿತು. ಸಂವಿಧಾನದಲ್ಲಿ ಯಾವುದೂ ಅಸಂಬದ್ಧವಾಗಿಲ್ಲಮತ್ತುಸಂಸತ್ತಿಗೆ(ಕಾರ್ಯಾಂಗಕ್ಕೆ) ಯಾವುದೇ ವಿಧಿ ಮತ್ತು ಷರತ್ತನ್ನು ತಿದ್ದುಪಡಿ ಮಾಡುವ ಅಧಿಕಾರವಿದೆ ಎಂದು ಜಗದೀಪ್ ಹಂಖರ್ ನಿರಂತರವಾಗಿ ಪ್ರತಿಪಾದಿಸಿದಾಗ, ಇದು ಕೇವಲ ವಾಕ್ಚಾತುರ್ಯವಲ್ಲ ಈ ನಡೆಯು ಆರ್‌ಎಸ್‌ಎಸ್‌ನ ಕಾರ್ಯಸೂಚಿಯಾಗಿದೆ ಎಂಬುದು ಗೊತ್ತಾಯಿತು.

ಆದರೆ ಸುಪ್ರೀಂ ಕೋರ್ಟ್‌ನ ಪ್ರತಿಪಾದನೆಯ ಹೊರತಾಗಿಯೂ, ಮೂಲರಚನೆಯನ್ನು ಸ್ಪರ್ಶಿಸಲಾಗುವುದಿಲ್ಲ. ಇದು ಸಂವಿಧಾನವನ್ನು ರಾಷ್ಟ್ರದ 'ಏಕೈಕ ಪವಿತ್ರ ಗ್ರಂಥ' ಎಂದು ಮೋದಿ ನಾಟಕೀಯವಾಗಿ ಶ್ಲಾಘಿಸಿದ್ದರು. ಇದು ಅವರ ಇಬ್ಬಂದಿತನದ ಮಾತಾಗಿತ್ತು. ಮೋದಿ ಸರ್ಕಾರವು ವಾಸ್ತವವಾಗಿ, 2019ರಲ್ಲಿ ಪೌರತ್ವ ಕಾಯ್ದೆಯನ್ನು ತಿದ್ದುಪಡಿ ಮಾಡಿತು. ಜಾತಿ, ಮತ ಅಥವಾ ಧರ್ಮವನ್ನು ಲೆಕ್ಕಿಸದೆ ಸಾಮಾನ್ಯ ಮತ್ತು ಸಮಾನ ಪೌರತ್ವ ಎಂಬ ತತ್ವವನ್ನು ಬದಲಾಯಿಸಿತು. ಸಿಎಎ ಧರ್ಮದ ಆಧಾರದ ಮೇಲೆ ನೆರೆಯ ದೇಶಗಳಿಂದ ವಲಸಿಗರಿಗೆ ಪೌರತ್ವ ಹಕ್ಕುಗಳಿಗಾಗಿ ನಿಬಂಧನೆಗಳನ್ನು ಮಾಡಲಾಯಿತು. ಇದು ಯಾರಿಗೂ ಆಶ್ಚರ್ಯ ತರಲಿಲ್ಲ. ಏಕೆಂದರೆ ಆರ್‌ಎಸ್‌ಎಸ್ ಪ್ರಜಾಸತ್ತಾತ್ಮಕ–ಜಾತ್ಯತೀತ ಭಾರತೀಯ ರಾಜಕೀಯಕ್ಕೆ ಮತ್ತು ಎಲ್ಲರನ್ನೂ ಒಳಗೊಂಡ ಭಾರತವನ್ನು ಪ್ರತಿನಿಧಿಸುವ ಎಲ್ಲಾ ಚಿಹ್ನೆಗಳಿಗೆ ದ್ರೋಹ ಮಾಡಿದೆ, ಈಗಲೂ ಮಾಡುತ್ತಲಿದೆ. ಸ್ವಾತಂತ್ರ್ಯದ ಮುನ್ನಾ ದಿನದಂದು ಆರ್‌ಎಸ್‌ಎಸ್ ಮುಖವಾಣಿ ಆರ್ಗನೈಸರ್ (ಆಗಸ್ಟ್ 14, 1947ರ ಸಂಚಿಕೆಯಲ್ಲಿ) ಹೀಗೆ ಹೇಳಿದೆ, "ವಿಧಿಯ ಒದೆತದಿಂದ ಅಧಿಕಾರಕ್ಕೆ ಬಂದ ಜನರು ನಮ್ಮ ಕೈಯಲ್ಲಿ ತ್ರಿವರ್ಣ ಧ್ವಜವನ್ನು ನೀಡಬಹುದು, ಆದರೆ ಅದನ್ನು ಎಂದಿಗೂ ಗೌರವಿಸಲಾಗುವುದಿಲ್ಲ, ಆದರೆ, ಈ ಸಮಾಜ ಹಿಂದೂಗಳ ಒಡೆತನದಲ್ಲಿದೆ. 'ತ್ರಿವರ್ಣ' ಎಂಬ ಪದವು ಸ್ವತಃ ಕೆಟ್ಟದ್ದಾಗಿದೆ ಮತ್ತು ಮೂರು ಬಣ್ಣಗಳನ್ನು ಹೊಂದಿರುವ ಧ್ವಜವು ಖಂಡಿತವಾಗಿಯೂ ಕೆಟ್ಟ ಮಾನಸಿಕ ಪರಿಣಾಮವನ್ನು ಉಂಟುಮಾಡುತ್ತದೆ." ಆದರೆ ಸಂವಿಧಾನದ ಅಂಗೀಕಾರದ ನಂತರ, ಸಂಘಟಕರು ನೇರವಾಗಿಯೇ ಇದನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಸ್ವಲ್ಪ ಯಶಸ್ಸು ಕಂಡರು. ಅದೇ ವರ್ಷದ ನವೆಂಬರ್ 30ರ ಸಂಚಿಕೆಯಲ್ಲಿ ಅದು ಹೀಗೆ ಹೇಳಿದೆ: "ಭಾರತದ ಹೊಸ ಸಂವಿಧಾನದ ಬಗ್ಗೆ ಕೆಟ್ಟ ವಿಷಯವೆಂದರೆ ಅದರಲ್ಲಿ ಭಾರತೀಯತೆ ಎಂಬುದು ಏನೂ ಇಲ್ಲ. ಸಂವಿಧಾನದ ಕರಡುಕಾರರು ಬ್ರಿಟಿಷ್, ಅಮೆರಿಕನ್, ಕೆನಡಿಯನ್, ಸ್ವಿಸ್ ಮತ್ತು ಇತರ ಸಂವಿಧಾನಗಳ ಅಂಶಗಳನ್ನು ಇದರೊಳಗೆ ಸಂಯೋಜಿಸಿದ್ದಾರೆ. ಆದರೆ ಇದರಲ್ಲಿ ಪ್ರಾಚೀನ ಭಾರತೀಯತೆಯ ಸಾಂವಿಧಾನಿಕ ಕಾನೂನುಗಳು, ಸಂಸ್ಥೆಗಳು, ನಾಮಕರಣ ಮತ್ತು ನುಡಿಗಟ್ಟುಗಳ ಯಾವುದೇ ಕುರುಹುಗಳು ಇಲ್ಲವೇ ಇಲ್ಲ." ಈಗಲೂ ಅವರ ಅನೇಕ ಸಂಸದರು, ಚುನಾವಣಾ ಪ್ರಚಾರದಲ್ಲಿ ಬೊಬ್ಬಿರಿದಿದ್ದಾರೆ ಎಂಬುದು ವಾಸ್ತವ.

ನಮ್ಮ ಸಂವಿಧಾನದಲ್ಲಿ, ಪ್ರಾಚೀನ ಭಾರತದ ವಿಶಿಷ್ಟವಾದ ಬೆಳವಣಿಗೆಯ ಬಗ್ಗೆ ಯಾವುದೇ ಉಲ್ಲೇಖವನ್ನು ಹೊಂದಿಲ್ಲ. ಮನುವಿನ ಕಾನೂನುಗಳು ಸ್ಪಾರ್ಟಾದ ಲೈಕರ್ಗಸ್ ಅಥವಾ ಪರ್ಷಿಯಾದ ಸೊಲೊನ್‌ರಿಗೆ, ಮುಂಚೆಯೇ ಬರೆಯಲ್ಪಟ್ಟಿದ್ದವು. ಇಂದಿಗೂ, ಈ ಕಾನೂನುಗಳು, ಮನುಸ್ಮೃತಿಯಲ್ಲಿ ವಿವರಿಸಿದಂತೆ, ಪ್ರಪಂಚದ ಮೆಚ್ಚುಗೆಯನ್ನು ಪ್ರಚೋದಿಸುತ್ತದೆ ಮತ್ತು ಸ್ವಯಂಪ್ರೇರಿತ ವಿಧೇಯತೆ ಮತ್ತು ಅನುಸರಣೆಯನ್ನು ಹೊರಹೊಮ್ಮಿಸುತ್ತದೆ. ಆದರೆ ನಮ್ಮ ಸಾಂವಿಧಾನಿಕ ಪಂಡಿತರಿಗೆ ಇವೆಲ್ಲಾ ಪ್ರಾಚೀನತೆಯ ವಿಶೇಶತೆಗಳು ಏನೂ ಅರ್ಥವಾಗಿಲ್ಲ ಎಂಬ ಟೀಕೆಯನ್ನು ಆರ್‌ಎಸ್‌ಎಸ್ ಮೊದಲಿನಿಂದಲೂ ಟೀಕಿಸುತ್ತಾ ಬಂದಿದೆ.

ಅಂತಹ ಕಾಲ್ಪನಿಕ ಕಲ್ಪನೆಗಳ ಗೊಡ್ಡು ಸಂಪ್ರದಾಯಗಳಿಗೆ, ಪ್ರಸ್ತುತ ವಾಸ್ತವ ಅಥವಾ ಇತಿಹಾಸದೊಂದಿಗೆ ಯಾವುದೇ ಸಂಬಂಧವಿಲ್ಲ ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾದ ಅಗತ್ಯವಿದೆ.

ಭಾರತೀಯ ಸಂವಿಧಾನವನ್ನು ಕಟುವಾಗಿ ಟೀಕಿಸಿದ ನಂತರ, ಆರ್‌ಎಸ್‌ಎಸ್–ಬಿಜೆಪಿಯ ಈ ಮಾಸ್ಟರ್ ಮೈಂಡ್–ಡಬ್ಬಲ್ ಸ್ಟಾಂಡರ್ಡ್ ಮಾತುಗಳು, ಅವರು ಇತ್ತೀಚಿಗೆ ಅದೇ ಇಬ್ಬಂದಿತನದ ಎರಡು ಬಗೆಯ ಮಾತುಗಳನ್ನು ಮುಂದುವರಿಸಿದ್ದಾರೆ. ಆದರೆ, ಇನ್ನು ಮುಂದೆ, ಸಂವಿಧಾನಕ್ಕೆ, ಅದರ ಆಶಯಗಳಿಗೆ ಹಿಂದಿನಂತೆ ನಮ್ಮ ವಿರೋಧವು ಸಾಧ್ಯವಿಲ್ಲ ಎಂದು ಅವರು ಅರ್ಥಮಾಡಿಕೊಂಡಿದ್ದಾರೆ. ಆದ್ದರಿಂದಲೇ, ಸಂವಿಧಾನದ ಬಗ್ಗೆ ನಾಟಕೀಯ ಒಲವು ತೋರುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಂವಿಧಾನವನ್ನು ಒಳಗಿನಿಂದ ಹಾಳು ಮಾಡುವುದು ಅವರ ಬದಲಾದ ತಂತ್ರವಾಗಿದೆ.

RSS ವೀಕ್ಷಣೆಗಳು ಮತ್ತು
ONOE ಘೋಷಣೆಗಳು

'ಒಂದು ರಾಷ್ಟ್ರ, ಒಂದು ಭಾಷೆ, ಒಂದು ನಾಯಕ' ಎಂಬ ಆರ್‌ಎಸ್‌ಎಸ್‌ನ ಘೋಷಣೆಯು ತೀವ್ರತರದ ಕೇಂದ್ರೀಕರಣದ ಮೇಲೆ ಕೇಂದ್ರೀಕರಿಸುವ ಕಲ್ಪನೆಯಾಗಿದೆ. ಇದು ಸ್ವಾಭಾವಿಕವಾಗಿ ಅಧ್ಯಕ್ಷೀಯ ಸ್ವರೂಪದ ಆಡಳಿತಕ್ಕೆ ಸರ್ಕಾರವನ್ನು ತಳ್ಳುವಲ್ಲಿ ಕೊನೆಗೊಳ್ಳುತ್ತದೆ. ರಾಷ್ಟ್ರಪತಿ ಪದ್ಧತಿಯ ಕಲ್ಪನೆಯನ್ನು ಸ್ಪಷ್ಟವಾಗಿ ತಿರಸ್ಕರಿಸಲಾಗಿದೆ ಎಂಬುದು ಸಂವಿಧಾನ ಸಭೆಯ ನಡಾವಳಿಗಳಿಂದ ಸ್ಪಷ್ಟವಾಗಿದೆ. ಸಂವಿಧಾನ ಸಭೆಯು ಕ್ಯಾಬಿನೆಟ್ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡಿದೆ. ಅಲ್ಲಿ ಪ್ರತಿನಿಧಿಗಳು ಜನರಿಂದ ಚುನಾಯಿತರಾಗುತ್ತಾರೆ.

ಆದರೆ, ONOE ಪ್ರಸ್ತಾವನೆಯು RSSನ ಆಲೋಚನಾ ವಿಧಾನದಲ್ಲಿ ಈ ಮೂಲಭೂತ ಲಕ್ಷಣಗಳನ್ನು ತಿರುಚುವ ಪ್ರಯತ್ನದಲ್ಲಿ ತೊಡಗಿದೆ. ದುರಂತವೆಂದರೆ, ಸಂವಿಧಾನದ ಬಗ್ಗೆ ಅತ್ಯಲ್ಪ ಸೇವೆ ಸಲ್ಲಿಸಿದರೂ, ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳಿಗೆ ಐದು ವರ್ಷಗಳ ನಿಗದಿತ ಅವಧಿಯ ಅಗತ್ಯತೆಯ ವಿರುದ್ಧ HLC ಸಮರ್ಥವಾಗಿ ವಾದಿಸಲು ಸಾಧ್ಯವಿಲ್ಲ. ಹೀಗಾಗಿ, ಸಂವಿಧಾನವನ್ನು ರೂಪಿಸಿದ ಪರಿಗಣನೆಗಳ ವಿರುದ್ಧ ವಾದಗಳು ಕಾಣೆಯಾಗಿವೆ. ಅಪೇಕ್ಷಣೀಯತೆಯ ಆಧಾರಗಳು ಸಂಪೂರ್ಣವಾಗಿ ವ್ಯಕ್ತಿನಿಷ್ಠವಾಗಿವೆ ಮತ್ತು ನಿಜವಾದ ಪ್ರಾಯೋಗಿಕ ಅಧ್ಯಯನಗಳು ಅಥವಾ ಅಂಕಿಅಂಶಗಳಿಂದ ಬೆಂಬಲಿಸಲಾಗುವುದಿಲ್ಲ. ಆದ್ದರಿಂದ, ONOE ಯೋಜನೆಯನ್ನು ವಿರೋಧಿಸಬೇಕಾದ ಅಗತ್ಯವಿದೆ.

ಸ್ವಾತಂತ್ರ್ಯ ಹೋರಾಟದ ಪರಂಪರೆಯಲ್ಲಿ ಬೇರೂರಿರುವ ಸಾಂವಿಧಾನಿಕ ಆಧಾರದ ಮೇಲೆ ಮಾತ್ರವಲ್ಲದೆ, ಇದು ಏಕೀಕೃತ, ಪ್ರಜಾಸತ್ತಾತ್ಮಕ ವಲ್ಲದ, ಜಾತ್ಯತೀತವಲ್ಲದ ಹಿಂದುತ್ವ ರಾಷ್ಟ್ರದ ಕಡೆಗೆ ಚಲಿಸುವ ವಂಚನೆಯ ಪ್ರಯತ್ನವನ್ನು ONOE ಶಿಫಾರಸ್ಸುಗಳು ಪ್ರತಿನಿಧಿಸುತ್ತದೆ. ಭಾರತೀಯ ಸಂವಿಧಾನವನ್ನು ರಕ್ಷಿಸುವ ಮತ್ತು ಒಳಗೊಳ್ಳುವ ಭವಿಷ್ಯವನ್ನು ಖಾತ್ರಿಪಡಿಸುವ ಸವಾಲು ದೇಶದ ಮುಂದಿದೆ. ಈ ಅಸಹ್ಯಕರ ONOE ಯೋಜನೆಯನ್ನು ತಿರಸ್ಕರಿಸುವುದು, ಇದನ್ನು ಖಾತರಿಪಡಿಸಲು ನಾವು ಮಾಡಬಹುದಾದ ಕನಿಷ್ಠ ಕೆಲಸವಾಗಿದೆ.

ಅನು: ನಾಗರಾಜ ನಂಜುಂಡಯ್ಯ

ಪೌರತ್ವ ಕಾಯ್ದೆಯ ಸೆಕ್ಷನ್ 6ಎ ಸಿಂಧು ಎಂದ ಸುಪ್ರಿಂ ಕೋರ್ಟ್ ತೀರ್ಪು: ಅಸ್ಸಾಂ ಸಿಪಿಐ(ಎಂ) ಸ್ವಾಗತ

ಒಂದು ದೀರ್ಘ ನ್ಯಾಯಿಕ ಪ್ರಕ್ರಿಯೆಯ ನಂತರ, ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರ ಸಂವಿಧಾನ ಪೀಠ ಪೌರತ್ವ ಕಾಯ್ದೆ, 1955ರ ಅನುಚ್ಛೇದ 6ಎ ಸಾಂವಿಧಾನಿಕವಾಗಿ ಸಿಂಧುವಾಗಿದೆ ಎಂದು ತೀರ್ಪು ನೀಡಿದೆ. ಇದು ಸ್ವಾಗತಾರ್ಹ ತೀರ್ಪು ಎಂದು ಸಿಪಿಐ(ಎಂ)ನ ಅಸ್ಸಾಂ ರಾಜ್ಯಸಮಿತಿ ಹೇಳಿದೆ.

15 ಆಗಸ್ಟ್ 1985ರಂದು ಅಸ್ಸಾಂ ಒಪ್ಪಂದಕ್ಕೆ ಸಹಿ ಹಾಕಿದ ನಂತರ ದೇಶದ ಸಂಸತ್ತು 1955ರ ಪೌರತ್ವ ಕಾಯ್ದೆಗೆ ಅನುಚ್ಛೇಧ 6ಎ ಅನ್ನು ಸೇರಿಸಿತು. ಈ ಒಪ್ಪಂದ ಅಸ್ಸಾಂನಲ್ಲಿ ಕಾನೂನುಬಾಹಿರ ವಲಸೆಗಾರರೆಂದು ಗುರುತಿಸಲು ಮಾರ್ಚ್ 25, 1971ನ್ನು ಕಟ್–ಆಫ್ ದಿನಾಂಕ ಎಂದು ವಿಧಿಸಿತು. ಈ ಅನುಚ್ಛೇದ 6ಎ ಯ ಸಂವಿಧಾನಾತ್ಮಕತೆಯನ್ನು ಪ್ರಶ್ನಿಸಿ ಕೆಲವು ಸಂಘಟನೆಗಳು ಸುಪ್ರಿಂ ಕೋರ್ಟಿನಲ್ಲಿ ಅರ್ಜಿಗಳನ್ನು ಸಲ್ಲಿಸಿದವು. ಅಸ್ಸಾಂನ ಸಾಮಾಜಿಕ ಜೀವನದ ಮೇಲೆ ಆಗಬಹುದಾದ ಇದರ ಗಂಭೀರ ಪ್ರಭಾವವನ್ನು ಪರಿಗಣಿಸಿ ಸಿಪಿಐ(ಎಂ)ನ ಅಸ್ಸಾಂ ರಾಜ್ಯಸಮಿತಿ ಸುಪ್ರಿಂ ಕೋರ್ಟಿನಲ್ಲಿ ಒಂದು ಮಧ್ಯಪ್ರವೇಶ ಅರ್ಜಿಯ ಮೂಲಕ ತನ್ನ ಅಭಿಪ್ರಾಯವನ್ನು ಮಂಡಿಸಿತು ಮತ್ತು ಕಟ್–ಆಫ್ ದಿನಾಂಕವನ್ನು ಸಮರ್ಥಿಸಿ ಒಂದು ಲಿಖಿತ ಹೇಳಿಕೆಯನ್ನು ನೀಡಿತು.

ಅಕ್ಟೋಬರ್ 17ರಂದು ಸುಪ್ರಿಂ ಕೋರ್ಟ್‌ನ ಐವರು ನ್ಯಾಯಾಧೀಶರ ಸಂವಿಧಾನ ಪೀಠ ನೀಡಿರುವ ತೀರ್ಪು ಚೆನ್ನಾಗಿ ಪರಿಶೀಲಿಸಿರುವಂತದ್ದು ಮತ್ತು ಅಸ್ಸಾಂನ ವಾಸ್ತವತೆಗೆ ಹೊಂದಿಕೊಳ್ಳುವಂತದ್ದು ಎಂಬುದು ತನ್ನ ಅಭಿಪ್ರಾಯ ಎಂದು ಸಿಪಿಐ(ಎಂ)ನ ಅಸ್ಸಾಂ ರಾಜ್ಯಸಮಿತಿ ಹೇಳಿದೆ.

1971ರ ಕಟ್–ಆಫ್ ದಿನಾಂಕ ಸಂವಿಧಾನಬದ್ಧ ಎಂದು ಘೋಷಿಸಿದ ಮೇಲೆ ಯಾವುದೇ ವಿಳಂಬ ಮಾಡದೆ, ಸಮಕಾಲಿಕಗೊಳಿಸಿದ ಎನ್‌ಆರ್‌ಸಿ(ರಾಷ್ಟ್ರೀಯ ಪೌರತ್ವ ದಾಖಲಾತಿ)ಯ ಅಂತಿಮ ಪಟ್ಟಿಯನ್ನು ಅಧಿಸೂಚಿಸುವ ಮೂಲಕ ಅಸ್ಸಾಂನ ಎನ್‌ಆರ್‌ಸಿಯನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದಿರುವ ಸಿಪಿಐ(ಎಂ)ನ ಅಸ್ಸಾಂ ರಾಜ್ಯಸಮಿತಿ, ಇದಕ್ಕನುಗುಣವಾಗಿ, ಸುಪ್ರಿಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಅಸ್ಸಾಂ ನಲ್ಲಿ ಸಿಎಎ ಅನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಅಭಿಪ್ರಾಯ ಪಟ್ಟಿದೆ. ❍

ಜಿ.ಎನ್.ಸಾಯಿಬಾಬಾರವರ ಸಾವು....... ಪುಟ 7 ರಿಂದ

ಕ್ರೌರ್ಯದಿಂದ, ಅಮಾನವೀಯ ಮತ್ತು ಅವಮಾನಕಾರೀ ವರ್ತನೆಯಿಂದ ರಕ್ಷಣೆಯ ಹಕ್ಕುಗಳ ಉಲ್ಲಂಘನೆಯಾಗಿದೆ, ಇದರಲ್ಲಿ ತಾತರಮ್ಯವಿರಬಾರದು ಎಂಬ ಮತ್ತು ನ್ಯಾಯೋಚಿತ ವಾಸ್ತವ್ಯ ಮತ್ತು ಆರೋಗ್ಯದ ಹಕ್ಕು ಕೂಡ ಇದರಲ್ಲಿ ಸೇರಿದೆ ಎಂದು ಬೊಟ್ಟುಮಾಡಿ ಹೇಳುತ್ತ ಬಂದಿದೆ. ಇದೆಲ್ಲ ಅಂಗವೈಕಲ್ಯಗಳಿರುವ ವ್ಯಕ್ತಿಗಳಿಗೆ ನಿರ್ದಿಷ್ಟವಾದ, ಭಾರತವೂ ಸಹಿ ಮಾಡಿರುವ ವಿವಿಧ ಅಂತರಾಷ್ಟ್ರೀಯ ಸಂಧಿಗಳು ಮತ್ತು ನಮ್ಮ ಆಂತರಿಕ ಕಾನೂನುಗಳಿಗೆ ವಿರುದ್ಧವಾದ ವರ್ತನೆ ಎಂದೂ ಎನ್‌ಪಿಆರ್‌ಡಿ ಹೇಳಿದೆ.

ಚಿಕಿತ್ಸೆಯ ನಿರಾಕರಣೆ ಮತ್ತು ಜೈಲಿನಲ್ಲಿ ಅವರನ್ನು ತೀವ್ರ ಕಷ್ಟಗಳಿಗೆ ಒಳಪಡಿಸುವ ಮೂಲಕ ಕೊಟ್ಟ ಚಿತ್ರಹಿಂಸೆ ಆವರ ಆರೋಗ್ಯದ ಮೇಲೆ ವಿನಾಶಕಾರಿ ಪ್ರಭಾವ ಬೀರಿದ್ದರಿಂದ ಬಿಡುಗಡೆಯ ವೇಳೆಯಲ್ಲಿ ಅವರನ್ನು ಧ್ವಂಸಗೊಳಿಸಿತ್ತು, ಕೊನೆಗೆ ಅದಕ್ಕೆ ಅವರು ಜೀವವನ್ನೇ ತೆರಬೇಕಾಗಿ ಬಂತು.

ಸಾಯಿಬಾಬಾ ಬಡವರು, ಅಂಚಿಗೆ ತಳ್ಳಲ್ಪಟ್ಟವರು ಮತ್ತು ದಮನಕ್ಕೊಳಗಾದವರ ಪರವಾದ ಹೋರಾಟಗಾರರಾಗಿದ್ದರು, ಅವರು ಅನ್ಯಾಯದ ವಿರುದ್ಧ ಮತ್ತು ವ್ಯವಸ್ಥೆಯ ಕ್ರೌರ್ಯದ ವಿರುದ್ಧ ಹೋರಾಡಿದರು ಎಂದು ಅವರಿಗೆ ನಮನ ಸಲ್ಲಿಸುತ್ತ ಎನ್‌ಪಿಆರ್‌ಡಿ, ಈ ಹಂತದಲ್ಲಿ ಅವರ ನಿರ್ಗಮನ ಒಂದು ದೊಡ್ಡ ನಷ್ಟ ಎಂದು ವರ್ಣಿಸಿದೆ. ಅವರ ಪತ್ನಿ ವಸಂತ, ಮಗಳು ಮಂಜೀರಾ ಮತ್ತು ಅವರ ಕುಟುಂಬದ ಇತರ ಸದಸ್ಯರರಿಗೆ ಎನ್‌ಪಿಆರ್‌ಡಿ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ. ❍

‘ಪೂರ್ವ ಪ್ರಾಥಮಿಕ ಶಿಕ್ಷಣ ಬಲಗೊಂಡರೆ ಭಾರತದ ಭವಿಷ್ಯ ಉತ್ತಮಗೊಳ್ಳಲಿದೆ’..... ಪುಟ 5 ರಿಂದ

ಪಾತ್ರ’ದ ಬಗೆಗಿನ ಸಮಾವೇಶದಲ್ಲಿ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಸಚಿವಾಲಯದ ರಾಜ್ಯ ಸಚಿವರಾದ ವಿ.ಸೋಮಣ್ಣರವರು ಭಾಗವಹಿಸಿ ಮನವಿ ಸ್ವೀಕರಿಸಿದರು. ಅವರು ಮಾತನಾಡುತ್ತಾ, “ಕೋವಿಡ್ ಸಂದರ್ಭದಲ್ಲಿ ಅಂಗನವಾಡಿ ನೌಕರರ ಸೇವೆ ಅತ್ಯಂತ ಪರಿಣಾಮಕಾರಿಯಾಗಿತ್ತು. ಭೀಕರ ಪರಿಸ್ಥಿತಿಯಲ್ಲಿ ಅವರು ಬೀದಿಯಲ್ಲಿ ಇದ್ದು ಸೇವೆ ಸಲ್ಲಿಸಿದರು. ಅವರ ಶ್ರಮಕ್ಕೆ ತಕ್ಕ ಸ್ಥಾನಮಾನಗಳನ್ನು ಪಡೆದುಕೊಂಡಿಲ್ಲ. ಬೇಡಿಕೆಗಳು ಸರಿ ಇವೆ. ಈ ಬಗೆಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲಾಗುವುದು. ಅಲ್ಲದೆ. ಅಖಿಲ ಭಾರತ ಸಂಘಟನಾ ಮುಖಂಡರ ನಿಯೋಗವನ್ನು ಕೇಂದ್ರ ಡಬ್ಲ್ಯೂಸಿಡಿ ಸಚಿವರಲ್ಲಿ ಭೇಟಿ ಮಾಡಿಸುವೆ” ಎಂದರು. ಮನವಿ ಮತ್ರವನ್ನು ಕಾಂ. ಪ್ರಮೀಳ ಓದಿ, ನಂತರ ಅದನ್ನು ಸಲ್ಲಿಸಲಾಯಿತು. ರಾಜ್ಯ ಮುಖಂಡರಾದ ಶಾಂತ ಘಂಟೆ, ನಾಗರತ್ನ ಉಪಸ್ಥಿತರಿದ್ದರು.

ಶಿಕ್ಷಕರು ಮತ್ತು ಪೋಷಕರ ಪಾತ್ರ

‘ಐಸಿಡಿಎಸ್ ಬಲವರ್ದನೆ ಶಿಕ್ಷಕರು ಮತ್ತು ಪೋಷಕರ ಪಾತ್ರ’ ಕುರಿತ ಗೋಷ್ಠಿ 4 ರ ಚರ್ಚೆಯಲ್ಲಿ ಎಸ್.ಡಿ.ಎಂ.ಸಿ. ಪರವಾಗಿ ಸಜಸ್, ಬಾಲವಿಕಾಸ ಸಮಿತಿಯ ಶೋಭಾ, ಬಿ.ಜಿ.ವಿ.ಎಸ್. ಪರವಾಗಿ ಎಫ್.ಸಿ. ಚೇಗರೆಡ್ಡಿ ಮಾತನಾಡಿದರು. ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಐಸಿಡಿಎಸ್. ಬಲವರ್ಧನೆ ಕುರಿತು ಗೌರಮ್ಮ ಪಾಟೀಲ್, ಸುಶೀಲಾ ನಾಡ–ಕರ್ನಾಟಕದಿಂದ, ಡೈಸಿ ಮತ್ತು ದೇವಮಣಿ–ತಮಿಳುನಾನಿಂದ, ಸುಬ್ಬರಾವಮ್ಮ–ಆಂಧ್ರ ಮಾತನಾಡಿದರು. ಬಿ.ಶ್ರೀಪಾದ್ ಭಟ್‌ರವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚಂದ್ರಶೇಖರ ನುಗ್ಗಿ, ರಂಗನಾಥ ಹವಾಲ್ದಾರ್ ಅವರು ಗೋಷ್ಠಿಯಲ್ಲಿ ಹಾಜರಿದ್ದರು.

ಅಪೌಷ್ಟಿಕತೆಯಿಂದ ನಿಮಿಷಕ್ಕೆ 12 ಸಾವು
–ಯು. ಬಸವರಾಜು

ನಂತರ ಸಮಾರೋಪ ಸಮಾರಂಭ ನಡೆಸಲಾಯಿತು. ಈ 4ನೇ ಗೋಷ್ಠಿಯಲ್ಲಿ ಹಾಗೂ ಅಧಿವೇಶನದಲ್ಲಿ ಮೂಡಿ ಬಂದ ಸಾರಾಂಶ ವಿಚಾರ–ಸಲಹೆಗಳನ್ನು ಸಂಗ್ರಹ ಮಾಡಿ, ಹಕ್ಕೊತ್ತಾಯಗಳ ರೂಪದಲ್ಲಿ ಶಶಾಂಕ್ ಮಂಡಿಸಿದರು. ಸಮಾರೋಪ ಸಮಾರಂಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜು ಮಾತನಾಡಿ “ದೇಶದಲ್ಲಿ ಅಪೌಷ್ಟಿಕತೆಯಿಂದ ನಿಮಿಷಕ್ಕೆ 12 ಜನ ಸಾವನ್ನಪ್ಪುತ್ತಿದ್ದಾರೆ. ಭಾರತದಲ್ಲಿ 65% ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಇಂತಹ ಮಹಿಳೆಯರ ರಕ್ಷಣೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ಐ.ಸಿ.ಡಿ.ಎಸ್. ಯೋಜನೆ ಬಲಗೊಳ್ಳಬೇಕು. ಜನಪರವಾದ ಕಾಳಜಿ ಇಲ್ಲದ ಸರ್ಕಾರಗಳು ಈ ಯೋಜನೆಯನ್ನು ದುರ್ಬಲಗೊಳಿಸುವ ಕೆಲಸ ಮಾಡುತ್ತಿವೆ. ಕೇಂದ್ರ ಸರ್ಕಾರ ಶಿಕ್ಷಣವನ್ನು ಖಾಸಗೀಕರಣಗೊಳಿಸುತ್ತಿದೆ. ಶಿಕ್ಷಣವನ್ನು ಮಾರಾಟದ ಸರಕನ್ನಾಗಿಸಿದ ಸರ್ಕಾರಗಳು ಈಗ ಅಂಗನವಾಡಿಗಳನ್ನು ಖಾಸಗೀಕರಣಗೊಳಿಸುವ ಹುನ್ನಾರ ನಡೆಸಿವೆ.” ಎಂದು ಖಂಡಿಸಿದರು.

ನಾನು ಸದನದಲ್ಲಿ ಮಾತಾಡುತ್ತೇನೆ–ಕರೆಮ್ಮ

ದೇವದುರ್ಗ ಶಾಸಕಿ ಕರೆಮ್ಮ ನಾಯಕ್ ಮಾತನಾಡಿ “ಅಂಗನವಾಡಿಗಳನ್ನು ಬಲಗೊಳಿಸುವುದರಲ್ಲಿ ಕೇಂದ್ರ ಸರ್ಕಾರದ್ದು ದೊಡ್ಡ ಜವಾಬ್ದಾರಿ. ಆದರೆ ಯೋಜನೆಗೆ ನೀಡುವ ಹಣ ಕಡಿತ ಮಾಡುವ ಮೂಲಕ ದುರ್ಬಲಗೊಳಿಸಲಾಗಿದೆ. ತಮ್ಮ ರಾಜಕೀಯಕ್ಕೆ ಅಂಗನವಾಡಿ ನೌಕರರನ್ನು ದುರುಪಯೋಗ ಪಡಿಸಿಕೊಳ್ಳದೇ ಅಂಗನವಾಡಿಗಳಲ್ಲಿ ಎಲ್.ಕೆ.ಜಿ.–ಯು.ಕೆ.ಜಿ. ಆರಂಭಿಸಬೇಕು. ಈ ಕುರಿತು ನಾನು ಸದನದಲ್ಲಿ ಮಾತಾಡುತ್ತೇನೆ” ಎಂದರು.

ಸಮಾರೋಪ ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ನಿರ್ದೇಶಕರಾದ ಸಿದ್ಧೇಶ್ವರ ಅವರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಐಸಿಡಿಎಸ್ ಬಲವರ್ಧನೆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರಕಾರ ಕೈಗೊಂಡಿರುವ ಕ್ರಮಗಳು ಮುಂತಾದವುಗಳ ಬಗೆಗೆ ಮಾತನಾಡಿದರು.

ಸಮಾವೇಶದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಎಸ್.ಎಫ್.ಐ., ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮುಂತಾದ ಸಂಘಟನೆಗಳ ಪ್ರತಿನಿಧಿಗಳು, ‘ಗ್ರಾಚ್ಯುಟಿ’ ಪುಸ್ತಕ ಅನುವಾದ ಮಾಡಿದ ಎಸ್. ಸತ್ಯಾ ಭಾಗವಹಿಸಿದ್ದರು.

ಐಸಿಡಿಎಸ್ ಉಳಿಸಿ–ಮಕ್ಕಳನ್ನು ರಕ್ಷಿಸಿ ವೇದಿಕೆಯ ಸಂಚಾಲಕರಾದ ಡಾ. ವಿಜಯಮ್ಮ, ಆರ್ಥಿಕತಜ್ಞರಾದ ಡಾ. ಟಿ.ಆರ್. ಚಂದ್ರಶೇಖರ್, ಶಿಕ್ಷಣ ತಜ್ಞರಾದ ಶ್ರೀ ಪಾದ ಭಟ್, ಎಸ್.ವರಲಕ್ಷ್ಮಿ ಇವರಲ್ಲದೇ ಕೆ.ಎಸ್. ವಿಮಲಾ, ವಿನಯ್ ಶ್ರೀನಿವಾಸ, ರಾಜೇಶ್ವರಿ ಮುಂತಾದವರು ವಿಚಾರ ಸಂಕಿರಣ–ಸಮಾವೇಶದ ಯಶಸ್ಸಿಗೆ ಶ್ರಮಿಸಿದರು. ರಾಜ್ಯದ 30 ಜಿಲ್ಲೆಗಳಿಂದ 600ಕ್ಕೂ ಹೆಚ್ಚು ನೌಕರರು ಭಾಗವಹಿಸಿದ್ದರು.

ಸರಕಾರಕ್ಕೆ ಸಲ್ಲಿಸಲಾಗಿರುವ
ಹಕ್ಕೊತ್ತಾಯ ಪತ್ರದ ಪ್ರಮುಖಾಂಶಗಳು

- 2024ರ ಚಳಿಗಾಲದ ಸಂಸತ್ ಅಧಿವೇಶನದಲ್ಲಿ, ಪಾಲನೆ, ಪೋಷಣೆ ಮತ್ತು ಪೂರ್ವ–ಪ್ರಾಥಮಿಕ ಶಿಕ್ಷಣವನ್ನು ಒಳಗೊಳ್ಳುವ ರೀತಿಯಲ್ಲಿ ಅಂಗನವಾಡಿಗಳ ಮೂಲಕ ಜಾರಿಗೊಂಡಿರುವ ಐಸಿಡಿಎಸ್ ಯೋಜನೆಗೆ ಕಾನೂನು ಸ್ವರೂಪ ಕೊಡುವ ಕರಡು ಮಸೂದೆಯೊಂದನ್ನು ಮಂಡಿಸಿ ಅದನ್ನು ಅಂಗೀಕರಿಸಬೇಕು.
- ಕರಡು ಮಸೂದೆಯನ್ನು ರೂಪಿಸಲು ಐಸಿಡಿಎಸ್‌ನ ಭಾಗೀದಾದರರೆಲ್ಲರನ್ನೂ ಒಳಗೊಂಡ ಸಮಿತಿಯೊಂದನ್ನು ಅಕ್ಟೋಬರ್ 30ರ ಒಳಗೆ ರಚಿಸಬೇಕು. ಕಾನೂನು ಜಾರಿಗೊಂಡ ಮೇಲೆ, ಆ ಕಾನೂನಿನ ಅನುಷ್ಠಾನವನ್ನು ಕೂಡ ಈ ಸಮಿತಿ ಖಾತ್ರಿಪಡಿಸಿಕೊಳ್ಳಬೇಕು.
- ಐಸಿಡಿಎಸ್ ಯೋಜನೆಗೆ ಅಗತ್ಯವಿರುವಷ್ಟು ಮತ್ತು ಹಣದುಬ್ಬರಕ್ಕೆ ಅನುಗುಣವಾಗಿ ಬಜೆಟ್ ಅನ್ನು ಹೆಚ್ಚಿಸಬೇಕು.
- ಅಂಗನವಾಡಿ ಕೇಂದ್ರಗಳಿಗೆ ಕೊಡುವ ಪೂರಕ ಪೌಷ್ಟಿಕ ಆಹಾರದ ಮೇಲೆ ಜಿಎಸ್‌ಟಿ ಹಾಕಬಾರದು.
- ಐಸಿಡಿಎಸ್ ಯೋಜನೆಯ ಮೇಲುಸ್ತುವಾರಿಗಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ರಚಿಸಬೇಕು.
- 2018 ಸೆಪ್ಟಂಬರ್‌ನಿಂದ ಇದುವರೆಗೂ ಅಂಗನವಾಡಿ ನೌಕರರ ವೇತನವನ್ನು ಹೆಚ್ಚಿಸಿಲ್ಲವಾದ್ದರಿಂದ ಕನಿಷ್ಠ 26 ಸಾವಿರಕ್ಕೆ ಅವರ ವೇತನವನ್ನು ಹೆಚ್ಚಿಸಬೇಕು.
- 2022 ಏಪ್ರಿಲ್ 25ರಂದು ಸುಪ್ರೀಂ ಕೋರ್ಟು ನೀಡಿದ ತೀರ್ಪಿನಂತೆ ಗ್ರಾಚುಯಿಟಿಯನ್ನು ಕೇಂದ್ರ ಸರ್ಕಾರವು ಕೂಡಲೇ ದೇಶದಾದ್ಯಂತ ಜಾರಿಗೊಳಿಸಬೇಕು.
- 45ನೇ ಐ.ಎಲ್.ಸಿ. ಶಿಫಾರಸ್ಸುಗಳನ್ನು ಜಾರಿಗೆ ತರಬೇಕು.
- ಕೇಂದ್ರ ಸರ್ಕಾರವು ಐಸಿಡಿಎಸ್ ಯೋಜನೆಯ ಅನುದಾನವನ್ನು ಸರಿಯಾದ ಸಮಯಕ್ಕೆ ಬಿಡುಗಡೆ ಮಾಡಬೇಕು. ಹಾಗಾಗದಿದ್ದರೂ ರಾಜ್ಯಸರ್ಕಾರ ಅದನ್ನು ತುಂಬಿಕೊಡುವ ಮೂಲಕ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ವ್ಯವಸ್ಥೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಖಾತ್ರಿಪಡಿಸಿಕೊಳ್ಳಬೇಕು.



- 2017 ರಿಂದ ಇಂದಿನವರೆಗೆ ಫಲಾನುಭವಿಗಳಿಗೆ ನೀಡಲಾಗುವ ತಲಾ ವೆಚ್ಚವನ್ನು ಹೆಚ್ಚಿಸಿಲ್ಲ. ಆದ್ದರಿಂದ, ಬೆಲೆಯೇರಿಕೆ ಮತ್ತು ಹಣದುಬ್ಬರಕ್ಕೆ ಅನುಗುಣವಾಗಿ ತಲಾ ವೆಚ್ಚವನ್ನು ಹೆಚ್ಚಳಗೊಳಿಸಬೇಕು.
- ಅಂಗನವಾಡಿಕಾರ್ಯಕರ್ತೆಯರನ್ನು ಐಸಿಡಿಎಸ್‌ಯೇತರ ಕೆಲಸಗಳಿಗೆ ನಿಯೋಜನೆಗೊಳಿಸಬಾರದು. ❍

ಕಾರ್ಪೊರೇಟ್ ಜಗತ್ತನ್ನು ಬೆಚ್ಚಿಬೀಳಿಸಿದ 37 ದಿನಗಳು
ಸ್ಯಾಮ್ ಸಂಗ್ ಇಂಡಿಯಾ ಕಾರ್ಮಿಕರ ಐತಿಹಾಸಿಕ ಹೋರಾಟಕ್ಕೆ ಜಯ

ಸಂಘ ರಚಿಸಿಕೊಳ್ಳುವ ಹಕ್ಕು ಮತ್ತು ಸಾಮೂಹಿಕ ಚೌಕಾಸಿ ಹಕ್ಕುಗಳಿಗಾಗಿನ ತಮ್ಮ ಬೇಡಿಕೆಗಳನ್ನು ಅಂಗೀಕರಿಸಿದ ನಂತರ, ಚೆನ್ನೈ ಸಮೀಪದ ಶ್ರೀಪೆರಂಬದೂರಿನಲ್ಲಿರುವ ದಕ್ಷಿಣ ಕೊರಿಯಾದ ಎಲೆಕ್ಟ್ರಾನಿಕ್ಸ್ ಕಂಪನಿ 'ಸ್ಯಾಮ್‌ಸಂಗ್ ಇಂಡಿಯಾ' ಕಾರ್ಮಿಕರು ಅಕ್ಟೋಬರ್ 17ರಿಂದ ಕೆಲಸಕ್ಕೆ ಮರಳಿದ್ದಾರೆ. ಕಂಪನಿ ಆಡಳಿತವು ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸುವ ಬದಲು ಮುಷ್ಕರವನ್ನು ಹತ್ತಿಕ್ಕಲು ಪ್ರಯತ್ನಿಸಿತು. ಪೊಲೀಸರು ಆಡಳಿತಕ್ಕೆ ಆಸರೆಯಾಗಿ ಕಾರ್ಯನಿರ್ವಹಿಸಿದರು. ಸಮಸ್ಯೆಗಳ ಪರಿಹಾರಕ್ಕೆ ಕಾರ್ಮಿಕ ಇಲಾಖೆ ಯಾವುದೇ ಪ್ರಯತ್ನ ಮಾಡಲಿಲ್ಲ. ಇವೆಲ್ಲವನ್ನೂ ಎದುರಿಸಿ, ಸತತ 37 ದಿನಗಳ ಕಾಲ ದಿಟ್ಟವಾಗಿ ಮುಷ್ಕರ ನಡೆಸಿದ ಕಾರ್ಮಿಕರು ಐತಿಹಾಸಿಕ ವಿಜಯದೊಂದಿಗೆ ಕೆಲಸಕ್ಕೆ ಮರಳಿದ್ದಾರೆ.

ಅಕ್ಟೋಬರ್ 14 ಮತ್ತು 15 ರಂದು ಚೆನ್ನೈನ ಮುಖ್ಯಮಂತ್ರಿಗಳ ಸಚಿವಾಲಯದ ಪ್ರಧಾನ ಕಚೇರಿಯಲ್ಲಿ ನಡೆದ ತ್ರಿಪಕ್ಷೀಯ ಮಾತುಕತೆಯ ನಂತರ ಸ್ಯಾಮ್‌ಸಂಗ್ ಆಡಳಿತ ಮಂಡಳಿ ಮತ್ತು ಕಾರ್ಮಿಕರ ಸಂಘದಿಂದ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದರಲ್ಲಿ ತಮಿಳುನಾಡಿನ ನಾಲ್ವರು ಸಚಿವರು ಭಾಗವಹಿಸಿದ್ದರು. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಇದರ ನಂತರ ಈ ಬಗ್ಗೆ ಚರ್ಚಿಸಲು ಅಕ್ಟೋಬರ್ 16ರಂದು ಸ್ಯಾಮ್‌ಸಂಗ್ ಇಂಡಿಯಾ ಲೇಬರ್ ಯೂನಿಯನ್ ಕೌನ್ಸಿಲ್ ಸಭೆ ನಡೆಯಿತು. ಸಭೆಯಲ್ಲಿ ತ್ರಿಪಕ್ಷೀಯ ಮಾತುಕತೆಯ ಶಿಫಾರಸುಗಳನ್ನು ಕಾರ್ಮಿಕರ ಮುಂದೆ ಇಡಲಾಯಿತು. ಚರ್ಚೆಯ ನಂತರ ಒಪ್ಪಂದವನ್ನು ಅಂಗೀಕರಿಸಲಾಯಿತು ಮತ್ತು ಮುಷ್ಕರವನ್ನು ಕೊನೆಗೊಳಿಸಿ ಮರುದಿನ (ಅಕ್ಟೋಬರ್ 17) ಕೆಲಸಕ್ಕೆ ಮರಳಲು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಸ್ಯಾಮ್‌ಸಂಗ್ ನಿಂದ ಕಾರ್ಮಿಕರ ತೀವ್ರ ಶೋಷಣೆ

ಇತ್ತೀಚಿನ ವರ್ಷಗಳಲ್ಲಿ ಗೃಹಬಳಕೆಯ ಮತ್ತು ಮೊಬೈಲ್ ಫೋನ್‌ಗಳಂತಹ ಎಲೆಕ್ಟ್ರಾನಿಕ್ಸ್ ವಸ್ತುಗಳ ಬೇಡಿಕೆಯ ಹೆಚ್ಚಳದಿಂದಾಗಿ ಟೆಕ್ ವಲಯವನ್ನು ಭಾರತದ ಆರ್ಥಿಕತೆಯ ಪ್ರಮುಖ ಸ್ತಂಭಗಳಲ್ಲಿ ಒಂದನ್ನಾಗಿ ಮಾಡಿದೆ. ದೇಶಾದ್ಯಂತ 2.5 ಕೋಟಿ ಜನರು ಎಲೆಕ್ಟ್ರಾನಿಕ್ಸ್ ವಸ್ತುಗಳ ತಯಾರಿಕಾ ಕಂಪನಿಗಳಲ್ಲಿ ಉದ್ಯೋಗದಲ್ಲಿದ್ದಾರೆ. ಚೀನಾದ ನಂತರ ಭಾರತವು ಈಗ ಮೊಬೈಲ್ ಫೋನ್‌ಗಳ ವಿಶ್ವದ ಎರಡನೇ ಅತಿದೊಡ್ಡ ಉತ್ಪಾದಕವಾಗಿದೆ.

ಈ ವಲಯದಿಂದ ಉತ್ಪತ್ತಿಯಾಗುವ ಬೃಹತ್ ಬೆಳವಣಿಗೆ ಮತ್ತು ಅಪಾರ ಲಾಭವು ಕಾರ್ಮಿಕರ ತೀವ್ರ ಶೋಷಣೆಯನ್ನು ಆಧರಿಸಿದೆ. ಚೆನ್ನೈನ ಹೊರಭಾಗದಲ್ಲಿರುವ, ಕಾಂಚೀಪುರಂ ಜಿಲ್ಲೆಗೆ ಸೇರಿರುವ ಶ್ರೀಪೆರಂಬದೂರಿನಲ್ಲಿ 2007ರಲ್ಲಿ ಸ್ಥಾಪನೆಯಾಗಿರುವ ಸ್ಯಾಮ್‌ಸಂಗ್ ಬೃಹತ್ ಸ್ಥಾವರವು ಇದಕ್ಕೆ ಹೊರತಾಗಿಲ್ಲ. ಇಲ್ಲಿಯೂ ಲಾಭದ ಕೊನೆಯ ಹನಿಗಳಿಗೆ ಕಾರ್ಮಿಕರನ್ನು ಹಿಂಡಲಾಗುತ್ತದೆ. ಕಾರ್ಮಿಕರು ವೇತನವಿಲ್ಲದೆ ಹೆಚ್ಚುವರಿ ಗಂಟೆಗಳ ಕಾಲ ಕೆಲಸ ಮಾಡಲು ಒತ್ತಾಯಿಸಲ್ಪಡುತ್ತಾರೆ. ಏರುತ್ತಿರುವ ಹಣದುಬ್ಬರ ಇದರಿಂದಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಹೊರತಾಗಿಯೂ ಇಲ್ಲಿನ ಉದ್ಯೋಗಿಗಳ ಸಂಬಳವನ್ನು ಹೆಚ್ಚಿಸಿಲ್ಲ ಮತ್ತು ಅಸುರಕ್ಷಿತ ಪರಿಸ್ಥಿತಿಗಳಲ್ಲಿ ಶ್ರಮಿಸಲು ಒತ್ತಾಯಿಸಲಾಗುತ್ತದೆ.

17 ವರ್ಷಗಳ ನಂತರ ಹೊರಹೊಮ್ಮಿದ ಸಂಘ

ಸ್ಯಾಮ್‌ಸಂಗ್ ಕಂಪನಿಯ ಲಾಭ ವರ್ಷ ವರ್ಷವೂ ಹೆಚ್ಚುತ್ತಿದೆ. ಅದರ ಜತೆಗೆ ಕಾರ್ಮಿಕರ ಸಮಸ್ಯೆಗಳು ಕೂಡಾ ಹೆಚ್ಚುತ್ತಿವೆ. 10 ವರ್ಷ ಮೇಲ್ಪಟ್ಟು ಕೆಲಸ ಮಾಡಿದ ಕೆಲ ನೌಕರರು ಇನ್ನೂ ತಿಂಗಳಿಗೆ 25 ಸಾವಿರ ರೂ.ಗಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ. ಆಡಳಿತ ಮಂಡಳಿ ಇತ್ತಕಡೆ ಗಮನ ಕೊಡಲಿಲ್ಲ. 9 ಗಂಟೆಗಳ ಪಾಳಿಗಳನ್ನು ಮೀರಿ ಕಾರ್ಮಿಕರು ಕೆಲಸ ಮಾಡುವಂತೆ ಮಾಡಲಾಗಿದೆ. ಹಗಲಿನಲ್ಲಿ 10-15 ನಿಮಿಷಗಳ ವಿರಾಮ ಪಡೆಯಲೂ ಅವಕಾಶ ಕೊಡುವುದಿಲ್ಲ. ಇದು ದೈಹಿಕ ಕಾಯಿಲೆಗಳಿಗೆ ಕಾರಣವಾಗುತ್ತಿದೆ.

> **ಸಂಘ ಕಟ್ಟುವ ಹಕ್ಕು ಸಂವಿಧಾನ ನೀಡಿರುವ ಮೂಲಭೂತ ಹಕ್ಕು. ಅದಕ್ಕಾಗಿ ಯಾರ ಬಳಿಯೂ ಭಿಕ್ಷೆ ಬೇಡಬೇಕಾಗಿಲ್ಲ. ಇಂದು ನಾವು ಅನುಭವಿಸುತ್ತಿರುವ ಎಂಟು ಗಂಟೆಗಳ ಕೆಲಸದ ದಿನಗಳು, ರಜಾದಿನಗಳು ಮತ್ತು ವಿಶೇಷ ಸವಲತ್ತುಗಳು ಕಾರ್ಮಿಕ ವರ್ಗದ ಹೋರಾಟ ಮತ್ತು ಅವರು ಚೆಲ್ಲಿದ ರಕ್ತದಿಂದ ಬಂದಿದೆ. ಅದನ್ನು ಎಂದಿಗೂ ಬಿಟ್ಟುಕೊಡಲು ಸಾಧ್ಯವಿಲ್ಲ ಎಂಬುದನ್ನು ಸ್ಯಾಮ್‌ಸಂಗ್ ಕಾರ್ಮಿಕರು ತಮ್ಮ ಹೋರಾಟದ ಮೂಲಕ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ತಮಿಳುನಾಡಿನ ಕಾಂಚೀಪುರಂನಲ್ಲಿರುವ ಸ್ಯಾಮ್‌ಸಂಗ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿರುವ ಯುವ ಕಾರ್ಮಿಕರ ದೃಢ ಸಂಕಲ್ಪ ದೇಶವೇ ತಿರುಗಿ ನೋಡುವಂತೆ ಮಾಡಿದೆ. ಎಲ್ಲಾ ಕೋನಗಳಿಂದಲೂ ಬಿಕ್ಕಟ್ಟುಗಳನ್ನು ಎದುರಿಸಿ ಕಬ್ಬಿಣದಂತೆ ದೃಢವಾಗಿ ನಿಂತು, ಸತತ 37 ದಿನಗಳ ಐತಿಹಾಸಿಕ ಮುಷ್ಕರ ನಡೆಸಿ ವಿಜಯದೊಂದಿಗೆ ಕೆಲಸಕ್ಕೆ ಮರಳಿದ್ದಾರೆ.**





ಈ ವೇಳೆ ಕಾರ್ಮಿಕರು ಸಿಐಟಿಯು ಜಿಲ್ಲಾ ಮುಖಂಡರನ್ನು ಸಂಪರ್ಕಿಸಿದರು. ಜೂನ್ 16, 2024ರಂದು ನಡೆದ ಕಾರ್ಮಿಕರ ಕೌನ್ಸಿಲ್ ಸಭೆಯಲ್ಲಿ ಸಂಘವನ್ನು ರಚಿಸಲಾಯಿತು. ಅದೇ ತಿಂಗಳ 26ರಂದು ಸಂಘದ ನೊಂದಣಿಗಾಗಿ ರಿಜಿಸ್ಟ್ರಾರ್‌ಗೆ ಅರ್ಜಿ ಸಲ್ಲಿಸಲಾಗಿದೆ. ಅದರ ಮರುದಿನವೇ ಸಂಘದ ಪದಾದಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಬಗ್ಗೆ ಪರಿಚಯ ಪತ್ರವನ್ನು ಆಡಳಿತಕ್ಕೆ ಕಳುಹಿಸಲಾಗಿದೆ. ಆ ನಂತರ ಜುಲೈ 11 ರಂದು ವೇತನ ಹೆಚ್ಚಳ ಮತ್ತು ಸಾಮಾನ್ಯ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಆಡಳಿತಕ್ಕೆ ಕಳುಹಿಸಲಾಗಿದೆ.

ಇದರ ನಂತರ ಕಂಪನಿಯ ಆಡಳಿತದಿಂದ ಕಾರ್ಮಿಕ ವಿರೋಧಿ, ಸಂಘ-ವಿರೋಧಿ ಚಟುವಟಿಕೆಗಳು ಮತ್ತು ಬೆದರಿಕೆ ಹೆಚ್ಚಾಗುತ್ತದೆ. ಪೊಲೀಸರಿಗೆ ದೂರು ನೀಡಿದರೆ ದೂರು ನೀಡಿದವರನ್ನು ಠಾಣೆಯಲ್ಲೇ ಕೂರಿಸುತ್ತಾರೆ. ಕಾರ್ಮಿಕ ಇಲಾಖೆ ನಿರ್ಣಾಯಕವಾಗಿ ಮಧ್ಯಪ್ರವೇಶಿಸಲಿಲ್ಲ. ಕಾರ್ಮಿಕರ ರಕ್ಷಣೆಗೆ ಬೇರೆ ದಾರಿಯಿಲ್ಲದೆ ಕಾರ್ಮಿಕರು ಮುಷ್ಕರಕ್ಕಿಳಿದರು.

ಉತ್ತಮ ವೇತನ ಹಾಗೂ ಕೆಲಸದ ಪರಿಸ್ಥಿತಿಗಳಿಗೆ ಒತ್ತಾಯಿಸಿ ಮತ್ತು ಹೊಸದಾಗಿ ರಚಿಸಲಾದ ತಮ್ಮ ಕಾರ್ಮಿಕ ಸಂಘಟನೆ 'ಸ್ಯಾಮ್‌ಸಂಗ್ ಇಂಡಿಯಾ ವರ್ಕರ್ಸ್ ಯೂನಿಯನ್' (SIWU) ಮಾನ್ಯತೆಗಾಗಿ, ಸ್ಯಾಮ್ಸಂಗ್‌ನ 1,000ಕ್ಕೂ ಹೆಚ್ಚು ಕಾರ್ಮಿಕರು CITU (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಬ್ಯಾನರ್ ಅಡಿಯಲ್ಲಿ ಸೆಪ್ಟೆಂಬರ್ 9ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಇಳಿದರು. ಈ ಸಂಘವು ಈ ಸಂಸ್ಥೆಯ ಶೇ. 75ರಷ್ಟು ಕಾರ್ಮಿಕರನ್ನು ಪ್ರತಿನಿಧಿಸುತ್ತಿದೆ.

ಕಾರ್ಮಿಕರ ಒಗ್ಗಟ್ಟು, ಸಂಕಲ್ಪ

ನವ ಉದಾರೀಕರಣ ನೀತಿ ಜಾರಿ ಪ್ರಪಂಚದಾದ್ಯಂತ ಶೋಷಣೆಯ ಹೊಸ ರೂಪಗಳನ್ನು ಸೃಷ್ಟಿಸುತ್ತಿದೆ. ವಿಶೇಷವಾಗಿ ಕಾರ್ಪೊರೇಟ್ ಬಂಡವಾಳವು ಪರಭಕ್ಷಕ ಲಾಭದ ಏಕೈಕ ಗುರಿಯೊಂದಿಗೆ ಬೇಟೆಯಾಡುತ್ತಿದೆ. ಇಂತಹ ಶೋಷಣೆ ಮತ್ತು ದಬ್ಬಾಳಿಕೆಗಳು ದುಡಿಯುವ ವರ್ಗದ ಉದಯವನ್ನು ಗುಣಿಸುತ್ತವೆ ಎಂಬುದು ಇತಿಹಾಸ. ಸ್ಯಾಮ್‌ಸಂಗ್ ಇಂಡಿಯಾದಲ್ಲಿಯೂ ಇದೇ ಆಯಿತು.

ಸ್ಯಾಮ್‌ಸಂಗ್ ನೌಕರರು ಮುಷ್ಕರ ನಡೆಸಿದರೆ, ಅಲ್ಲಿ ಯೂನಿಯನ್ ಬಂದರೆ ತಮಿಳುನಾಡು ರಾಜ್ಯಕ್ಕೆ ಬಂಡವಾಳ ಬರುವುದಿಲ್ಲ; ಉದ್ಯೋಗಗಳ ಬೆಳವಣಿಗೆ ಇರುವುದಿಲ್ಲ; ಇದರಿಂದಾಗಿ ಕಾರ್ಮಿಕರಿಗೆ ಕೆಲಸ ಇರುವುದಿಲ್ಲ ಎಂಬ ಸುಳ್ಳನ್ನು ಹಬ್ಬಿಸಿದರು. ಬಿರುಗಾಳಿಯಂತೆ ಬಂದ ಸುಳ್ಳುಗಳು ಅಷ್ಟೇ ಬೇಗ ಮಾಯವಾದವು. ಏಕೆಂದರೆ, ಕಳೆದ 25 ವರ್ಷಗಳಲ್ಲಿ ಕಾರ್ಮಿಕ ಸಂಘಟನೆಗಳ ಹೋರಾಟಗಳಿಂದ ಒಂದೇ ಒಂದು ಕಾರ್ಖಾನೆ ಮುಚ್ಚಿಲ್ಲ. ಅದೇ ಕೈಗಾರಿಕಾ ಪ್ರದೇಶದಲ್ಲಿನ ಹಲವು ಕಾರ್ಖಾನೆಗಳಲ್ಲಿ ಸಿಐಟಿಯು ನೇತೃತ್ವದ ಸಂಘಟನೆಗಳು ಹಲವು ವರ್ಷಗಳಿಂದ ಇವೆ. ಸಂಘ ರಚಿಸಿಕೊಂಡ ಕಾರಣಕ್ಕೆ ಅವ್ಯಾವುವೂ ಮುಚ್ಚಿಹೋಗಲಿಲ್ಲ. ಆದರೆ ಕಾರ್ಮಿಕರ ಒಗ್ಗಟ್ಟು ಮತ್ತು ಸಂಕಲ್ಪ ಕ್ಷೇತ್ರದಲ್ಲಿ ಸಾಬೀತಾಗಿದೆ.

ಮುಷ್ಕರವನ್ನು ಹತ್ತಿಕ್ಕಲು ಹಲವು ತಂತ್ರಗಳು

ಬಂಡವಾಳಗಾರರು ಕಾರ್ಮಿಕರ ಹೋರಾಟಗಳನ್ನು ಹತ್ತಿಕ್ಕಲು ಏನೆಲ್ಲಾ ತಂತ್ರಗಳನ್ನು, ದಾಳಿ ದಬ್ಬಾಳಿಕೆಗಳನ್ನು, ಕಿರುಕುಳ, ಬೆದರಿಕೆಗಳನ್ನು ಮಾಡುತ್ತಾರೆ ಎಂಬುದಕ್ಕೆ ಇತಿಹಾಸದಲ್ಲಿ ಸಾಕಷ್ಟು ಉದಾಹರಣೆಗಳಿವೆ.

ಮುಷ್ಕರವನ್ನು ಹತ್ತಿಕ್ಕಲು ಸ್ಯಾಮ್‌ಸಂಗ್ ಆಡಳಿತ ಮಂಡಳಿಯೂ ಇಂಥದೇ ತಂತ್ರಗಳನ್ನು ಹೂಡಿ ಕಾರ್ಮಿಕರನ್ನು ಬೆದರಿಸಲು ಆರಂಭಿಸಿತು. ಆಡಳಿತದ ಅಧಿಕಾರಿಗಳು ಕಾರ್ಮಿಕರ ಮನೆ ಮನೆಗೆ ತೆರಳಿ, ಕುಟುಂಬದ ಮಹಿಳೆಯರಿಗೆ ನಿಮ್ಮ ಪತಿಗೆ ಸಂಘವನ್ನು ತೊರೆಯುವಂತೆ ಹೇಳಿ, ಇಲ್ಲದಿದ್ದರೆ ಅವರನ್ನು ಕೆಲಸದಿಂದ ವಜಾಗೊಳಿಸುತ್ತೇವೆ ಎಂದು ಬೆದರಿಕೆ ಹಾಕಿದರು. ಕಂಪನಿ ಸಮೀಪ ಇರುವ ಚಂದವೇಲ್ಲೂರು, ತಿರುಮಂಗಲಂ, ಎಳಚೂರು ಪಂಚಾಯಿತಿ ಮುಖಂಡರನ್ನು ಕಂಪನಿ ಆಡಳಿತಾಧಿಕಾರಿಗಳು ಭೇಟಿ ಮಾಡಿ, ಕಾರ್ಮಿಕರನ್ನು ಸಂಘದಿಂದ ದೂರ ಸರಿಯುವಂತೆ ಮಾಡಲು ಒತ್ತಾಯಿಸಿದರು. ಸಂಘದ ಪದಾಧಿಕಾರಿಗಳನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ರೂ.40 ಲಕ್ಷ ನೀಡುತ್ತೇವೆ; ರಾಜೀನಾಮೆ ನೀಡಿ ಎಂದು ಒತ್ತಾಯಿಸಿದರು.

ಆಡಳಿತ ಮಂಡಳಿಯ ಪರವಾಗಿ ಒಂದು ಸಂಘ ರಚನೆ

ಒಂದು ದಿನ ಕಾರ್ಮಿಕರು ಕೆಲಸ ಮುಗಿಸಿ ಕಾರ್ಖಾನೆ ಆವರಣದಿಂದ ಹೊರ ಹೋಗುತ್ತಿದ್ದಾಗ ಆಡಳಿತಾಧಿಕಾರಿಗಳು ಅವರನ್ನು ಕರೆದು, ಸಿಐಟಿಯು ಯೂನಿಯನ್ ಗೆ ನೀವ್ಯಾರೂ ಸೇರಬೇಡಿ, ಹೊರಗಿನಿಂದ ಯಾವುದೇ ಯೂನಿಯನ್ ಸದಸ್ಯರು ಬರಬೇಡಿ ಎಂದು ಬೆದರಿಕೆ ಹಾಕಿದರು. ಇನ್ನೊಂದು ಬಾರಿ ಆಡಳಿತ ಮಂಡಳಿಯವರು ಕಾರ್ಮಿಕರನ್ನು ಕರೆದು ಸಭೆ ನಡೆಸಲು ಮುಂದಾದಾಗ ಕಾರ್ಮಿಕರೆಲ್ಲರೂ ಅವರನ್ನು ನಿರ್ಲಕ್ಷಿಸಿ ಹೊರ ನಡೆದರು. ಮೂರನೇ ಬಾರಿಗೆ ಆಡಳಿತ ಮಂಡಳಿಯ ಪುಟ 12 ಕ್ಕೆ



ಟಾಟಾ ಸಾಮ್ರಾಜ್ಯದ ಬಂಡವಾಳ........ ಪುಟ 2 ರಿಂದ

ನೂಲಿನ ತಳಿಗಳನ್ನು ಆಮದು ಮಾಡಿಕೊಂಡು ಬೆಳೆಸಲಾಯಿತು. ಇದರಲ್ಲಿ ಟಾಟಾಗಳು, ಅವರ ಈಜಿಪ್ಟ್, ಉತ್ತರ ಆಫ್ರಿಕಾ ಸಂಬಂಧಗಳ ಮೂಲಕ ಮುಂದಿದ್ದುದರಿಂದ ಅವರ ಕೈ ಉಳಿದವರಿಗಿಂತ ಮೇಲಾಯಿತು. ಟಾಟಾಗಳಿಗೇನೋ ಲಾಭದ ಸೂರೆಯಾಯಿತು. ಆದರೆ ಆಹಾರ ಧಾನ್ಯಗಳ ಉತ್ಪಾದನೆ ಕುಗ್ಗಿದುದರಿಂದ ಭಾರತದಲ್ಲಿ ಮಳೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡಾ ದೊಡ್ಡ ಬರಗಾಲಗಳಾಗಿ ಪರಿಣಮಿಸಿತು. ಈ ಕ್ಷಾಮಗಳ ಫಲವಾಗಿ ಒಂದೊಂದು ಕ್ಷಾಮದಲ್ಲೂ ಹಲವು ಲಕ್ಷ ಜನರು ಸಾವಿಗೀಡಾದರು.

ಕೇವಲ ಒಂದು ದಶಕ ಕಾಲದ ಈ ಹತ್ತಿ ಬೂಮ್ ಇಳಿತ ಕಾಣುವುದರೊಳಗೆ ಟಾಟಾಗಳು ಗಣನೀಯ ಹಣ ಸಂಪಾದಿಸಿದ್ದರು. ಒಂದು ಕಡೆ 1867ರ ಯುದ್ಧದ ಅತಿ ಲಾಭ, ಹತ್ತಿ ವ್ಯಾಪಾರದ ದಿಢೀರ್ ಲಾಭದ ಜೊತೆಗೆ ಅಫೀಮು ವ್ಯಾಪಾರದ ದುರ್ಲಾಭ 1880ರ ದಶಕದವರೆಗೆ ಮುಂದುವರೆದಿತ್ತು. ಈ ಮೂರೂ ಜೊತೆಗೆ ಚೀನಾದ ರೇಷ್ಮೆ ಮತ್ತಿತರ ಆಮದುಗಳ ಲಾಭ ಟಾಟಾಗಳ ಮೂಲ ಬಂಡವಾಳ ಸಂಗ್ರಹಣೆಯ ಆಧಾರಗಳಾದವು.

ಈ ರೀತಿಯ ಬಂಡವಾಳ ಶೇಖರಣೆಯ ವಿಧಾನಗಳಿಗೆ ಆದಿಮ ಬಂಡವಾಳ ಶೇಖರಣೆ ಎನ್ನುತ್ತಾರೆ. ಇಂತಹ ಆದಿಮ ಬಂಡವಾಳ ಶೇಖರಣೆಗೆ ಬ್ರಿಟನ್ ಮೊದಲಾದ ಯುರೋಪಿನ ದೇಶಗಳ ಬಂಡವಾಳಶಾಹಿಗಳಿಗೆ ಇರುವಷ್ಟು ವಿಪುಲ ಅವಕಾಶ ಭಾರತದ ಬಂಡವಾಳಶಾಹಿಗಳಿಗೆ ಇರಲಿಲ್ಲ. ವಸಾಹತುಶಾಹಿಗಳ ದಬ್ಬಾಳಿಕೆಯ ಮಿತಿಯಲ್ಲಿಯೇ ಸೀಮಿತ ಬಂಡವಾಳ ಶೇಖರಣೆಗೆ ಅವಕಾಶ ದೊರಕಿದ್ದು. ಬ್ರಿಟಿಷ್ ಬಂಡವಾಳದ ವ್ಯಾಪಾರ ವ್ಯವಹಾರಗಳ ಬಾಲಂಗೋಚಿಯಾಗಿ ಲಾಭ ಗಳಿಸುತ್ತಿದ್ದ ಟಾಟಾರಂತಹ ಕೆಲವೇ ಗುಂಪುಗಳಿಗೆ ಮಾತ್ರವೇ ಬಂಡವಾಳ ಶೇಖರಣೆಯ ಅವಕಾಶ ದೊರಕಿತು. ಆದರೆ ವಸಾಹತುಶಾಹಿ ವ್ಯವಸ್ಥೆ ಅವರ ಮೇಲೂ ಗಣನೀಯ ಮಿತಿ ಹೇರಿತ್ತು. ಅಂದ ಮೇಲೆ ಉಳಿದವರ ಪಾಡೇನು? ಅದರಿಂದಾಗಿ ಮುಕ್ತ ವ್ಯಾಪಾರ ಫ್ರೀ ಟ್ರೇಡ್ ಎಂದು ಘೋಷಿಸುತ್ತಾ ಉದಯವಾದ ಬಂಡವಾಳಶಾಹಿ ವ್ಯವಸ್ಥೆಯ ಮೂಲಭೂತ ತತ್ವಕ್ಕೆ ಭಾರತದಂತಹ ವಸಾಹತುಗಳಲ್ಲಿ ಅವಕಾಶವೇ ಇರಲಿಲ್ಲ.

ಈ ವಿಪರೀತ ವಿಶಿಷ್ಟ ಪರಿಸ್ಥಿತಿಯನ್ನು ಟಾಟಾಗಳ ಬೆಳವಣಿಗೆ ಮತ್ತು ಒಟ್ಟಾರೆ ಭಾರತದ ಬಂಡವಾಳಶಾಹಿಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಗಮನದಲ್ಲಿ ಇಟ್ಟುಕೊಂಡೇ ಭಾರತದ ಕೈಗಾರಿಕಾ ಬೆಳವಣಿಗೆಯನ್ನು ವಿಶ್ಲೇಷಿಸಬೇಕಾಗುತ್ತದೆ.

ಈ ರೀತಿ ಮಾಡಿದ ಹಣ ಸಂಗ್ರಹವನ್ನು ಮತ್ತಷ್ಟು ಹೆಚ್ಚು ಮತ್ತು ದೀರ್ಘ ಕಾಲದ ಲಾಭ ಸಂಪಾದನೆಯ ಮೇಲೆ ಹೂಡಲು, ಕೇವಲ ಹಣವಾಗಿದ್ದುದನ್ನು ಲಾಭಕರ ಬಂಡವಾಳವಾಗಿ ಪರಿವರ್ತಿಸಲು ಟಾಟಾಗಳು ತಹತಹಿಸುತ್ತಿದ್ದರು.

ಹತ್ತಿ ವ್ಯಾಪಾರದ ಮೂಲಕ ಜವಳಿ ಉದ್ಯಮದ ಹತ್ತಿರದ ಪರಿಚಯ ಪಡೆದಿದ್ದ ಜಮ್‌ಶೇಟ್ಜಿ ಟಾಟಾ 1868ರಲ್ಲಿ ತಮ್ಮದೇ ಸ್ವಂತ ವಾಣಿಜ್ಯ ಕಂಪನಿ ಸ್ಥಾಪಿಸಲು ತಮ್ಮ ಸಂಪಾದನೆಯಿಂದ 20,000 ರೂ. (1870ರ ಬೆಲೆಗಳಲ್ಲಿ) ಹೂಡಿದರು. ಅದು ಇಂದಿನ ಬೆಲೆಗಳಲ್ಲಿ ಎಷ್ಟು ಸಾವಿರ ಕೋಟಿ ರೂ.ಗಳಾಗಬಹುದು ಎಂದು ಊಹಿಸಿಕೊಳ್ಳಿ. ಇಲ್ಲಿಯವರೆಗೆ ವ್ಯಾಪಾರಿ ಬಂಡವಾಳಗಾರರಾಗಿದ್ದ ಅವರು ನಂತರ ಅವರು ಒಂದರ ನಂತರ ಒಂದು ಹಲವು ಕಾರ್ಖಾನೆಗಳಲ್ಲಿ ಈ ಸಂಪಾದನೆಯನ್ನು ಹೂಡಿ ಕೈಗಾರಿಕಾ ಬಂಡವಾಳಗಾರರಾದರು.

ಮುಂದಿನ ಭಾಗ....

ಉತ್ಪಾದನಾ ಬಂಡವಾಳಗಾರರಾಗಿ ಟಾಟಾಗಳು ಮತ್ತು ಬ್ರಿಟಿಷರ ಜೊತೆ ಸಂಘರ್ಷ.

ಕೆನಡಾ ಆರೋಪಗಳು: ಭಾರತ ಸರಕಾರ ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತಗೊಳ್ಳಬೇಕು

ಕೆನಡಾ ಸರಕಾರದ ವಿವಿಧ ಅಧಿಕಾರಿಗಳು ಭಾರತ ಸರಕಾರದ ಮೇಲೆ ಹಾಕಿರುವ ಆರೋಪಗಳ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಕ್ಟೋಬರ್ 15ರಂದು ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ಕೆನಡಾದಲ್ಲಿ ಸಕ್ರಿಯರಾಗಿರುವ ಭಾರತ ವಿರೋಧಿ ಖಲಿಸ್ತಾನಿ ವ್ಯಕ್ತಿಗಳ ಚಟುವಟಿಕೆಗಳು ಒಂದು ಗಂಭೀರ ಕಳವಳದ ವಿಷಯವಾಗಿದೆ ಮತ್ತು ರಾಷ್ಟ್ರೀಯ ಭದ್ರತೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಭಾರತ ಸರ್ಕಾರ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಕರ್ತವ್ಯ ಬದ್ಧವಾಗಿದೆ. ಇದಕ್ಕೆ ಎಲ್ಲ ರಾಜಕೀಯ ಪಕ್ಷಗಳ ಬೆಂಬಲವಿದೆ. ಭಾರತದ ವಿರುದ್ಧ ಕೆನಡಾ ಸರ್ಕಾರದ ವಿವಿಧ ಅಧಿಕಾರಿಗಳು ಹೊರಿಸಿರುವ ಆರೋಪಗಳನ್ನು ಭಾರತ ಸರ್ಕಾರ ತಿರಸ್ಕರಿಸಿದೆ.

ಭಾರತ ಸರ್ಕಾರ ಲಾರೆನ್ಸ್ ಬಿಷ್ಣೋಯ್ ಕ್ರಿಮಿನಲ್ ಗ್ಯಾಂಗ್‌ನ ಪಾತ್ರದ ಬಗ್ಗೆ ಮಾಡಿರುವ ಆರೋಪ ಸೇರಿದಂತೆ ಈ ವಿಷಯಗಳಲ್ಲಿ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿದೆ. ❍

ಕಾರ್ಪೊರೇಟ್ ಜಗತ್ತನ್ನು ಬೆಚ್ಚಿಬೀಳಿಸಿದ 37 ದಿನಗಳು..... ಪುಟ 11 ರಿಂದ

ಪರವಾಗಿ ಒಂದು ಸಂಘ ರಚಿಸಿ, ಈ ಸಂಘವು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುತ್ತದೆ ಎಂದು ಹೇಳಿ, ಇದಕ್ಕೆ ಕಾರ್ಮಿಕರು ಸಹಿ ಹಾಕುವಂತೆ ಕೇಳಿದರು. ಕಾರ್ಮಿಕರು ಸಹಿ ಹಾಕಲು ನಿರಾಕರಿಸಿದರು. ನಂತರ ಆಡಳಿತದ ಕಡೆಯಿಂದ ಬೆದರಿಕೆಗಳು ಬರತೊಡಗಿದವು. ಸಿಐಟಿಯು ಯೂನಿಯನ್ ಕಾರ್ಯಕಾರಿಣಿಯನ್ನು ಕೊಠಡಿಯಲ್ಲಿ ಕೂಡಿಹಾಕಿ ರಾಜೀನಾಮೆ ನೀಡುವಂತೆ ಬೆದರಿಕೆ ಹಾಕಲಾಯಿತು. ಸಂಘಕ್ಕೆ ರಾಜೀನಾಮೆ ನೀಡದಿದ್ದರೆ, ಆರ್ಮ್‌ಸ್ಟ್ರಾಂಗ್ (ಹತ್ಯೆಯಾದ ಬಹುಜನ ಸಮಾಜದ ಮುಖಂಡ) ನಂತೆ ನಿನಗೂ ಆಗಲಿದೆ ಎಂದು ಆಡಳಿತ ಮಂಡಳಿಯ ಅಧಿಕಾರಿಗಳು ದೂರವಾಣಿ ಮೂಲಕ ಬೆದರಿಕೆ ಹಾಕಿದರು.

ಕಾರ್ಖಾನೆ ಸುತ್ತ ನಿಷೇದಾಜ್ಞೆ

ಕಾರ್ಖಾನೆ ಬಳಿ ಮುಷ್ಕರ ನಡೆಸಲು ಸ್ಯಾಮ್‌ಸಂಗ್ ನ ಆಡಳಿತ ಮಂಡಳಿ ಅವಕಾಶ ಕೊಡಲಿಲ್ಲ. ಪೊಲೀಸರು ಅಲ್ಲಿ ನಿಷೇದಾಜ್ಞೆ ಹೇರಿದರು. ಕಾರ್ಖಾನೆಯಿಂದ 2 ಕಿಲೋಮೀಟರ್ ದೂರದಲ್ಲಿರುವ ಖಾಸಗಿ ಮಾಲೀಕತ್ವದ ಸ್ಥಳದಲ್ಲಿ ಕಾರ್ಮಿಕರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು. ಆದರೆ ಈ ಸ್ಥಳದಲ್ಲೂ ಪ್ರತಿಭಟನೆ ನಡೆಸಲು ಕಾಂಚೀಪುರಂ ಜಿಲ್ಲಾ ಪೊಲೀಸರು ಅವಕಾಶ ನೀಡಲಿಲ್ಲ. ಎಲ್ಲ ಹೋರಾಟಗಾರರನ್ನು ಬಂಧಿಸುತ್ತೇವೆ ಎಂದು ಬೆದರಿಸಿದರು. ಇದರಿಂದ ಕಾರ್ಮಿಕರು ತೀವ್ರ ಘೋಷಣೆ ಕೂಗಿದರು. ಅಲ್ಲಿ ದೊಡ್ಡ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು. ಇದೇ ವೇಳೆ ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸಿ ಸಿಐಟಿಯು ರಾಜ್ಯಾಧ್ಯಕ್ಷ ಎ.ಸೌಂದರರಾಜನ್, ಸ್ಯಾಮ್‌ಸಂಗ್ ಇಂಡಸ್ಟ್ರಿ ಅಸೋಸಿಯೇಷನ್ ಅಧ್ಯಕ್ಷ ಮುತ್ತುಕುಮಾರ್ ಮಾತನಾಡಿದರು. ಬಳಿಕ ಕಾರ್ಮಿಕರೊಂದಿಗೆ ನೆಲದ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು.

ಸಂಘದ ನೋಂದಣಿ ಕೋರಿ ಹೈಕೋರ್ಟ್‌ನಲ್ಲಿ ಮೇಲ್ಮನವಿ

ಸ್ಯಾಮ್‌ಸಂಗ್ ಸಂಸ್ಥೆಯು 'ಸ್ಯಾಮ್‌ಸಂಗ್ ಇಂಡಿಯಾ ವರ್ಕರ್ಸ್ ಯೂನಿಯನ್'ಗೆ ಮಾನ್ಯತೆ ನೀಡಲು ಒಪ್ಪಲಿಲ್ಲ. ಸಿಐಟಿಯು ಬೆಂಬಲಿಸುವವರೆಗೆ ಯೂನಿಯನ್ ನೊಂದಿಗೆ ಮತ್ತು ಹೊರಗಿನ ನಾಯಕರೊಂದಿಗೆ ಮಾತನಾಡಲು ಸಿದ್ಧರಿಲ್ಲ ಎಂದು ಸ್ಯಾಮ್‌ಸಂಗ್ ಎಲೆಕ್ಟ್ರಾನಿಕ್ಸ್ ಹೇಳಿತು.

ಸಿಐಟಿಯುಗೆ ಸಂಯೋಜಿತವಾದ ಸ್ಯಾಮ್‌ಸಂಗ್ ಇಂಡಿಯಾ ಲೇಬರ್ ಯೂನಿಯನ್ (SIWU) ಹೆಸರಿನಲ್ಲಿ ಕಾರ್ಮಿಕ ಸಂಘವನ್ನು ಪ್ರಾರಂಭಿಸಲು ಕಾರ್ಮಿಕ ಸಂಘಟನೆಗಳ ರಿಜಿಸ್ಟ್ರಾರ್ ಮತ್ತು ಕಾರ್ಮಿಕ ಕಲ್ಯಾಣ ಉಪ ಆಯುಕ್ತರಿಗೆ ಕಾರ್ಮಿಕರು ಅರ್ಜಿ ಸಲ್ಲಿಸಿದರು. ಕಾನೂನಿನ ಪ್ರಕಾರ, ಸರ್ಕಾರವು 45 ದಿನಗಳಲ್ಲಿ ವಿನಂತಿಯನ್ನು ಪ್ರಕ್ರಿಯೆಗೊಳಿಸಬೇಕು. ಕಂಪನಿಯ ಹೆಸರನ್ನು ಸಂಘಕ್ಕೆ ಬಳಸಬಾರದು ಎಂದು ಸ್ಯಾಮ್‌ಸಂಗ್ ಹೇಳಿದ್ದರಿಂದ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಂಘವನ್ನು ನೋಂದಾಯಿಸಲಿಲ್ಲ.

SIWU ಹೆಸರಿನಲ್ಲಿ ಟ್ರೇಡ್ ಯೂನಿಯನ್ ಅನ್ನು ನೋಂದಾಯಿಸಲು ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಕೋರಿ ಮದ್ರಾಸ್ ಹೈಕೋರ್ಟ್‌ನಲ್ಲಿ ಸಿಐಟಿಯು ಪ್ರಕರಣ ದಾಖಲಿಸಿತು. ತಮ್ಮ ಅರ್ಜಿಯನ್ನು ಪರಿಗಣಿಸಿ ಕಾರ್ಮಿಕ ಸಂಘಟನೆಯನ್ನು ನೋಂದಣಿ ಮಾಡಿಸಿ ಪ್ರಮಾಣ ಪತ್ರ ನೀಡುವಂತೆ, ಕಾರ್ಮಿಕ ಸಂಘಟನೆಗಳ ನೋಂದಣಾಧಿಕಾರಿ ಹಾಗೂ ಕಾರ್ಮಿಕ ಕಲ್ಯಾಣ ಇಲಾಖೆಯ ಉಪ ಆಯುಕ್ತರಿಗೆ ನಿರ್ದೇಶನ ನೀಡುವಂತೆ ಆ ಮನವಿಯಲ್ಲಿ ಕೋರಲಾಗಿದೆ.

ಅಕ್ಟೋಬರ್ 1ರಂದು ನಡೆದ ನ್ಯಾಯಾಲಯದ ವಿಚಾರಣೆಯಲ್ಲಿ, ಕಾರ್ಮಿಕ ಆಯುಕ್ತರನ್ನು ಪ್ರತಿನಿಧಿಸುವ ತಮಿಳುನಾಡು ರಾಜ್ಯದ ವಕೀಲರು, SIWU ನ ಸಂಪೂರ್ಣ ರೂಪದಲ್ಲಿ 'Samsung' ಎಂಬ ಹೆಸರು ಟ್ರೇಡ್ ಮಾರ್ಕ್ ಉಲ್ಲಂಘನೆಯಾಗಿದೆ ಎಂಬ ಆಧಾರದ ಮೇಲೆ SIWU ನ ನೋಂದಣಿಗೆ Samsung ಆಡಳಿತವು ಆಕ್ಷೇಪಿಸಿದೆ ಎಂದು ಹೇಳಿದರು. ಇದನ್ನು ಸಿಐಟಿಯು ಒಪ್ಪಲಿಲ್ಲ.

ಸೆಪ್ಟೆಂಬರ್ ಆರಂಭದಲ್ಲಿ ಪ್ರತಿಭಟನೆಗಳು ಪ್ರಾರಂಭವಾದರೂ, ತಮಿಳುನಾಡು ಸರ್ಕಾರವು ಅಕ್ಟೋಬರ್ 7ರಂದು ಸ್ಯಾಮ್‌ಸಂಗ್ ನೊಂದಿಗೆ ಮಾತುಕತೆ ನಡೆಸಲು ತನ್ನ ಮೊದಲ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಂಡಿತು. ಕಾರ್ಮಿಕ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ), ಕೈಗಾರಿಕೆಗಳ ಸಚಿವಾಲಯಗಳನ್ನು ಪ್ರತಿನಿಧಿಸುವ ಮೂವರು ಹಿರಿಯ ಮಂತ್ರಿಗಳು ಸಂಘದ ಕಾರ್ಮಿಕರೊಂದಿಗೆ ಮಾತುಕತೆ ನಡೆಸಿತು. ಅಂದು ವೇತನ ಹೆಚ್ಚಳ ಮತ್ತು ಹೆಚ್ಚುವರಿ ಪ್ರಯೋಜನಗಳಿಗೆ ಒಪ್ಪಿಗೆ ನೀಡಿತಾದರೂ, ಪ್ರಮುಖ ವಿಷಯವಾದ ಸಂಘಕ್ಕೆ ಮಾನ್ಯತೆ ನೀಡುವ ವಿಷಯ ಹಾಗೆಯೇ ಉಳಿಯಿತು.

ಅಕ್ಟೋಬರ್ 8 ರಂದು, ತಮಿಳುನಾಡು ಕೈಗಾರಿಕಾ ಸಚಿವ ಟಿ.ಆರ್.ಬಿ. ರಾಜಾ ಅವರು ಮುಷ್ಕರನಿರತ ಕಾರ್ಮಿಕರನ್ನು ಕೆಲಸಕ್ಕೆ ಮರಳುವಂತೆ ಒತ್ತಾಯಿಸಿದರು. ರಾಜ್ಯದ ಯುವಕರಿಗೆ ಉದ್ಯೋಗ ಮತ್ತು ಉದ್ಯೋಗಾವಕಾಶಗಳನ್ನು ರಕ್ಷಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ರಾಜ್ಯ ಸರ್ಕಾರದ 'ಉದಾಸೀನ' ಪ್ರತಿಕ್ರಿಯೆಯನ್ನು ಪ್ರಶ್ನಿಸಿದ ಸಿಐಟಿಯು ಮತ್ತು ಎಸ್‌ಐಡಬ್ಲ್ಯೂಯು ಸಂಘಟನೆಗಳು, ಸ್ಯಾಮ್‌ಸಂಗ್ ಮ್ಯಾನೇಜ್‌ಮೆಂಟ್‌ನೊಂದಿಗೆ ರಾಜ್ಯ ಸರ್ಕಾರ ಪಕ್ಷಪಾತ ಮಾಡುತ್ತಿದೆ ಎಂದು ಆರೋಪಿಸಿತು.

ಅಕ್ಟೋಬರ್ 9ರಂದು ರಾತ್ರಿ ಕಾರ್ಮಿಕರು ಹೋರಾಟ ನಡೆಸುತ್ತಿದ್ದ ಸ್ಥಳಕ್ಕೆ ಬಂದ ಪೊಲೀಸರು, ಸಿಐಟಿಯು ಮುಖಂಡರೂ ಸೇರಿದಂತೆ ಹಲವು ಕಾರ್ಮಿಕ ಮುಖಂಡರನ್ನು ಬಲವಂತವಾಗಿ ಬಂಧಿಸಿ ಕರೆದೊಯ್ದಿದ್ದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ 625 ಸ್ಯಾಮ್‌ಸಂಗ್ ಕಾರ್ಮಿಕರ ವಿರುದ್ಧ 2 ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ, ಪ್ರತಿಭಟನಾಕಾರರು ಹಾಕಿದ್ದ ಪೆಂಡಾಲನ್ನು ಕಿತ್ತುಹಾಕಿದ ಪೊಲೀಸರು, ಪ್ರತಿಭಟನಾ ಬ್ಯಾನರ್‌ಗಳನ್ನು ಕಿತ್ತೆಸೆದರು.

ಮರು ದಿನ ಬೆಳಗ್ಗೆ ಪ್ರತಿಭಟನಾ ಸ್ಥಳದಲ್ಲಿ ಜಮಾಯಿಸಿದ ಸ್ಯಾಮ್‌ಸಂಗ್ ಕಾರ್ಮಿಕರು ರಸ್ತೆಯಲ್ಲೇ ಕುಳಿತು ಪ್ರತಿಭಟನೆ ಮುಂದುವರೆಸಿದರು. ಸುರಿಯುತ್ತಿದ್ದ ಮಳೆಯ ನಡುವೆಯೂ ನಿಷೇದಾಜ್ಞೆ ಉಲ್ಲಂಘಿಸಿ ಪ್ರತಿಭಟನೆ ಮುಂದುವರಿಸಿದ ಸಿಐಟಿಯು ಮುಖಂಡ ಸೌಂದರರಾಜನ್ ಸೇರಿದಂತೆ ಎಲ್ಲ ಪ್ರತಿಭಟನಾಕಾರರನ್ನು ಬಂಧಿಸಿ ಪ್ರಕರಣ ದಾಖಲಿಸಿದರು. ಸ್ಯಾಮ್ ಸಂಗ್ ಇಂಡಿಯಾ ಲೇಬರ್ ಯೂನಿಯನ್‌ನ ಕಾರ್ಯಕಾರಿ ಸದಸ್ಯರ ಮನೆಗಳನ್ನು ರಾತ್ರಿ ವೇಳೆ ಶೋಧಿಸಿ ಅವರನ್ನು ಅರಾಜಕವಾಗಿ ಬಂಧಿಸಿದರು ಮತ್ತು 10 ಪದಾಧಿಕಾರಿಗಳನ್ನು ಬಂಧಿಸಿ ಅಕ್ರಮ ಬಂಧನದಲ್ಲಿಟ್ಟರು.

ಪೊಲೀಸರ ಈ ಕ್ರಮ ಅಲ್ಲಿನ ಕೈಗಾರಿಕಾ ಪ್ರದೇಶದ ಇತರ ವಲಯಗಳ ಮೇಲೆ ತರಂಗ ಪರಿಣಾಮಗಳನ್ನು ಬೀರಿತು. ಅಕ್ಟೋಬರ್ 21 ರಂದು ಉತ್ತರ ಕೈಗಾರಿಕಾ ಪ್ರದೇಶದಾದ್ಯಂತ ಒಂದು ದಿನದ ಮುಷ್ಕರವನ್ನು ಆಯೋಜಿಸುವುದಾಗಿ ಸಿಐಟಿಯು ಘೋಷಿಸಿತು. ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಕೈಗಾರಿಕೆಗಳಲ್ಲಿ ಸಿಐಟಿಯು ಸಂಘಟನೆ ಇದೆ.

ತಮಿಳುನಾಡನ್ನು ಹೂಡಿಕೆದಾರರ ಸ್ನೇಹಿ ರಾಜ್ಯವೆಂದು ಪರಿಗಣಿಸಲಾಗಿದೆ ಮತ್ತು ಚೆನ್ನೈನಲ್ಲಿ ನಡೆಯುತ್ತಿರುವ ಕಾರ್ಮಿಕರ ಮುಷ್ಕರವು ಡಿಎಂಕೆ ಮೈತ್ರಿಯನ್ನು ಪರೀಕ್ಷಿಸಬಹುದಾದ ರಾಜಕೀಯ ಬಿಕ್ಕಟ್ಟನ್ನು ಉಂಟುಮಾಡಬಹುದು ಎಂಬ ಆತಂಕವನ್ನು ಬಂಡವಾಳಶಾಹಿ ಮಾಧ್ಯಮಗಳು ಹುಟ್ಟುಹಾಕಿದವು.

ಬಂಡವಾಳಶಾಹಿಗಳ ಇವೆಲ್ಲಾ ಅಪಪ್ರಚಾರಗಳ ನಡುವೆಯೂ, ಆಡಳಿತದ ಮತ್ತು ಪೊಲೀಸರ ದಾಳಿಗಳನ್ನು ಒಗ್ಗಟ್ಟಿನಿಂದ ಎದುರಿಸಿ ನಿಂತ ಸ್ಯಾಮ್ ಸಂಗ್ ಕಾರ್ಮಿಕರು ಐತಿಹಾಸಿಕ ಜಯದೊಂದಿಗೆ ಕೆಲಸಕ್ಕೆ ಮರಳಿದ್ದಾರೆ.

ಸಾಮ್ರಾಜ್ಯಶಾಹೀ ಪ್ರಾಬಲ್ಯದ ಮರುಹೇರಿಕೆಗೆ ಎರಡು ಅಸ್ತ್ರಗಳು: ನವ-ಉದಾರವಾದಿ ಆಳ್ವಿಕೆಯ ಹೇರಿಕೆ ಮತ್ತು ಯುದ್ಧಗಳಿಗೆ ಉತ್ತೇಜನೆ-ಸಮರ್ಥನೆ

ಈಗ ಪರಸ್ಪರ ಸ್ಪರ್ಧಿಸದೆ ಒಂದಾಗಿರುವ ಸಾಮ್ರಾಜ್ಯಶಾಹಿಗಳು ತಮ್ಮ ಹಿಡಿತದಿಂದ ಕಳಚಿಕೊಂಡ ಪ್ರದೇಶಗಳ ಮೇಲೆ ಪುನಃ ಹಿಡಿತ ಸ್ಥಾಪಿಸುವ ಉದ್ದೇಶಕ್ಕಾಗಿ ಬಳಸುವ ಎರಡು ಅಸ್ತ್ರಗಳೆಂದರೆ: ನಿರ್ವಸಾಹತೀಕರಣದ ಸಾರವನ್ನೇ ತಿರಸ್ಕರಿಸುವ ನವ-ಉದಾರವಾದಿ ಆಳ್ವಿಕೆಯನ್ನು ವಿಶ್ವದ ಮೇಲೆ ಹೇರುವುದು ಮತ್ತು ಈ ಅಸ್ತ್ರವು ಒಂದು ವೇಳೆ ಸಾಕಾಗುವುದಿಲ್ಲ ಎಂದಾದರೆ, ಯುದ್ಧಗಳನ್ನು ಆಶ್ರಯಿಸುವುದು. ಇವುಗಳಲ್ಲಿ ಮೊದಲನೆಯದು ಎಲ್ಲೆಡೆಗಳಲ್ಲೂ ಜನರಿಗೆ ತೀವ್ರ ಸಂಕಟವನ್ನು ತರುತ್ತಿದೆ ಮತ್ತು ಕೊನೆಗೆ ಒಂದು ನವ-ಫ್ಯಾಸಿಸ್ಟ್ ಆಳ್ವಿಕೆಯನ್ನು ಹೇರುತ್ತಿದೆ. ಮತ್ತೊಂದು ಮನುಕುಲವನ್ನು ವಿನಾಶದತ್ತ ತಳ್ಳುತ್ತಿದೆ. ಪ್ರಸ್ತುತ ನಡೆಯುತ್ತಿರುವ ಎರಡೂ ಯುದ್ಧಗಳು ಸಾಮ್ರಾಜ್ಯಶಾಹಿಯ ಉತ್ತೇಜನೆಯಿಂದ ಮತ್ತು ಸಮರ್ಥನೆಯಿಂದಲೇ ನಡೆಯುತ್ತಿದ್ದು ಇವುಗಳಲ್ಲಿ ಪರಮಾಣು ಅಸ್ತ್ರಗಳ ಬಳಕೆಯ ಅಪಾಯಕಾರಿ ಸಂಭಾವ್ಯತೆಯೂ ಇದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು:ಕೆ.ಎಂ.ನಾಗರಾಜ್

"ಹಣಕಾಸು ಬಂಡವಾಳವು ತಾನು ಪ್ರಭಾವ ಹೊಂದಿರುವ ವಲಯಗಳನ್ನು ಮತ್ತು ತಾನು ಹೊಂದಿರುವ ಭೂ-ಪ್ರದೇಶವನ್ನು ವಿಸ್ತರಿಸುವ ಪ್ರಯತ್ನವನ್ನು ತಪ್ಪದೆ ಮಾಡುತ್ತದೆ" ಎಂಬುದನ್ನು ಲೆನಿನ್ ತಮ್ಮ 'ಸಾಮ್ರಾಜ್ಯಶಾಹಿ' ಎಂಬ ಕೃತಿಯಲ್ಲಿ ಬರೆದಿದ್ದಾರೆ. ಇದನ್ನು ಅವರು ಬರೆದ ಕಾಲಘಟ್ಟದಲ್ಲಿ ಸಾಮ್ರಾಜ್ಯಶಾಹಿ ದೇಶಗಳ ನಡುವೆ ಯುದ್ಧಗಳು ನಡೆಯುತ್ತಿದ್ದವು. ಮಾರುಕಟ್ಟೆಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದಕ್ಕಾಗಿ ಸಾಮ್ರಾಜ್ಯಶಾಹಿ ದೇಶವೊಂದರ ಹಣಕಾಸು ಬಂಡವಾಳವು ಮತ್ತೊಂದು ಸಾಮ್ರಾಜ್ಯಶಾಹಿ ದೇಶದ ಹಣಕಾಸು ಬಂಡವಾಳದೊಂದಿಗೆ ಜಿದ್ದಿಗೆ ಇಳಿಯುತ್ತಿದ್ದ ಕಾರಣದಿಂದಾಗಿ ಈ ಯುದ್ಧಗಳು ಸಂಭವಿಸುತ್ತಿದ್ದವು ಮತ್ತು ಅವು ಇಡೀ ವಿಶ್ವವನ್ನು ಪೂರ್ಣವಾಗಿ ಮತ್ತು ವೇಗವಾಗಿ ವಿಭಜಿಸುವಲ್ಲಿ ಪರಿಣಮಿಸಿದವು. ತದನಂತರ ಯಾವುದೇ "ಖಾಲಿ ಸ್ಥಳ" ಉಳಿದಿರಲಿಲ್ಲ, ಪ್ರತಿಸ್ಪರ್ಧಿ ಹಣಕಾಸು-ಕೂಟಮಂದಿಯ ರಾಜ್ಯಭಾರಗಳ (oligarchies) ನಡುವಿನ ಯುದ್ಧಗಳ ಮೂಲಕ ವಿಶ್ವವನ್ನು ಪುನರ್ವಿಭಜಿಸುವುದು ಮಾತ್ರ ಸಾಧ್ಯವಿತ್ತು. ಆದರೆ ವಾಸ್ತವವಾಗಿಯೂ ಹರಿಯಬಿಟ್ಟ ಈ ಯುದ್ಧಗಳಿಂದಾಗಿ ಸಾಮ್ರಾಜ್ಯಶಾಹಿಯು ದುರ್ಬಲಗೊಳ್ಳುವಂತಾಯಿತು ಮತ್ತು ಅದರ ಹಿಡಿತದಲ್ಲಿದ್ದ ಕೆಲವು ಪ್ರದೇಶಗಳು ಸಮಾಜವಾದಿ ಕ್ರಾಂತಿಗಳಿಂದಾಗಿ ಮತ್ತು ಸಮಾಜವಾದದ ಸಹಾಯದಿಂದ ನಡೆದ ನಿರ್ವಸಾಹತೀಕರಣ ಪ್ರಕ್ರಿಯೆಯ ಮೂಲಕ ಅದರಿಂದ ಸಿಡಿದು ಅದರ ಹಿಡಿತದಿಂದ ತಪ್ಪಿಸಿಕೊಂಡವು.

ಬಂಡವಾಳದ ಕೇಂದ್ರೀಕರಣ ಮತ್ತಷ್ಟು ಹೆಚ್ಚಿ, ಅದರಿಂದಾಗಿ ಹೆಚ್ಚು ಹೆಚ್ಚು ಕ್ರೋಢೀಕರಣಗೊಂಡುದು ಒಂದೆಡೆಯಲ್ಲಿ, ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಪೈಪೋಟಿಯನ್ನು ಹಿನ್ನೆಲೆಗೆ ಸರಿಸುತ್ತದೆ. ಏಕೆಂದರೆ, ಈಗ ಬಂಡವಾಳ ಎಲ್ಲಿಗೆ ಬೇಕೋ ಅಲ್ಲಿಗೆ ಹರಿದಾಡಲು ಇಡೀ ಜಗತ್ತನ್ನು ತನ್ನ ಕಾರ್ಯಕ್ಷೇತ್ರವಾಗಿ ಆವರಿಸಲು ಬಯಸುತ್ತದೆಯೇ ವಿನಃ ಪ್ರತಿಸ್ಪರ್ಧಿ ಶಕ್ತಿಗಳ ಪ್ರಭಾವದ ವಲಯಗಳಾಗಿ ವಿಭಜನೆಯಾಗುವುದನ್ನಲ್ಲ. ಅದು ಮತ್ತೊಂದೆಡೆಯಲ್ಲಿ, ಈಗ ಒಂದಾಗಿರುವ ಸಾಮ್ರಾಜ್ಯಶಾಹಿಯು ತನ್ನ ಹಿಡಿತದಿಂದ ಕಳಚಿಕೊಂಡ ಪ್ರದೇಶಗಳ ಮೇಲೆ ಪುನಃ ಹಿಡಿತ ಸ್ಥಾಪಿಸುವ ಪ್ರಯತ್ನದಲ್ಲಿ ತೊಡಗುವಂತೆ ಮಾಡಿದೆ. ಈ ಉದ್ದೇಶಕ್ಕಾಗಿ ಸಾಮ್ರಾಜ್ಯಶಾಹಿಯು ಬಳಸುವ ಎರಡು ಅಸ್ತ್ರಗಳೆಂದರೆ: ನಿರ್ವಸಾಹತೀಕರಣದ ಪರಿಣಾಮಗಳ ಸಾರವನ್ನೇ ತಿರಸ್ಕರಿಸುವ ನವ-ಉದಾರವಾದಿ ಆಳ್ವಿಕೆಯನ್ನು ವಿಶ್ವದ ಮೇಲೆ ಹೇರುವುದು ಮತ್ತು ಈ ಅಸ್ತ್ರವು (ನವ-ಉದಾರವಾದಿ ಆಳ್ವಿಕೆಯು) ಒಂದು ವೇಳೆ ಸಾಕಾಗುವುದಿಲ್ಲ ಎಂದಾದರೆ, ಯುದ್ಧಗಳನ್ನು ಆಶ್ರಯಿಸುವುದು.

ನವ-ಉದಾರವಾದಿ ಆಳ್ವಿಕೆಯು ಕಾರ್ಮಿಕ ವರ್ಗವನ್ನು ಎಲ್ಲ ದೇಶಗಳಲ್ಲೂ ದುರ್ಬಲಗೊಳಿಸಿದೆ. ಮುಂದುವರಿದ ದೇಶಗಳಲ್ಲಿ, ಕಾರ್ಖಾನೆಗಳನ್ನು ಕಡಿಮೆ-ವೇತನ ಹೊಂದಿದ ಮೂರನೇ ಜಗತ್ತಿನ ದೇಶಗಳಿಗೆ ಸ್ಥಳಾಂತರಿಸುವ ಬೆದರಿಕೆಯನ್ನು ಕಾರ್ಮಿಕರ ಮುಂದೆ ಇರಿಸಿದೆ. ಅವರ ವೇತನಗಳು ಕಾರ್ಖಾನೆಗಳ ಸ್ಥಳಾಂತರದಿಂದಾಗಿ ಸ್ಥಗಿತಗೊಂಡಿವೆ. ಮೂರನೇ ಜಗತ್ತಿನ ದೇಶಗಳಲ್ಲಿ, ಇಂತಹ ಸ್ಥಳಾಂತರವು ಶ್ರಮ ಮೀಸಲುಗಳ (ನಿರುದ್ಯೋಗದ) ಸಾಪೇಕ್ಷ ಗಾತ್ರವನ್ನು ಕಡಿಮೆ ಮಾಡಿಲ್ಲ. ಶ್ರಮ ಮೀಸಲುಗಳು ಇಳಿಕೆಯಾಗದ ಕಾರಣದಿಂದಾಗಿ ಇಲ್ಲಿಯೂ ನಿಜ ವೇತನಗಳು ಸ್ಥಗಿತಗೊಂಡಿವೆ. ವಿಶ್ವಾದ್ಯಂತ ನಿರ್ದಿಷ್ಟ ನಿಜ ವೇತನವು ಸ್ಥಗಿತಗೊಂಡಿದ್ದರೂ ಸಹ, ಕಾರ್ಮಿಕ ಉತ್ಪಾದಕತೆಗಳು (ಇದು ಮೂರನೇ ಜಗತ್ತಿನ ನಿರುದ್ಯೋಗದ ಗಾತ್ರವು ಕಡಿಮೆಯಾಗದಿರಲು ಕಾರಣವಾಗಿದೆ) ಎಲ್ಲೆಡೆಯೂ ಹೆಚ್ಚಿವೆ. ಉತ್ಪಾದಕತೆ ವೃದ್ಧಿಸಿರುವುದರಿಂದಾಗಿ ಇಡೀ ವಿಶ್ವ ಅರ್ಥವ್ಯವಸ್ಥೆಯಲ್ಲಿ ಮತ್ತು ಒಂದೊಂದು ದೇಶದಲ್ಲೂ ಆರ್ಥಿಕ ಮಿಗುತಾಯದ ಪಾಲು ಹೆಚ್ಚುತ್ತಿದೆ. ಮಿಗುತಾಯದ ಹೆಚ್ಚಳವು ಆರ್ಥಿಕ ಅಸಮಾನತೆಯಲ್ಲಿ (ಮೂರನೇ ಜಗತ್ತಿನ ಬಹುತೇಕ ದೇಶಗಳಲ್ಲಿ ಪೌಷ್ಟಿಕಾಂಶದ ಅಭಾವದಿಂದ ಬಳಲುತ್ತಿರುವವರ ಅನುಪಾತವು ಹೆಚ್ಚಿದೆ) ತೀಕ್ಷ್ಣವಾದ ಏರಿಕೆಯನ್ನು ಮಾತ್ರ ತಂದಿಲ್ಲ, ನಿಖರವಾಗಿ ಈ ಕಾರಣದಿಂದಾಗಿಯೇ, ಅದು ಅತಿ-ಉತ್ಪಾದನೆಯ (ದುಡಿಯುವ ಜನರು, ಮಿಗುತಾಯದ ಮೇಲೆ ಬದುಕುವವರಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಆದಾಯದ ಬಳಕೆ ಮಾಡುತ್ತಾರೆ) ಪ್ರವೃತ್ತಿಯನ್ನೂ ತಂದಿದೆ.



ನವ-ಫ್ಯಾಸಿಸ್ಟ್ ಆಳ್ವಿಕೆಯತ್ತ

ಅತಿ-ಉತ್ಪಾದನೆಯ ಸಮಸ್ಯೆಗೆ ಕೀನ್ಸ್ ಸೂಚಿಸಿದ ರೂಢಿಗತ ಪರಿಹಾರವೆಂದರೆ, ಸರ್ಕಾರದ ಬೃಹತ್ ವೆಚ್ಚಗಳ ಮೂಲಕ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವುದು. ಆದರೆ, ನವ-ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಕೀನ್ಸ್ ಸೂಚಿಸಿದ ಪರಿಹಾರವು ಕೆಲಸ ಮಾಡದು. ಏಕೆಂದರೆ, ಅಂತಹ ವೆಚ್ಚಗಳಿಗಾಗಿ ಬೃಹತ್ ವಿತ್ತೀಯ ಕೊರತೆಯ ಮೂಲಕ ಅಥವಾ ಶ್ರೀಮಂತರ ಮೇಲೆ ವಿಧಿಸುವ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಹಣ ಒದಗಿಸಿಕೊಳ್ಳಬೇಕಾಗುತ್ತದೆ. ಆದರೆ ಈ ಎರಡೂ ವಿಧಾನಗಳೆಂದರೇ ನವ-ಉದಾರವಾದಿ ಆಳ್ವಿಕೆಗೆ ಹೇವರಿಕೆ. ಏಕೆಂದರೆ, ಈ ಎರಡೂ ವಿಧಾನಗಳನ್ನೂ ಹಣಕಾಸು ಬಂಡವಾಳವು ಸಹಿಸುವುದಿಲ್ಲ. ಈ ಸನ್ನಿವೇಶದಲ್ಲಿ ಒಂದು ದೇಶದ ವ್ಯಾಪ್ತಿಗೆ ಸೀಮಿತವಾದ ರಾಷ್ಟ್ರ-ಪ್ರಭುತ್ವವು ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಎದುರುಹಾಕಿಕೊಂಡರೆ, ಅದು ಕ್ಷಣಾರ್ಧದಲ್ಲಿ ತನ್ನ ಹೂಡಿಕೆಯನ್ನು (ಬಂಡವಾಳವನ್ನು) ಹಿಂತೆಗೆದು ದೇಶದಿಂದ ಹೊರಕ್ಕೆ ಹಾರಿ ಹೋಗಿ ಬಿಡಬಹುದು.



ಹಾಗಾಗಿ, ಹಣಕಾಸು ಬಂಡವಾಳದ ಅಪೇಕ್ಷೆಯನ್ನು ಗೌರವಿಸುವುದು ಅದಕ್ಕೆ ಅನಿವಾರ್ಯವಾಗುತ್ತದೆ.

ನವ-ಉದಾರವಾದಿ ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಅತಿ-ಉತ್ಪಾದನೆಯ ಪ್ರವೃತ್ತಿಯು ವಿಶ್ವ ಅರ್ಥವ್ಯವಸ್ಥೆಯನ್ನು ಸ್ಥಗಿತತೆಯತ್ತ ತಳ್ಳುತ್ತಿರುವ ಸನ್ನಿವೇಶದಲ್ಲಿ ನವ-ಫ್ಯಾಸಿಸಂ ತಲೆ ಎತ್ತುತ್ತಿದೆ. ಈ ಪರಿಸ್ಥಿತಿಯಲ್ಲಿ ಕಾರ್ಪೊರೇಟ್ ಬಂಡವಾಳವು ಒಂದು ದಿಕ್ಕು ತಪ್ಪಿಸುವ ಸಂಕಥನವನ್ನು ಒದಗಿಸುವ ನವ-ಫ್ಯಾಸಿಸ್ಟರೊಂದಿಗೆ ಮೈತ್ರಿ ಮಾಡಿಕೊಂಡಿದೆ. ಈ ಸಂಕಥನದಲ್ಲಿ ಜನರ ಲೌಕಿಕ ಜೀವನದ ದಿನ ನಿತ್ಯದ ಸಮಸ್ಯೆಗಳ ಬಗ್ಗೆ ಕಾಳಜಿಯಿರುವುದಿಲ್ಲ. ಅದು "ಅನ್ಯ" ಎಂದು ಬಿಂಬಿಸಲಾದ ಕೆಲವು ದುರದೃಷ್ಟಕರ ಧಾರ್ಮಿಕ ಅಥವಾ ಜನಾಂಗೀಯ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಉಂಟುಮಾಡುವ ವಿಷಯಕ್ಕೆ ಸಂಬಂಧಿಸಿರುತ್ತದೆ. ಆದಾಗ್ಯೂ, ಈ ನವ-ಫ್ಯಾಸಿಸ್ಟರು ಕೆಲವು ದೇಶಗಳಲ್ಲಿ ಅಧಿಕಾರವನ್ನು ಹಿಡಿದಿದ್ದಾರೆ ಮತ್ತು ಇನ್ನೂ ಕೆಲವು ದೇಶಗಳಲ್ಲಿ ನೇಪಥ್ಯದಲ್ಲಿ ಕಾಯುತ್ತಿದ್ದಾರೆ. ಅಷ್ಟಾಗಿಯೂ ಒಂದು ಉದಾರ ಧ್ಯೇಯದ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ವಶಪಡಿಸಿಕೊಳ್ಳುವ ಅಧಿಕಾರದಿಂದ ಒಂದು ಫ್ಯಾಸಿಸ್ಟ್ ಪ್ರಭುತ್ವವನ್ನು



ನಿರ್ಮಿಸುವ ಪ್ರಯಾಣವು ಹೆಚ್ಚು-ಕಡಿಮೆ ಸುದೀರ್ಘವೇ ಆಗಿರುತ್ತದೆ. ಮತ್ತು ಅಧಿಕಾರ ಹಿಡಿಯುವ ನವ-ಫ್ಯಾಸಿಸ್ಟರಿಗೂ ಸಹ ಈ ಅತಿ-ಉತ್ಪಾದನೆಯ ಪ್ರವೃತ್ತಿಯನ್ನು ತಡೆಯುವುದು ಸಾಧ್ಯವಿಲ್ಲ: ಜಾಗತಿಕವಾಗಿ ಹರಿದಾಡುವ ಹಣಕಾಸು ಬಂಡವಾಳವನ್ನು ಎದುರಿಸುತ್ತಿರುವ ಪ್ರಭುತ್ವವು ಒಂದು ರಾಷ್ಟ್ರ-ಪ್ರಭುತ್ವವಾಗಿಯೇ ಉಳಿದಿರುವುದರಿಂದ, ನವ-ಫ್ಯಾಸಿಸ್ಟ್ ಸರ್ಕಾರವೂ ಸಹ ನವ-ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಶ್ರೀಮಂತರ ಮೇಲೆ ವಿಧಿಸುವ ತೆರಿಗೆಗಳನ್ನು ಹೆಚ್ಚಿಸುವ ಮೂಲಕವಾಗಲಿ ಅಥವಾ ಬೃಹತ್ ವಿತ್ತೀಯ ಕೊರತೆಯ ಮೂಲಕವಾಗಲಿ ಹಣ ಒದಗಿಸಿಕೊಂಡು ಒಟ್ಟು ಬೇಡಿಕೆಯನ್ನು ಹೆಚ್ಚಿಸುವಲ್ಲಿ, ಈ ಮೊದಲಿನಂತೆಯೇ ಅಸಮರ್ಥವಾಗಿಯೇ ಇರುತ್ತದೆ.

ಒಂದು ಪ್ರಶ್ನೆಯನ್ನು ಕೇಳಬಹುದು: ಸ್ಥಗಿತತೆಯ ಪ್ರವೃತ್ತಿಯನ್ನು ಎದುರಿಸುವಲ್ಲಿ ರಾಷ್ಟ್ರ-ಪ್ರಭುತ್ವವು ಹೊಂದಿರುವ ಈ ಅಸಮರ್ಥತೆಯ ಮತ್ತು ಅದರ ಕಾರಣದಿಂದಾಗಿ ನವ-ಫ್ಯಾಸಿಸಂ ಮೇಲುಗೈ ಪಡೆಯುತ್ತಿರುವುದರ ಹೊಣೆಯನ್ನು ಸಾಮ್ರಾಜ್ಯಶಾಹಿಯ ಮೇಲೆ ಏಕೆ ಹೊರಿಸಬೇಕು? ಸರಳವಾದ ಉತ್ತರವೆಂದರೆ, ಜಾಗತಿಕರಣಗೊಂಡ ಹಣಕಾಸು ಬಂಡವಾಳದ ಸುಳಿಯಿಂದ ತನ್ನನ್ನು ಬಿಡಿಸಿಕೊಳ್ಳುವ ಯಾವುದೇ ದೇಶದ ಪ್ರಯತ್ನವು ಮತ್ತು ಬೇಡಿಕೆಯನ್ನು ಹೆಚ್ಚಿಸುವ ಸಲುವಾಗಿ ಪ್ರಭುತ್ವವನ್ನು ಬಳಸಿಕೊಳ್ಳುವ ಯಾವುದೇ ದೇಶದ ಪ್ರಯತ್ನವು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳ ಕೂಟವು ವಿಧಿಸುವ ಆರ್ಥಿಕ ನಿರ್ಬಂಧಗಳಿಗೆ ಗುರಿಯಾಗುತ್ತದೆ. ಸಾಮ್ರಾಜ್ಯಶಾಹಿಯು ತನ್ನ ಪ್ರಾಬಲ್ಯವನ್ನು ಪುನಃ ದೃಢಪಡಿಸಿಕೊಳ್ಳಲು ಬಳಸುವ ಮೊದಲ ಅಸ್ತ್ರವು, ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲೆಡೆಗಳಲ್ಲೂ ಜನರಿಗೆ ತೀವ್ರ ಸಂಕಟವನ್ನು ತರುತ್ತದೆ ಮತ್ತು ಕೊನೆಗೆ ಒಂದು ನವ-ಫ್ಯಾಸಿಸ್ಟ್ ಆಳ್ವಿಕೆಯನ್ನು ಹೇರುತ್ತದೆ.

ವಿಶ್ವದ ಕೆಲವು ಪ್ರದೇಶಗಳ ಮೇಲೆ ಸಾಮ್ರಾಜ್ಯಶಾಹಿಯು ತನ್ನ ಪ್ರಾಬಲ್ಯವನ್ನು ಪುನಃ ದೃಢಪಡಿಸಿಕೊಳ್ಳುವ ಎರಡನೆಯ ಮಾರ್ಗವೆಂದರೆ ಅದು ಯುದ್ಧಗಳ ಮೂಲಕವೇ. ಯುದ್ಧಗಳು ಈಗ ವಿಶ್ವವನ್ನು ವಿನಾಶದತ್ತ ತಳ್ಳುತ್ತಿವೆ. ಪ್ರಸ್ತುತ ನಡೆಯುತ್ತಿರುವ ಎರಡೂ ಯುದ್ಧಗಳು ಸಾಮ್ರಾಜ್ಯಶಾಹಿಯ ಉತ್ತೇಜನೆಯಿಂದ ಮತ್ತು ಸಮರ್ಥನೆಯಿಂದಲೇ ನಡೆಯುತ್ತಿವೆ. ಇವುಗಳಲ್ಲಿ ಪರಮಾಣು ಅಸ್ತ್ರಗಳ ಬಳಕೆಯ ಸಂಭಾವ್ಯತೆಯೂ ಇದೆ. ಮೊದಲು ಉಕ್ರೇನ್ ಯುದ್ಧವನ್ನು ತೆಗೆದುಕೊಳ್ಳಿ. ಸೋವಿಯತ್ ಒಕ್ಕೂಟವು ಪತನಗೊಂಡಾಗ, ಮಿಖಾಯಿಲ್ ಗೋರ್ಬಚೇವ್ ಅವರಿಗೆ ನ್ಯಾಟೋ (ಯುಎಸ್ ನೇತೃತ್ವದ ಮಿಲಿಟರಿ ಕೂಟ) ವ್ಯಾಪ್ತಿಯನ್ನು ಪೂರ್ವ ದಿಕ್ಕಿನಲ್ಲಿ ರಷ್ಯಾದತ್ತ ವಿಸ್ತರಿಸುವುದಿಲ್ಲ ಎಂದು ಭರವಸೆ ನೀಡಲಾಗಿತ್ತು. ಆದರೆ, ನ್ಯಾಟೋವನ್ನು ಪೂರ್ವದ ಉಕ್ರೇನಿನವರೆಗೂ ಪುಟ 14 ಕ್ಕೆ

ಕೇರಳ: ವಿದ್ಯಾರ್ಥಿ ಸಂಘದ ಚುನಾವಣೆ ಭರ್ಜರಿ ಜಯ ಸಾಧಿಸಿದ ಎಸ್‌ಎಫ್‌ಐ



ಕೇರಳದ ಕಾಲೇಜುಗಳಲ್ಲಿ ನಡೆದ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್‌ಎಫ್‌ಐ ಗೆ ಭರ್ಜರಿ ಜಯ ಸಾಧಿಸಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್ (**SFI**) ಕಣ್ಣೂರು ವಿಶ್ವವಿದ್ಯಾನಿಲಯದ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಗಮನಾರ್ಹ ಗೆಲುವು ಸಾಧಿಸಿದ್ದು, ಕಾಸರಗೋಡು, ಕಣ್ಣೂರು ಮತ್ತು ವಯನಾಡು ಜಿಲ್ಲೆಗಳ 65 ಕಾಲೇಜುಗಳಲ್ಲಿ 45 ಯೂನಿಯನ್‌ಗಳನ್ನು ಎಸ್‌ಎಫ್‌ಐ ಗೆದ್ದಿದೆ ಎಂದು ಕೇರಳ ಎಸ್‌ಎಫ್‌ಐ ರಾಜ್ಯ ಸಮಿತಿ ತಿಳಿಸಿದೆ.

ಕಣ್ಣೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಎರಡನೇ ಹಂತದ ಚುನಾವಣೆಯಲ್ಲಿ ನಡೆದ ಎಲ್ಲಾ ಐದು ವಿಭಾಗೀಯ ಕೇಂದ್ರಗಳಲ್ಲಿ ಎಸ್‌ಎಫ್‌ಐ ಸಂಪೂರ್ಣ ಗೆಲುವು ಸಾಧಿಸಿದೆ. ಕ್ಯಾಲಿಕಟ್ ವಿಶ್ವವಿದ್ಯಾಲಯದ ಕಾಲೇಜು ಯೂನಿಯನ್ ಚುನಾವಣೆಯಲ್ಲಿಯೂ ಎಸ್‌ಎಫ್‌ಐ ಭರ್ಜರಿ ಜಯ ಸಾಧಿಸಿದೆ.

171 ಕಾಲೇಜುಗಳಲ್ಲಿ ಸಂಘಟನಾತ್ಮಕವಾಗಿ ನಡೆದ ಚುನಾವಣೆಗಳಲ್ಲಿ 102 ಕಾಲೇಜುರಲ್ಲಿ ಎಸ್‌ಎಫ್‌ಐ ಗೆಲುವು ಸಾಧಿಸಿದೆ. ಇದರಲ್ಲಿ ಎಸ್‌ಎಫ್‌ಐ ಅವಿರೋಧವಾಗಿ ಗೆದ್ದಿರುವ 29 ಕಾಲೇಜು ಒಕ್ಕೂಟಗಳು ಸೇರಿವೆ. ಮಹಾತ್ಮಾ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ 129 ಕಾಲೇಜುಗಳಲ್ಲಿ 104 ಕಾಲೇಜುಗಳಲ್ಲಿ ಎಸ್‌ಎಫ್‌ಐ ಜಯಭೇರಿ ಬಾರಿಸಿದೆ. 62 ಕಾಲೇಜುಗಳಲ್ಲಿ ಎಸ್‌ಎಫ್‌ಐ ಅವಿರೋಧವಾಗಿ ಗೆಲುವು ಸಾಧಿಸಿದೆ.

ಕೇರಳ ವಿಶ್ವವಿದ್ಯಾನಿಲಯ ವ್ಯಾಪ್ತಿಯ 77 ಕ್ಯಾಂಪಸ್‌ಗಳಲ್ಲಿ ಚುನಾವಣೆ ನಡೆದಿದ್ದು 64ರಲ್ಲಿ ಎಸ್‌ಎಫ್‌ಐ ಗೆಲುವು ಸಾಧಿಸಿದೆ. ಈ ಹಿಂದೆ, ಎಸ್‌ಎಫ್‌ಐ ಪಾಲಿಟೆಕ್ನಿಕ್ ಕಾಲೇಜು ಯೂನಿಯನ್ ಚುನಾವಣೆಗಳು ಮತ್ತು ಶಾಲಾ ಸಂಸತ್ತಿನ ಚುನಾವಣೆಗಳಲ್ಲಿಯೂ ಭಾರಿ ಗೆಲುವು ದಾಖಲಿಸಿತ್ತು.

ಎಸ್‌ಎಫ್‌ಐ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿರುವ ರಾಜ್ಯಪಾಲರು ಮತ್ತು ಮಾಧ್ಯಮಗಳಿಗೆ ಈ ಗೆಲುವು ತಕ್ಕ ಉತ್ತರವಾಗಿದೆ ಎಂದು ಎಸ್‌ಎಫ್‌ಐ ರಾಜ್ಯ ನಾಯಕತ್ವ ಹೇಳಿದೆ. ಎಸ್‌ಎಫ್‌ಐ ಈ ಬಾರಿಯ ಚುನಾವಣೆಯನ್ನು "Rise in Rage against the Blatant Lies." ಎಂಬ ಘೋಷಣೆಯೊಂದಿಗೆ ಸ್ಪರ್ಧಿಸಿದೆ.



ಉಪ ಚುನಾವಣೆ: ಪ್ರತಿಷ್ಠಿತರ ಕಣಗಳು........ ಪುಟ 3 ರಿಂದ

ಗಣನೀಯವಾಗಿ ಬೆಳೆದಿದೆ. ಶಾಸಕರಾಗಿ ಜನಸಾಮಾನ್ಯರ ಪ್ರಶ್ನೆಗಳ ಬಗ್ಗೆ ಬಗರು ಭೂಮಿ ಹಕ್ಕು ನೀಡುವ ಬಗ್ಗೆ ಮತ್ತು 660 ದಿನಕ್ಕಿಂತಲೂ ಹೆಚ್ಚಿನ ದಿನಗಳಿಂದ ನಿರಂತರ ಹೋರಾಟ ನಡೆಸುತ್ತಿರುವ ರೈತರ ಸಮಸ್ಯೆಗಳಿಗೆ ಇತ್ಯರ್ಥವೇ ಕಾಣದಿರುವುದು ಮತ್ತು ಕೈಗಾರಿಕೋದ್ಯಮಿಗಳ ಜೊತೆಯಲ್ಲಿ ಶಾಮೀಲಾಗಿರುವುದು, ಭ್ರಷ್ಟಾಚಾರ ಎಲ್ಲ ಕಛೇರಿಗಳಲ್ಲಿ ತಾಂಡವ ಆಡುತ್ತಿರುವುದು ಮುಂತಾದ ಪ್ರಶ್ನೆಗಳಲ್ಲಿ ಕಾಂಗ್ರೆಸ್ ಮತ್ತು ಶಾಸಕರಾಗಿದ್ದ ತುಕರಾಮ್ ವಿಫಲರಾಗಿದ್ದಾರೆ . ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದ ವೈಫಲ್ಯಗಳು ಮತ್ತು ಎಡರು ತೊಡರುಗಳು ಸಹ ಇದಕ್ಕೆ ಮತ್ತಷ್ಟು ಇಂಬು ಕೊಟ್ಟಿದೆ. ಹೀಗಾಗಿ ಹಿಂದೆಲ್ಲಾ ಕಾಂಗ್ರೆಸ್ಸಿಗೆ ಸತತವಾಗಿ ಜನತೆ ಬೆಂಬಲಿಸುತ್ತಿದ್ದರೂ ಅಭ್ಯರ್ಥಿ ಆಯ್ಕೆಯಲ್ಲಿ ಅತಿ ಹೆಚ್ಚಿನ ಜಾಗರೂಕತೆಯನ್ನು ತೋರಬೇಕಾಗುತ್ತದೆ.

ಮತ್ತೂ ಒಂದು ವಿಶೇಷ ಬೆಳವಣಿಗೆ ಎಂದರೆ ಬಳ್ಳಾರಿ ಜಿಲ್ಲೆಗೆ ಕಾಲಿಡದಂತೆ ನಿರ್ಬಂಧಿಸಲಾಗಿದ್ದ ಮಾಜಿ ಸಚಿವ ಹಾಲಿ ಗಂಗಾವತಿಯ ಶಾಸಕ ಗಾಲಿ ಜನಾರ್ಧನ ರೆಡ್ಡಿ ಅವರಿಗೆ ಬಳ್ಳಾರಿ ಜಿಲ್ಲೆಯ ಪ್ರವೇಶಕ್ಕೆ ನ್ಯಾಯಾಲಯ ಅನುಮತಿ ಕೊಟ್ಟಿದೆ. ಆ ಕ್ಷಣದಿಂದಲೇ ಗಾಲಿ ಜನಾರ್ಧನರೆಡ್ಡಿ ಸಂಡೂರಿಗೆ ಬಂದದ್ದೂ ಆಗಿದೆ. ಅಲ್ಲಿಯೂ ಒಂದು ಮನೆಯನ್ನು ಮಾಡಿಯೂ ಆಗಿದೆ. ಸಂಡೂರಿನ ಚುನಾವಣೆಯ ಹೊಣೆಗಾರಿಕೆಯನ್ನು ಗಾಲಿ ಜನಾರ್ಧನ ರೆಡ್ಡಿ ಯವರಿಗೇ ನೀಡಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಆಗಿರುವ ಸಂಸದ ಬಸವರಾಜ್ ಬೊಮ್ಮಾಯಿಯವರು ತಿಳಿಸಿದ್ದಾರೆ. ಅಂದರೆ ಸಂಡೂರಿನ ಚುನಾವಣೆಯ ಖಾವು ಕೂಡ ಹೆಚ್ಚಿ ಅತ್ಯಂತ ಹಣಾಹಣೆಯಾಗಿ ಇರಲಿದೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮತ್ತು ಗಾಲಿ ಜನಾರ್ದನ ರೆಡ್ಡಿಯವರು ಹೇಳಿದ ಅಭ್ಯರ್ಥಿಯನ್ನು ಸಂಡೂರು ಕ್ಷೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಬಹುದು ಎನ್ನುವ ಸಾಧ್ಯತೆಗಳು ಇವೆ. ಹೀಗಾಗಿ ಈ ಉಪಚುನಾವಣೆಯೂ ಕೂಡ ಕಾಂಗ್ರೆಸ್ ಪಕ್ಷಕ್ಕೂ ಮತ್ತು ಬಿಜೆಪಿ – ಜೆಡಿಎಸ್ಸಿನ ಮೈತ್ರಿಕೂಟಕ್ಕೂ ಪ್ರತಿಷ್ಠೆಯ ವಿಷಯವಾಗಿದೆ.

ಈ ಉಪಚುನಾವಣೆಯಲ್ಲಿ ಸಂಡೂರಿನಲ್ಲಿ ಕಾಂಗ್ರೆಸ್ ಸೋತು ಬಿಜೆಪಿ ಗೆದ್ದದ್ದೇ ಆದರೆ ಈಗಾಗಲೇ ಎಲ್ಲಾ ರೀತಿಯಿಂದ ದಾಳಿಗೊಳಗಾಗಿರುವ ಕಾಂಗ್ರೆಸ್ ವಿರುದ್ಧದ ಗಾಳಿ ರಾಜ್ಯದಲ್ಲಿ ಬೀಸುತ್ತಿದೆ ಎಂದು ಬಿಜೆಪಿ ಹೇಳಿಕೊಳ್ಳಲು ಮತ್ತು ರಾಜೀನಾಮೆ ಕೊಟ್ಟು ಕೆಳಗೆ ಇಳಿಯಬೇಕು ಎಂದು ಆಗ್ರಹಿಸಲು ಒಂದು ಅಸ್ತ್ರ ಸಿಕ್ಕಂತೆ ಆಗಬಲ್ಲದು.

ಇನ್ನು ಶಿಗ್ಗಾಂವಿ ಮತ್ತು ಚನ್ನಪಟ್ಟಣದಲ್ಲಿ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳಲು ಮೈತ್ರಿಕೂಟ ಹೋರಾಡಬೇಕಾಗುತ್ತದೆ. ಅಲ್ಲಿಂದ ಒಂದು ಅಥವಾ ಎರಡು ಸ್ಥಾನಗಳನ್ನು ಕಾಂಗ್ರೆಸ್ ಪಡೆದರೆ ರಾಜಕೀಯವಾಗಿ ಕಾಂಗ್ರೆಸ್ಸಿಗೆ ಸಕಾರಾತ್ಮಕವಾದ ಅಭಿಪ್ರಾಯವನ್ನು ರೂಢಿಸಬಲ್ಲದು. ಹೀಗಾಗಿ ಈ ಉಪಚುನಾವಣೆ ಪ್ರತಿಷ್ಠಿತರು, ಪ್ರತಿಷ್ಠಿತರ ಮಕ್ಕಳು ಸ್ಪರ್ಧಿಸುವ ಕ್ಷೇತ್ರವಾಗಿ ಮಾರ್ಪಾಡದಲ್ಲಿ ಮತ್ತಷ್ಟು ಚುನಾವಣೆ ಬಿರುಸಿನಿಂದ ನಡೆಯಲಿದೆ. ವಿಶೇಷವೆಂದರೆ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಈ ಹಿಂದೆ ಸ್ಪರ್ಧಿಸಿದವರು ಅವರ ಕುಟುಂಬಕ್ಕೆ ಟಿಕೆಟ್ ನೀಡಬೇಕು ಎನ್ನುವ ಪ್ರಬಲ ಒತ್ತಾಸೆಯನ್ನು ಮಂಡಿಸುತ್ತಿದ್ದಾರೆ. ಹಿಂದೆಲ್ಲಾ ಕುಟುಂಬದ ರಾಜಕಾರಣವನ್ನು ವಿರೋಧಿಸುತ್ತಿದ್ದ ಬಿಜೆಪಿ, ತಾನು ಕಡು ವಿರೋಧಿಸುತ್ತಿದ್ದ ದೇವೇಗೌಡರ ಕುಟುಂಬದ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ತನ್ನ ರಾಜಕೀಯ ಅವಕಾಶವಾದ ತೋರಿಸಿತ್ತು. ಅಷ್ಟು ಮಾತ್ರ ಜೆ.ಡಿ.ಎಸ್. ಮತ್ತು ಕಾಂಗ್ರೆಸ್ ನ್ನು ಮೂದಲಿಸುತ್ತಿದ್ದ ಬಿಜೆಪಿ ಒಳಗಡೆಯಲ್ಲಿ ಇಲ್ಲಿವರೆಗೂ ಕುಟುಂಬ ರಾಜಕೀಯಕ್ಕೆ ಜೋತು ಬಿದ್ದ ಅನೇಕ ಉದಾಹರಣೆಗಳನ್ನು ಕಾಣಬಹುದು. ಈ ಎಲ್ಲಾ ಮಗ್ಗಲುಗಳಿಂದಲೂ ಈ ಚುನಾವಣೆ ಉಪಚುನಾವಣೆಯಾದರೂ ಇಲ್ಲಿಯ ಫಲಿತಾಂಶಕ್ಕೆ ಮಹತ್ವದ ರಾಜಕೀಯ ಆಯಾಮ ಇದೆ ಎನ್ನುವುದನ್ನು ಗಮನಿಸಬೇಕು.

ನವ–ಉದಾರವಾದಿ ಆಳ್ವಿಕೆಯ ಹೇರಿಕೆ..... ಪುಟ 13 ರಿಂದ

ವಿಸ್ತರಿಸಲಾಯಿತು. ಸ್ವತಃ ಉಕ್ರೇನ್‌ಗೆ ನ್ಯಾಟೋ ಸೇರುವ ಇಷ್ಟವಿರಲಿಲ್ಲ. ನ್ಯಾಟೋ ಸೇರುವ ಕಲ್ಪನೆಯನ್ನು ವಿರೋಧಿಸಿದ ಉಕ್ರೇನಿನ ವಿಧ್ಯುಕ್ತ ಚುನಾಯಿತ ಅಧ್ಯಕ್ಷರಾದ ವಿಕ್ಟರ್ ಯಾನುಕೋವಿಚ್ ಅವರನ್ನು ಒಂದು ದಂಗೆಯ ಮೂಲಕ ಅಧಿಕಾರದಿಂದ ಇಳಿಸಲಾಯಿತು. ಈ ದಂಗೆಯು ಯುಎಸ್ ಅಧಿಕಾರಿ ವಿಕ್ಟೋರಿಯಾ ನುಲ್ಯಾಂಡ್ ಅವರ ಮೇಲ್ವಿಚಾರಣೆಯಲ್ಲಿ ವಿನ್ಯಾಸಗೊಳಿಸಲ್ಪಟ್ಟಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ ಹಿಟ್ಲರನ ಸೈನ್ಯದೊಂದಿಗೆ ಸಹಕರಿಸಿದ ಸ್ಟೆಪನ್ ಬಂಡೇರಾ ಅವರ ಬೆಂಬಲಿಗರನ್ನು ಸರ್ಕಾರದಲ್ಲಿ ಕುಳ್ಳಿರಿಸಲಾಯಿತು. ಈ ಹೊಸ ಸರ್ಕಾರವು ನ್ಯಾಟೋ ಸೇರುವ ಬಯಕೆಯನ್ನು ವ್ಯಕ್ತಪಡಿಸಿದ್ದು ಮಾತ್ರವಲ್ಲದೆ ರಷಿಯನ್ ಭಾಷೆ ಮಾತನಾಡುವ ಡೊನ್ಬಾಸ್ ಪ್ರದೇಶದೊಂದಿಗೆ ಸಂಘರ್ಷವನ್ನು ಆರಂಭಿಸಿತು. ಈ ಸಂಘರ್ಷವು ರಷ್ಯಾ ಮಧ್ಯಪ್ರವೇಶಿಸುವ ಮುನ್ನವೇ ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಂಡಿತು.

ಶಾಂತಿಯ ಮಾರ್ಗದಲ್ಲಿ ಅಡ್ಡ ನಿಂತಿರುವವರು ಯಾರು?

ಈ ವಿಷಯಗಳ ಬಗ್ಗೆ ಒಂದು ಅಗ್ನಿ ಪರೀಕ್ಷೆಯ (litmus test) ಪ್ರಶ್ನೆಯನ್ನು ನಾವು ಕೇಳೋಣ: ಉಕ್ರೇನ್ ಯುದ್ಧದಲ್ಲಿ ಯಾರು ಶಾಂತಿ ಸ್ಥಾಪನೆಯ ಪರ ಇದ್ದಾರೆ ಮತ್ತು ಯಾರು ಅದನ್ನು ವಿರೋಧಿಸುತ್ತಾರೆ? ಫ್ರಾನ್ಸ್ ಮತ್ತು ಜರ್ಮನಿಯ ಸಹಾಯದಿಂದ ರಷ್ಯಾ ಮತ್ತು ಉಕ್ರೇನ್ ನಡುವೆ ನಡೆದ ಮಿನ್ಸ್ಕ ಒಪ್ಪಂದವನ್ನು ಯುಎಸ್ ಮತ್ತು ಬ್ರಿಟನ್ ತಲೆಕೆಳಗೆ ಮಾಡಿ ಬಿಟ್ಟವು. ಬ್ರಿಟಿಷ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಈ ಒಪ್ಪಂದವನ್ನು ಸ್ವೀಕರಿಸದಂತೆ ಉಕ್ರೇನನ್ನು ತಡೆಯಲು ಕೀವ್‌ಗೆ ಹಾರಿ ಹೋದರು. ಬೇರೆ ಬೇರೆ ಸಾಮ್ರಾಜ್ಯಶಾಹಿ ಶಕ್ತಿಗಳು ಬೇರೆ ಬೇರೆ ಧ್ವನಿಯಲ್ಲಿ ಮಾತನಾಡುತ್ತಿವೆ ಎಂದು ಭಾವಿಸಲಾಗದು. ಏಕೆಂದರೆ, ಮಿನ್ಸ್ಕ ಒಪ್ಪಂದವು ಯುಕ್ರೇನ್ ಯುದ್ಧಕ್ಕೆ ತಯಾರಿ ಮಾಡಿಕೊಳ್ಳುವವರೆಗೆ ಸಮಯಾವಕಾಶವನ್ನು ಪಡೆಯುವ ತಂತ್ರವಾಗಿತ್ತು ಎಂಬುದನ್ನು ಅಂದಿನ ಜರ್ಮನ್ ಚಾನ್ಸೆಲರ್ ಏಂಜೆಲಾ ಮರ್ಕೆಲ್ ಈಗ ಒಪ್ಪಿಕೊಂಡಿದ್ದಾರೆ. ನಿಸ್ಸಂದೇಹವಾಗಿ ಎದ್ದುಕಾಣುವ ಒಂದು ಸಂಗತಿಯೆಂದರೆ, ಉಕ್ರೇನ್ ಯುದ್ಧವು ಮೂಲತಃ ರಷ್ಯಾವನ್ನು ಸಾಮ್ರಾಜ್ಯಶಾಹಿಯ ಪ್ರಾಬಲ್ಯದೊಳಗೆ ತರುವ ಒಂದು ಸಾಧನವಾಗಿದೆ ಮತ್ತು ಇದು ಸೋವಿಯತ್ ಒಕ್ಕೂಟದ ಪತನದ ನಂತರ ಸಾಮ್ರಾಜ್ಯಶಾಹಿಯ ಒಂದು ಯೋಜನೆಯಾಗಿತ್ತು ಕೂಡ. ಇದನ್ನು ಬೋರಿಸ್ ಯೆಲ್ಟ್ಸಿನ್ ಅಧ್ಯಕ್ಷತೆಯ ಅವಧಿಯಲ್ಲೇ ಬಹುಪಾಲು ಸಾಧಿಸಲಾಗಿತ್ತು.

ಈಗ ಇನ್ನೊಂದು ಯುದ್ಧವನ್ನು ತೆಗೆದುಕೊಳ್ಳಿ. ಪ್ಯಾಲೆಸ್ಟಿನಿಯನ್ ಜನರ ವಿರುದ್ಧ ಮತ್ತು ಈಗ ಲೆಬನಾನ್ ವಿರುದ್ಧ ದಿಗ್ಭ್ರಮೆಗೊಳಿಸುವ ಕ್ರೌರ್ಯ ಮತ್ತು ನಿರ್ದಯತೆಯೊಂದಿಗೆ ಇಸ್ರೇಲ್ ಯುದ್ಧದಲ್ಲಿ ತೊಡಗಿದೆ. ಯುಎಸ್ ಸಾಮ್ರಾಜ್ಯಶಾಹಿಯಿಂದ ಇಸ್ರೇಲ್‌ಗೆ ದೊರೆತ ಸಂಪೂರ್ಣ ಬೆಂಬಲವು ಮೇಲು ನೋಟದಲ್ಲಿ ಯಾವುದೇ ಸಾಮ್ರಾಜ್ಯಶಾಹಿ ಯೋಜನೆಗಳಿಗಿಂತ ಹೆಚ್ಚಾಗಿ ಅಮೆರಿಕಾದ ರಾಜಕೀಯದಲ್ಲಿ ಝಿಯಾನಿಸ್ಟ್ ಲಾಬಿಯ ಬಲದ ಪ್ರತಿಬಿಂಬವಾಗಿದೆ ಎಂದು ತೋರುತ್ತದೆ. ಆದರೆ, ಇದು ಒಂದು ತಪ್ಪು ಅನಿಸಿಕೆ. ಸಾಮ್ರಾಜ್ಯಶಾಹಿಯು ಇಸ್ರೇಲಿನ "ನೆಲಸಿಗ ವಸಾಹತುಶಾಹಿ" ಯೋಜನೆಯನ್ನು ಕಾರ್ಯಗತಗೊಳಿಸಲು ಇಸ್ರೇಲ್ ಇಂದು ನಡೆಸುತ್ತಿರುವ ನರಮೇಧವನ್ನು ಮತ್ತು ನಾಳೆಯ ಸಾಮೂಹಿಕ ಜನಾಂಗೀಯ ಶುದ್ಧೀಕರಣವನ್ನು ಉತ್ತೇಜಿಸುವಷ್ಟಕ್ಕೆ ಮಾತ್ರವೇ ಶಾಮೀಲಾಗಿಲ್ಲ; ಇಸ್ರೇಲ್ ಮೂಲಕ ಇಡೀ ಪ್ರದೇಶವನ್ನು ನಿಯಂತ್ರಿಸುವುದು ಅದರ ಯೋಜನೆಯಾಗಿದೆ.

ಇಲ್ಲಿ ಮತ್ತೊಮ್ಮೆ ಅಗ್ನಿ ಪರೀಕ್ಷೆ: ಶಾಂತಿಯ ದಾರಿಯಲ್ಲಿ ಇಂದು ಅಡ್ಡ ನಿಂತಿರುವವರು ಯಾರು? ಯುಎಸ್ ಔಪಚಾರಿಕವಾಗಿ "ಎರಡು–ಪ್ರಭುತ್ವ" ಪರಿಹಾರವನ್ನು ಅಂಗೀಕರಿಸುತ್ತದೆ. ಆದರೆ, ಪ್ಯಾಲೆಸ್ಟೈನನ್ನು ವಿಶ್ವಸಂಸ್ಥೆಯ 194ನೇ ಸದಸ್ಯ–ರಾಷ್ಟ್ರವಾಗಿ ಸ್ವೀಕರಿಸುವ ಪ್ರಸ್ತಾಪವು (ಇದು "ಎರಡು–ಪ್ರಭುತ್ವ" ಪರಿಹಾರವನ್ನು ಕಾರ್ಯಗತಗೊಳಿಸುವ ಮೊದಲ ಹೆಜ್ಜೆಯಾಗಿದೆ) ಪ್ರತಿ ಬಾರಿ ಜನರಲ್ ಅಸೆಂಬ್ಲಿಯ ಮುಂದೆ ಬಂದಾಗಲೂ ಯುಎಸ್ ಅದರ ವಿರುದ್ಧ ಮತ ಹಾಕಿದೆ. ಮತ್ತು ಭದ್ರತಾ ಮಂಡಳಿಯಲ್ಲಿ ಅಂತಹ ಕ್ರಮವನ್ನು ವೀಟೋ ಮಾಡುತ್ತದೆ. ನೈಜವಾದ "ಎರಡು–ಪ್ರಭುತ್ವ" ಪರಿಹಾರಕ್ಕಾಗಿ ಅದರ ಬೆಂಬಲವು ಕೇವಲ ಒಂದು ಕಪಟವಷ್ಟೇ. ಅದಕ್ಕಿಂತಲೂ ಹೆಚ್ಚಾಗಿ, ಇಸ್ರೇಲ್ ಮತ್ತು ಅದರ ವಿರೋಧಿಗಳ ನಡುವಿನ ಒಪ್ಪಂದದ ಮಾತುಕತೆಗಳಲ್ಲಿ ಕೆಲವು ಅಂಶಗಳ ಬಗ್ಗೆ ಒಂದು ನಿರ್ಣಾಯಕ ಹಂತವನ್ನು ತಲುಪಿದಾಗ, ಇಸ್ಮಾಯೆಲ್ ಹನೀಹ್ ಅಥವಾ ಹಸನ್ ನಸ್ರಲ್ಲಾ ಈ ನಾಯಕರು ಇಸ್ರೇಲಿನಿಂದ ಹತ್ಯೆಯಾಗುತ್ತಾರೆ. ಇಸ್ರೇಲ್‌ಗೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಕದನ ವಿರಾಮದ ಮಾತುಕತೆಗಳು ಕೇವಲ ಒಂದು ಕಪಟಾಚರಣೆಯಷ್ಟೇ. ಯುಎಸ್ ಸಾಮ್ರಾಜ್ಯಶಾಹಿಯು ಈ ಕಪಟ ನಾಟಕದಲ್ಲಿ ಪಾಲುದಾರನಾಗಿದೆ ಎಂಬುದು ಸ್ಪಷ್ಟವಾಗಿದೆ. ಇಸ್ರೇಲ್‌ನ ನೆಲಸಿಗ ವಸಾಹತುಶಾಹಿಯು ತನಗೆ ಯುಎಸ್ ಸಾಮ್ರಾಜ್ಯಶಾಹಿಯು ಮೀಸಲಿಟ್ಟ ಸ್ಥಳೀಯ ಮಿಲಿಟರಿ ಸಿಪಾಯಿಯ ಪಾತ್ರವನ್ನು ತನ್ಮಯತೆಯಿಂದ ವಹಿಸುತ್ತಿದೆ. ಹಾಗಾಗಿ, ಯುದ್ಧವು ಉಲ್ಬಣಗೊಳ್ಳುವುದರೊಂದಿಗೆ, ಒಂದು ಪರಮಾಣು ಮುಖಾಮುಖಿಯ ಅಪಾಯವು ಪ್ರತಿದಿನವೂ ಹೆಚ್ಚುತ್ತಿದೆ.

ನವ–ಉದಾರವಾದಿ ಆರ್ಥಿಕ ವ್ಯವಸ್ಥೆಯನ್ನು ಹೇರುವುದು ಮತ್ತು ಯುದ್ಧಗಳಲ್ಲಿ ತೊಡಗಿಸಿಕೊಳ್ಳುವುದು ಇವು ಈಗ ಸಂಯುಕ್ತಗೊಂಡಿರುವ ಸಾಮ್ರಾಜ್ಯಶಾಹಿಯು ತನ್ನ ಪ್ರಾಬಲ್ಯವನ್ನು ಪುನಃ ಸ್ಥಾಪಿಸಲು ಬಳಸಿಕೊಳ್ಳುವ ಎರಡು ಅಸ್ತ್ರಗಳಾಗಿವೆ ಎಂಬುದನ್ನು ನಾನು ಹೇಳಿರುವೆ. ಇವುಗಳಲ್ಲಿ ಒಂದು ನವ–ಫ್ಯಾಸಿಸಂನತ್ತ ಕೊಂಡೊಯ್ಯುತ್ತಿದ್ದರೆ, ಮತ್ತೊಂದು ಮನುಕುಲವನ್ನು ವಿನಾಶದತ್ತ ತಳ್ಳುತ್ತಿದೆ. ❍

ಕಸ್ತೂರಿ ರಂಗನ್ ಸಮಿತಿಯ ಶಿಫಾರಸುಗಳ ಅನುಷ್ಠಾನ: ಕರ್ನಾಟಕದ ಸರಕಾರದ ನಿಲುವು

ಡಾ.ಇ.ರಾ.ದುರ್ಗಾಪ್ರಸಾದ್

ಕಸ್ತೂರಿ ರಂಗನ್ ವರದಿಯನ್ನು ಒಪ್ಪಲಾಗದು ಎಂದು ಬಿಜೆಪಿ ನಾಯಕರು ಕರ್ನಾಟಕದಲ್ಲಿ ಅಬ್ಬರಿಸಿದರೂ ಕೇಂದ್ರ ಸರಕಾರ ಅದರ ಜಾರಿಗೆ ಒಪ್ಪಿಗೆ ನೀಡಿ ಹತ್ತು ವರ್ಷಗಳೇ ಕಳೆದಿವೆ. ಅದರ ಜಾರಿಗೆ ಅಧಿಸೂಚನೆಗಳನ್ನು ಹೊರಡಿಸುತ್ತಾ ಬಂದಿದೆ. ಇದೀಗ ಹೊರಡಿಸಿರುವ ಹೊಸ ಕರಡು ಅಧಿಸೂಚನೆಗೆ ಕರ್ನಾಟಕದ ಪ್ರತಿಕ್ರಿಯೆ ಏನಾಗಿರಬೇಕು?

2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರಕಾರ ನಮ್ಮ ದೇಶದ ಹಸಿರು ಪೀಠದಲ್ಲಿ ಒಂದು ಅಫಿಡಾವಿಟ್ ಮಂಡಿಸಿ ಅದರಲ್ಲಿ "ತಮ್ಮ ಸರಕಾರ ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಒಪ್ಪಿಕೊಂಡಿದ್ದು ಅದನ್ನೇ ಅನುಷ್ಠಾನಕ್ಕೆ ತರುವುದಾಗಿ" ಒಪ್ಪಿಕೊಂಡಿತು.

ಅನಂತರ ವರದಿಯನ್ನು ಅನುಷ್ಠಾನಕ್ಕೆ ತರುವ ಪ್ರಕ್ರಿಯೆಯ ಭಾಗವಾಗಿ ಕರಡು ಅಧಿಸೂಚನೆಗಳನ್ನು ಪ್ರಕಟಿಸುತ್ತಾ ಬಂದಿದ್ದು ಈಗ 2024ರ ಜುಲೈ 31ರಂದು ಆರನೇ ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ.

ಪಶ್ಚಿಮ ಘಟ್ಟ ಪ್ರದೇಶವನ್ನು ರಕ್ಷಿಸುವ ಸಾಂವಿಧಾನಿಕ ಕರ್ತವ್ಯವು ಅತ್ಯಂತ ಪ್ರಮುಖವಾಗಿ ಕೇಂದ್ರ ಸರಕಾರದ್ದೆಂದು ನಮ್ಮ ದೇಶದ ಸರ್ವೋಚ್ಛ ನ್ಯಾಯಾಲಯವು ಹೇಳಿದೆ. ಮತ್ತು ಈ ಜವಾಬ್ದಾರಿ ಇರುವ ಭಾರತ ಸರಕಾರವು "ತಾನು ಕಸ್ತೂರಿರಂಗನ್ ಸಮಿತಿಯ ವರದಿಯಲ್ಲಿರುವ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವುದಾಗಿ" ಒಪ್ಪಿಕೊಂಡು 10 ವರ್ಷಗಳು ಕಳೆದಿವೆ.

ಕೇಂದ್ರ ಸರಕಾರದ ಈ ಒಪ್ಪಿಗೆಯನ್ನು ತಿರಸ್ಕರಿಸಲು ರಾಜ್ಯ ಸರಕಾರಗಳಿಗೆ ಸಾಧ್ಯವಿಲ್ಲ. ಈ ವರದಿಯಲ್ಲಿ ಸೂಚಿಸಿರುವ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸಿ ಕೆಲವು ಪ್ರದೇಶಗಳನ್ನು ಬಿಡಬೇಕೆನ್ನುವ ಅಥವಾ ಸೇರಿಸಬೇಕೆನ್ನುವ ಸಲಹೆಗಳನ್ನು ಈ ರಾಜ್ಯ ಸರಕಾರಗಳು ಕೊಡಬಹುದು ಅಷ್ಟೇ. ಅಂತಿಮ ತೀರ್ಮಾನ ಕೇಂದ್ರ ಸರಕಾರದ್ದಾಗಿರುತ್ತದೆ.

ಈ ಕರಡು ಅಧಿಸೂಚನೆಗೆ ರಾಜ್ಯ ಸರಕಾರಗಳು ಮಾತ್ರವಲ್ಲದೆ ಈ ವರದಿಯ ವ್ಯಾಪ್ತಿಗೆ ಬರುವ ಪ್ರದೇಶದ ಯಾವೊಬ್ಬನೂ ತನ್ನ ಆಕ್ಷೇಪಗಳನ್ನು, ಅಭಿಪ್ರಾಯಗಳನ್ನು ಬರೆದು ಕಳುಹಿಸಬಹುದು.


ಈ ಹಿಂದಿನ ಐದು ಕರಡು ಅಧಿಸೂಚನೆಗಳಿಗೂ ರಾಜ್ಯ ಸರಕಾರಗಳು ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಿವೆ. ಅಲ್ಲದೆ ಜನಸಾಮಾನ್ಯರೂ, ಸಂಘಟನೆಗಳೂ ತಮ್ಮ ಆಕ್ಷೇಪಣೆಗಳನ್ನು ಬರೆದು ಕಳುಹಿಸಿದ್ದಾರೆ. ಆದರೆ ಇಂದಿನವರೆಗಿನ ಅನುಭವವೆಂದರೆ ಕೇಂದ್ರ ಸರಕಾರ ಈ ಯಾವ ಆಕ್ಷೇಪಣೆಗಳನ್ನೂ, ಅಭಿಪ್ರಾಯಗಳನ್ನೂ ಗಣನೆಗೆ ತೆಗೆದುಕೊಂಡಿಲ್ಲ.

ಹಾಗಿದ್ದರೂ ಈಗ ಬಂದಿರುವ ಅಧಿಸೂಚನೆಗೆ ತನ್ನ ಅಭಿಪ್ರಾಯವನ್ನು ಬರೆದು ಕಳುಹಿಸುವುದು ರಾಜ್ಯ ಸರಕಾರದ ಕರ್ತವ್ಯವಾಗುತ್ತದೆ.

ಆರನೇ ಕರಡು ಅಧಿಸೂಚನೆ ಪ್ರಕಟವಾದ ನಂತರ ಆಗಸ್ಟ್ 28ರಂದು ಅಭಿಪ್ರಾಯ ವ್ಯಕ್ತಪಡಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆಯವರು "ಕಸ್ತೂರಿರಂಗನ್ ಸಮಿತಿಯ ವರದಿಯಲ್ಲಿ ರಾಜ್ಯದ ಪಶ್ಚಿಮ ಘಟ್ಟದ 20,668 ಚ.ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವಂತೆ ಸೂಚಿಸಿದೆ. ಆದರೆ ಈಗಾಗಲೇ ರಾಜ್ಯ ಸರಕಾರ ವನ್ಯಜೀವಿಧಾಮ, ಅಭಯಾರಣ್ಯ, ಹುಲಿ ಸಂರಕ್ಷಿತ ಮೀಸಲು ಸೇರಿದಂತೆ ವಿವಿಧ ಅರಣ್ಯ ಪ್ರದೇಶಗಳಲ್ಲಿ 16,632 ಚ.ಕಿ.ಮೀ. ಪ್ರದೇಶವನ್ನು ಘೋಷಿತ ಅರಣ್ಯ, ಸಂರಕ್ಷಿತ ಪ್ರದೇಶ ಮತ್ತು ಸಂರಕ್ಷಿತ ಪ್ರದೇಶಗಳಿಗೆ ಹೊಂದಿಕೊಂಡಿರುವ ಪರಿಸರ ಸೂಕ್ಷ್ಮ ವಲಯ(ಇ.ಖ.ಜ) ಎಂದು ಘೋಷಿಸಿದೆ. ಈ ಎಲ್ಲಾ ಪ್ರದೇಶಗಳು ಸಂರಕ್ಷಿತವಾಗಿರುತ್ತವೆ. ಹೀಗಾಗಿ ಇದಕ್ಕಷ್ಟೇ ಸೀಮಿತಗೊಳಿಸಿ ಡಾ.ಕಸ್ತೂರಿರಂಗನ್ ಸಮಿತಿ ಶಿಫಾರಸಿನಂತೆ ಕೇಂದ್ರ ಸರಕಾರ ಹೊರಡಿಸಿರುವ 6ನೇ ಅಧಿಸೂಚನೆಗೆ ಸರಕಾರದ ನಿಲುವು ವ್ಯಕ್ತಪಡಿಸಲು ಸಚಿವ ಸಂಪುಟಕ್ಕೆ ಶಿಫಾರಸು ಮಾಡಬಹುದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಡಾ.ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಕೇಂದ್ರ ಸರಕಾರ ನ್ಯಾಯಾಲಯಕ್ಕೆ ಬರೆದು ಕೊಟ್ಟು ಇಂದಿಗೆ 10 ವರ್ಷಗಳಾಗಿವೆ. ಹಾಗಾಗಿ ಅದನ್ನು ತಿರಸ್ಕರಿಸಬೇಕೆಂದು ರಾಜ್ಯ ಸರಕಾರ ಈಗ ಕೇಳುವುದು ಸಾಧ್ಯವಾಗಲಾರದು. ಕೇಂದ್ರ ಸರಕಾರದ ನಿರ್ಧಾರದಿಂದ ಆಗಬಹುದಾದ ಅನಾಹುತವನ್ನು ಕನಿಷ್ಟಗೊಳಿಸಲು ಇಂದು ಪ್ರಯತ್ನಿಸಬೇಕು.

ಅನಂತರ ಕಸ್ತೂರಿರಂಗನ್ ವರದಿಯಿಂದ ಬಾಧಿತರಾಗುವ ಪ್ರದೇಶಗಳ ಪ್ರತಿನಿಧಿಗಳ ಸಭೆಯನ್ನು ಸೆಪ್ಟಂಬರ್ 19ರಂದು ಸೇರಿಸಿ ಅವರ ಅಭಿಪ್ರಾಯಗಳನ್ನು ಅವರು ಪಡೆದಿದ್ದಾರೆ. ಈ ಸಭೆಯ ನಂತರ ಪತ್ರಿಕೆಗಳೊಂದಿಗೆ ಮಾತನಾಡಿದ ಖಂಡ್ರೆಯವರು "ಪಶ್ಚಿಮಘಟ್ಟ ರಕ್ಷಣೆ ಕುರಿತು ಕಸ್ತೂರಿರಂಗನ್ ಸಮಿತಿ ನೀಡಿರುವ ವರದಿ ಅಸಂವಿಧಾನಿಕವಾಗಿದ್ದು, ಮತ್ತೊಮ್ಮೆ ಸಮೀಕ್ಷೆ ನಡೆಸಲು ಕೂಡಲೇ ತಜ್ಞರ ಹೊಸ ಸಮಿತಿ ರಚಿಸುವಂತೆ ಕೋರಿ ಪ್ರಸ್ತಾವನೆ ಕಳುಹಿಸಲು ರಾಜ್ಯ ಸರಕಾರ ನಿರ್ಧರಿಸಿದೆ" ಎಂದಿದ್ದಾರೆಂದು ವರದಿಯಾಗಿದೆ. ಮುಂದುವರಿದು "ಸಭೆಯಲ್ಲಿ ಎಲ್ಲರ ಅಭಿಪ್ರಾಯ ಆಲಿಸಲಾಗಿದೆ. ಸಭೆಯ ಉಪಸಮಿತಿಯ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗುವುದು. ಈ ಹಿಂದೆ



ವಿಧಾನಸಭೆ ಅಧಿವೇಶನದಲ್ಲಿಯೂ ಕಸ್ತೂರಿರಂಗನ್ ವರದಿ ತಿರಸ್ಕರಿಸಲಾಗಿತ್ತು. ಈಗಲೂ ಈ ವರದಿ ಅಸಂವಿಧಾನಿಕವೇ. ರಾಜ್ಯದಲ್ಲಿ 16,114 ಚ.ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶವನ್ನು ಸಂರಕ್ಷಿಸಲಾಗಿದೆ. ಈ ಮಿತಿಗೆ ಒಳಪಟ್ಟು ವರದಿಯನ್ನು ಸಮ್ಮತಿಸಲು ನಮ್ಮ ಅಭ್ಯಂತರವಿಲ್ಲ. ಇನ್ನು ಹೆಚ್ಚಳ ಮಾಡಿದರೆ ಅರಣ್ಯದಂಚಿನ ಜನರ ಬದುಕೇ ದುಸ್ತರವಾಗುತ್ತದೆ. ಹೀಗಾಗಿ ಬಫರ್ ವಲಯವನ್ನು ಶೂನ್ಯಕ್ಕೆ ತರಬೇಕು" ಎಂದರು. "16,114 ಚ.ಕಿ.ಮೀ. ಪ್ರದೇಶಕ್ಕೆ ಅಂಗೀಕಾರ ನೀಡಿದರೂ ಈ ಪ್ರದೇಶದಲ್ಲಿರುವ 1576 ಗ್ರಾಮಸ್ಥರ ಜೀವನೋಪಾಯಕ್ಕೆ ಅನುಕೂಲ ಆಗಲಿದೆ. ಈ ನಿಟ್ಟಿನಲ್ಲಿ ಕೇಂದ್ರ ವಿಶೇಷ ಪ್ಯಾಕೇಜ್ ಘೋಷಿಸಬೇಕು" ಎಂದು ಅವರು ಒತ್ತಾಯಿಸಿದ್ದಾರೆಂದೂ ವರದಿಯಾಗಿದೆ.

ಗುರುವಾರ (26 ಸೆಪ್ಟಂಬರ್ 2024) ರಂದು ನಡೆದ ಸಚಿವ ಸಂಪುಟದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು-ಸಂಸದೀಯ ಖಾತೆ ಸಚಿವ ಹೆಚ್.ಕೆ.ಪಾಟೀಲ್ ಮೇಲುದ್ಧರಿಸಿದ ಅಂಶಗಳನ್ನೇ ಪುನರುಚ್ಚರಿಸಿ "ಉನ್ನತ ಮಟ್ಟದ ಕಾರ್ಯನಿರತ ತಂಡವು ಕೇವಲ ದೂರಸಂವೇದಿ ದತ್ತಾಂಶದ ಆಧಾರದ ಮೇಲೆ ಪಶ್ಚಿಮ ಘಟ್ಟಗಳ ಪ್ರದೇಶವನ್ನು ನಿಗದಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಕಸ್ತೂರಿರಂಗನ್ ವರದಿಯನ್ನು ತಿರಸ್ಕರಿಸಲಾಗಿದೆ" ಎಂದು ತಿಳಿಸಿದ್ದಾರೆ.

ರಾಜ್ಯ ಸರಕಾರ ತನ್ನ ಈ ಮೇಲಿನ ತೀರ್ಮಾನವನ್ನು ಕೇಂದ್ರ ಸರಕಾರಕ್ಕೆ ತಿಳಿಸಿತು ಎಂದು ಸಹ ವರದಿ ಬಂದಿದೆ.

ಡಾ.ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಕೇಂದ್ರ ಸರಕಾರ ನ್ಯಾಯಾಲಯಕ್ಕೆ ಬರೆದು ಕೊಟ್ಟು ಇಂದಿಗೆ 10 ವರ್ಷಗಳಾಗಿವೆ. ಹಾಗಾಗಿ ಅದನ್ನು ತಿರಸ್ಕರಿಸಬೇಕೆಂದು ರಾಜ್ಯ ಸರಕಾರ ಈಗ ಕೇಳುವುದು ಸಾಧ್ಯವಾಗಲಾರದು. ಕೇಂದ್ರ ಸರಕಾರದ ನಿರ್ಧಾರದಿಂದ ಆಗಬಹುದಾದ ಅನಾಹುತವನ್ನು ಕನಿಷ್ಟಗೊಳಿಸಲು ಇಂದು ಪ್ರಯತ್ನಿಸಬೇಕು. ಇಂದು ಇರುವ ಮಾರ್ಗ ಇದೊಂದೇ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಪೂರ್ಣ ತಿರಸ್ಕಾರಕ್ಕೆ ಬದಲಾಗಿ ತಾನು ರೂಪಿಸಿದ ಅರಣ್ಯ ಸಚಿವರ ಮಾತಿನಲ್ಲಿ ಹೊರಬಂದ ಶಿಫಾರಸನ್ನೂ ಮಂಡಿಸುವುದು ಸೂಕ್ತವಾಗಿತ್ತು. ರಾಜ್ಯ ಸರಕಾರದ ಈ ತೀರ್ಮಾನವನ್ನು ಅಂಗೀಕರಿಸಬೇಕೆಂದು ರಾಜ್ಯದಿಂದ ಆಯ್ಕೆಯಾಗಿರುವ ಲೋಕಸಭಾ, ರಾಜ್ಯಸಭಾ ಸದಸ್ಯರುಗಳು ಕೇಂದ್ರ ಸರಕಾರವನ್ನು ಒತ್ತಾಯಿಸುವಂತೆ ಜನ ಸಂಘಟನೆಗಳು ಒತ್ತಡ ಹಾಕಬೇಕಿದೆ.

(ಲೇಖಕರು ಕರ್ನಾಟಕ ಕಾಫಿ ರೈತರ ಸಂಘ, ಕೊಡಗು ಘಟಕದ ನಾಯಕರು)

ಮಹಾನ್ 'ಅಕ್ಟೋಬರ್ ಕ್ರಾಂತಿ'..........

ಪುಟ 16 ರಿಂದ

ಜನರಿಗೆ ಒಳಿತನ್ನು ಮಾಡುವುದಿಲ್ಲ. ಸಮಾಜವಾದ ಮಾತ್ರ ಇದಕ್ಕೆ ಪರ್ಯಾಯವಾಗಿದೆ. ಸಾಮ್ರಾಜ್ಯಶಾಹಿಯ ಮಾರ್ಕ್ಸ್‌ವಾದಿ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಅದನ್ನು ಕ್ರಾಂತಿಕಾರಿ ಕಾರ್ಯತಂತ್ರದೊಂದಿಗೆ ಹೆಣೆದುಕೊಳ್ಳುವಲ್ಲಿ ಲೆನಿನ್ ಅವರ ಮೂಲ ಮತ್ತು ಪ್ರಮುಖ ಕೊಡುಗೆಯನ್ನು ಮುಂದಿಡದೆ ನಾವು ರಷ್ಯಾದ ಕ್ರಾಂತಿ ಮತ್ತು ಅದರ ಪರಂಪರೆಯ ಬಗ್ಗೆ ಯೋಚಿಸಲು ಸಾಧ್ಯವಿಲ್ಲ.

ಲೆನಿನ್ ಹೀಗೆ ಹೇಳಿದ್ದಾರೆ; ನಾವು ಆರಂಭಿಸಿದ್ದೇವೆ. ಯಾವ ದಿನಾಂಕ ಮತ್ತು ಸಮಯದಲ್ಲಿ, ಯಾವುದೇ ದೇಶದ ದುಡಿಯುವ ವರ್ಗವು ಇದನ್ನು ಪೂರ್ಣಗೊಳಿಸುತ್ತದೋ ಅದು ಮುಖ್ಯವಲ್ಲ. ಆದರೆ ಪ್ರಮುಖವಾದದ್ದು ಏನೆಂದರೆ "ಮಂಜುಗಡ್ಡೆ ಚೂರು ಚೂರಾಗಿದೆ. ದಾರಿ ತೆರೆದಿದೆ. ಆ ದಾರಿ ತೋರಿಸಲಾಗಿದೆ."

ಈ ಅರಿವಿನ ಮೇರೆಗೆ ಮತ್ತು ಮಹಾ ಅಕ್ಟೋಬರ್ ಕ್ರಾಂತಿಯ ಶ್ರೀಮಂತ ಅನುಭವದೊಂದಿಗೆ ಕಾರ್ಮಿಕ ವರ್ಗವು ತನ್ನ ಗುರಿಗಳನ್ನು ಅಳವಡಿಸಿಕೊಂಡಿದೆ. ಉತ್ಪಾದನೆಯ ಎಲ್ಲ ಮೂಲಗಳನ್ನು ಸಮಾಜವಾದೀಕರಣಗೊಳಿಸುವುದರಿಂದ ಮಾತ್ರವೇ ಕಾರ್ಮಿಕ ವರ್ಗದ ಶೋಷಣೆ ಕೊನೆಗೊಳ್ಳಲಿದೆ. ಈ ಮೂಲಕ ಸಮಾಜವಾದಿ ರಾಜ್ಯವನ್ನು ಸ್ಥಾಪಿಸಲಾಗುವುದು. ಮಹಾನ್ ಅಕ್ಟೋಬರ್ ಕ್ರಾಂತಿಯ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಬಂಡವಾಳಶಾಹಿಯನ್ನು ಕಿತ್ತೊಗೆಯುವ ಮೂಲಕ ಮಾನವೀಯತೆಯನ್ನು ಸ್ಥಾಪಿಸುವತ್ತ ಕ್ರಾಂತಿಕಾರಿ ಹೆಜ್ಜೆ ಹಾಕೋಣ.

ಮಾನವನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಡವರು ಮತ್ತು ಶೋಷಿತರು ದೇಶವೊಂದರ ಪ್ರಭುತ್ವದ ಚುಕ್ಕಾಣಿ ಹಿಡಿದಿದ್ದರು. ದುಡಿಯುವ ವರ್ಗದ ನಾಯಕತ್ವದಲ್ಲಿ ಕಾರ್ಮಿಕರು, ರೈತರು ಮತ್ತು ಸೇನಾ ಯೋಧರ ಮೈತ್ರಿ ಅಧಿಕಾರವನ್ನು ಹಿಡಿದಿತ್ತು. ಮನುಕುಲದ ಇತಿಹಾಸದಲ್ಲೇ ಹಿಂದೆಂದೂ ಇಂತಹ ಘಟನೆ ನಡೆದಿರಲಿಲ್ಲ. ಇದು ಕೇವಲ ಕೆಲವು ಘಟನೆಗಳ ಫಲಿತಾಂಶವಲ್ಲ. ಇಲ್ಲವೇ ಕೆಲವು ಸಂದರ್ಭಗಳ ಕಾಕತಾಳೀಯವಲ್ಲ. ಇದು ಕೇವಲ ಒಬ್ಬ ಆಡಳಿತಗಾರನಿಂದ ಮತ್ತೊಬ್ಬ ಆಡಳಿತಗಾರನಿಗೆ ಅಧಿಕಾರ ಹಸ್ತಾಂತರದ ಘಟನೆಯಲ್ಲ. ಒಂದು ಶೋಷಕ ವರ್ಗದಿಂದ ಮತ್ತೊಂದು ಶೋಷಕ ವರ್ಗಕ್ಕೆ ಅಧಿಕಾರ ಬದಲಾದದ್ದೂ ಅಲ್ಲ. ಲೆನಿನ್ ಅವರ ಮಾತಿನಲ್ಲಿ ಹೇಳುವುದಾದರೆ, "ಜಗತ್ತಿನ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಇದು ಬರೆಯಲಿದೆ. ಹೊಸ ವರ್ಗದ ಯುಗ ಆರಂಭವಾಗಿದೆ. ಈ ವರ್ಗ ಪ್ರತಿಯೊಂದು ಬಂಡವಾಳಶಾಹಿ ದೇಶಗಳಲ್ಲಿ ಶೋಷಣೆಗೆ ಒಳಗಾಗಿದೆ. ಅದೇ ಸಂದರ್ಭದಲ್ಲಿ ಹೊಸ ಜೀವನದತ್ತ ಮುನ್ನಡೆ ಇಟ್ಟಿದೆ. ಮನುಕುಲವು ಬಂಡವಾಳಶಾಹಿ ಶೋಷಣೆಯಿಂದ ವಿಮೋಚನೆಯತ್ತ ಹೆಜ್ಜೆ ಹಾಕುತ್ತಿದೆ."

ಮಹಾ ಅಕ್ಟೋಬರ್ ಕ್ರಾಂತಿ ಚಿರಾಯುವಾಗಲಿ!

–ಸಿಚಿ

NEW No. MAG(3)/NPP/205/2021-2022
JANASHAKTHI KANNADA VARA PATRIKE October 21-27, 2024 Price: Rs. 10/- Date of Publication: 18 October 2024 RNI No. KARKAN /2006/17926 Posted on 22-10-2024
Posted at BG PSO, BG - 560026 **Posted at Periodical Rate -** Rs. 2

ಜಗತ್ತಿನ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ ಮಹಾನ್ 'ಅಕ್ಟೋಬರ್ ಕ್ರಾಂತಿ'

ಬೋಲ್ಷೆವಿಕ್‌ರು ರಷ್ಯಾದ ಆಡಳಿತವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದಾರೆ ಎಂದು ಕಾಮ್ರೇಡ್ ಲೆನಿನ್ 1917ರ ನವೆಂಬರ್ 7ರಂದು ಘೋಷಿಸಿದರು. (ಹಳೆಯ ಜ್ಯೂಲಿಯನ್ ಕ್ಯಾಲೆಂಡರ್ ಅನುಸಾರ ಈ ದಿನಾಂಕ ಅಕ್ಟೋಬರ್ 25, ಹೀಗಾಗಿ ಇದನ್ನು 'ಅಕ್ಟೋಬರ್ ಕ್ರಾಂತಿ' ಎಂದು ಕರೆಯಲಾಗುವುದು.) ಅಕ್ಟೋಬರ್ ಕ್ರಾಂತಿಯು ರಷ್ಯಾದಲ್ಲಿ ತ್ಸಾರಿಸ್ಟ್ ನಿರಂಕುಶಾಧಿಕಾರದ ವಿರುದ್ಧದ ಕ್ರಾಂತಿಯಾಗಿರಲಿಲ್ಲ. ಸಾಮ್ರಾಜ್ಯಶಾಹಿ-ವಿರೋಧಿ, ಬಂಡವಾಳಶಾಹಿ-ವಿರೋಧಿ ಮತ್ತು ಸಮಾಜವಾದಿ ಸ್ವಭಾವದ ಹೊಸ ರೀತಿಯ ಕ್ರಾಂತಿಗೆ ನಾಂದಿ ಹಾಡಿದ್ದರಿಂದ ಇದು ಸಾರ್ವತ್ರಿಕ ಮಹತ್ವವನ್ನು ಹೊಂದಿತ್ತು.

ಉತ್ತಮ, ಅತ್ಯಂತ ನ್ಯಾಯಯುತ ಸಮಾಜಕ್ಕಾಗಿ, ಮಾನವನಿಂದ ಮಾನವನ ಶೋಷಣೆಯ ಅಂತ್ಯಕ್ಕಾಗಿ ವಿಶ್ವದಾದ್ಯಂತ ಕಾರ್ಮಿಕರು ಮತ್ತು ರೈತರ ಕನಸುಗಳು ಮತ್ತು ಹಂಬಲಗಳನ್ನು ರಷ್ಯಾದ ಕ್ರಾಂತಿಯು ಸಾಕಾರಗೊಳಿಸಿತು ಮತ್ತು ಅದು ಆ ಕನಸನ್ನು ರಷ್ಯಾದಲ್ಲಿ ನನಸಾಗಿತು. ಜಗತ್ತು ದುಡಿಯುವ ವರ್ಗದ ನೇತೃತ್ವದ ಕ್ರಾಂತಿಯ ವಾಸ್ತವಿಕತೆಗೆ ಮೊದಲ ಬಾರಿಗೆ ಸಾಕ್ಷಿಯಾಯಿತು, ಬೋಲ್ಶೆವಿಕ್‌ಗಳು ಕಾರ್ಮಿಕ ವರ್ಗ ಮತ್ತು ರೈತರ ಆಳ್ವಿಕೆ ಎಂದು ಕರೆಯುವ ಮೊದಲ ರಾಜ್ಯ ಸ್ಥಾಪನೆಗೆ ಸಾಕ್ಷಿಯಾಯಿತು. ಇದು ರಾಜ್ಯ ಅಧಿಕಾರವನ್ನು ವಶಪಡಿಸಿಕೊಳ್ಳುವ ಲೆನಿನಿಸ್ಟ್ ಪರಿಕಲ್ಪನೆಯನ್ನು ತಿಳಿಸಿತು.

"ಜಗತ್ತಿನ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಇದು ಬರೆಯಲಿದೆ. ಹೊಸ ವರ್ಗದ ಯುಗ ಆರಂಭವಾಗಿದೆ. ಈ ವರ್ಗ ಪ್ರತಿಯೊಂದು ಬಂಡವಾಳಶಾಹಿ ದೇಶಗಳಲ್ಲಿ ಶೋಷಣೆಗೆ ಒಳಗಾಗಿದೆ. ಅದೇ ಸಂದರ್ಭದಲ್ಲಿ ಹೊಸ ಜೀವನದತ್ತ ಮುನ್ನಡೆ ಇಟ್ಟಿದೆ. ಮನುಕುಲವು ಬಂಡವಾಳಶಾಹಿ ಶೋಷಣೆಯಿಂದ ವಿಮೋಚನೆಯತ್ತ ಹೆಜ್ಜೆ ಹಾಕುತ್ತಿದೆ." ಇದು 'ಅಕ್ಟೋಬರ್ ಕ್ರಾಂತಿ'ಯ ಸಂದರ್ಭದಲ್ಲಿ ಲೆನಿನ್ ಆಡಿದ ಮಾತುಗಳು. ಇಂದು ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದಿದೆಯಾದರೂ, ಅಕ್ಟೋಬರ್ ಕ್ರಾಂತಿ ಹೊಸ ಚರಿತ್ರೆ ಸೃಷ್ಟಿಸಿದ ಘಟನೆಯಾಗಿದೆ. ಮಾನವನಿಂದ ಮಾನವನ ಶೋಷಣೆ ಮಾಡುವ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆಯಲು ಮನುಷ್ಯನಿಗೆ ಸಾಧ್ಯವಿದೆ ಎಂಬುದನ್ನು ತೋರಿಸಿತು. ಹಾಗೆಯೇ ಇದು ಮಾರ್ಕ್ಸ್‌ವಾದದ ಸಿಂಧುತ್ವವನ್ನು ಎತ್ತಿಹಿಡಿಯಿತು.



ಬೃಹತ್ ಆರ್ಥಿಕ ಶಕ್ತಿಯಾಗಿ ಬೆಳೆಯಿತು

ರಷ್ಯಾದಲ್ಲಿ ಕ್ರಾಂತಿ ನಡೆದ ಕೇವಲ 18 ಗಂಟೆಗಳೊಳಗೆ ಲೆನಿನ್ ಭೂ ಹಂಚಿಕೆಗೆ ಸಂಬಂಧಿಸಿದ ಎರಡನೇ ನಿರ್ಣಯವನ್ನು ಪ್ರಕಟಿಸಿದರು. ಇದು ಭೂಮಿಯನ್ನು ಬಡವರು ಮತ್ತು ಭೂ ರಹಿತ ಕೃಷಿಕರಿಗೆ ನೀಡುವುದಾಗಿತ್ತು. ಭೂಮಿ ಸಮಾಜದ ಆಸ್ತಿಯಾಗಿದ್ದು, ಖಾಸಗಿ ಮಾಲೀಕತ್ವದ್ದಲ್ಲ ಎಂಬುದಾಗಿ ನಿರ್ಣಯ ಘೋಷಿಸಿತು. ಈ ನಿರ್ಣಯ ಇಡೀ ಬಂಡವಾಳಶಾಹಿ ಜಗತ್ತಿನಲ್ಲಿ ನಡುಕ ಹುಟ್ಟಿಸಿತು.

ಈ ಕ್ರಾಂತಿ ಮನುಷ್ಯನಿಂದ ಮನುಷ್ಯನ ಶೋಷಣೆ ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ಮೆಟ್ಟಿ ನಿಲ್ಲಲು ಸಾಧ್ಯವಿದೆ ಎಂಬುದನ್ನು ತೋರಿಸಿತು.

ರಷ್ಯಾದಲ್ಲಿ ಎಲ್ಲ ರಂಗಗಳಲ್ಲಿಯೂ ಕಂಡ ವೇಗದ ಬೆಳವಣಿಗೆ ಮತ್ತು ನಿರೀಕ್ಷೆಗೂ ಮೀರಿದ ಸಾಧನೆಗಳು ಸಮಾಜವಾದಿ ವ್ಯವಸ್ಥೆಯ ಶ್ರೇಷ್ಠತೆಯನ್ನು ಸಾಧಿಸಿ ತೋರಿಸಿತು. ಒಂದು ಕಾಲದಲ್ಲಿ ಹಿಂದುಳಿದಿದ್ದ ರಷ್ಯಾ ಬೃಹತ್ ಆರ್ಥಿಕ ಶಕ್ತಿಯಾಗಿ ಬೆಳೆಯಿತು. ಅಕ್ಟೋಬರ್ ಕ್ರಾಂತಿಯ ನಂತರ ಜಾಗತಿಕ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಬಂತು. ಮನುಷ್ಯನ ಜೀವನದ ಎಲ್ಲ ಹಂತಗಳಲ್ಲೂ ಸಮಾಜವಾದ ಒಂದು ನಿರ್ಣಾಯಕ ಅಂಶವಾಯಿತು. ಕಾರ್ಮಿಕರಿಗೆ ನಿಗದಿತ ಕೆಲಸದ ಅವಧಿ, ರಜೆ, ಆರೋಗ್ಯ ಸೌಕರ್ಯ, ನಿವೃತ್ತಿ ವೇತನದಂತಹ ಸವಲತ್ತುಗಳನ್ನು ನೀಡುವ 'ಸಮಾಜ ಕಲ್ಯಾಣ ರಾಜ್ಯಗಳು/ವೆಲ್‌ಫೇರ್ ಸ್ಟೇಟ್ಸ್' ಎಂಬ ಪರಿಕಲ್ಪನೆ ಬಂಡವಾಳಶಾಹಿ ದೇಶಗಳಲ್ಲೂ ಮೌಲ್ಯ ಪಡೆಯಿತು.

ಜಗತ್ತಿನ ಕಾರ್ಮಿಕರ ಹೋರಾಟಕ್ಕೆ ಸ್ಫೂರ್ತಿ

ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟ (ಯುಎಸ್‌ಎಸ್‌ಆರ್) ವಹಿಸಿದ ಪಾತ್ರ, ಇದರ ಬೆನ್ನಲ್ಲೇ ಬೆಳೆದ ಪೂರ್ವ ಯೋರೋಪಿನ ಸಮಾಜವಾದಿ ದೇಶಗಳು ವಿಶ್ವದ ಬೆಳವಣಿಗೆಗಳ ಮೇಲೆ ತಮ್ಮದೇ ಆದ ಪ್ರಭಾವ ಬೀರಿದವು. ಎರಡನೇ ಜಾಗತಿಕ ಯುದ್ಧದಲ್ಲಿ ಫ್ಯಾಸಿಸಂ/ನಾಜಿಯಿಸಂ ವಿರುದ್ಧದ ಗೆಲವು, ಇದರಲ್ಲಿ ಸೋವಿಯತ್‌ನ ಕೆಂಪು ಸೇನೆ ವಹಿಸಿದ ನಿರ್ಣಾಯಕ ಪಾತ್ರ, ಇವುಗಳೆಲ್ಲವೂ ಸಾಮ್ರಾಜ್ಯಶಾಹಿ ದೇಶಗಳಿಂದ ವಸಾಹತುಶಾಹಿ ದೇಶಗಳು ಸ್ವಾತಂತ್ರ್ಯ ಗಳಿಸುವ ವೇಗವನ್ನು ಹೆಚ್ಚಿಸಿತು. ಇದಲ್ಲದೆ, ಐತಿಹಾಸಿಕ ಚೀನಾ ಕ್ರಾಂತಿ, ವಿಯಟ್ನಾಂನ ಜನರು ನಡೆಸಿದ ಹೋರಾಟ, ಕೊರಿಯಾ ಜನರ ಹೋರಾಟ ಮತ್ತು ಕ್ಯೂಬಾ ಕ್ರಾಂತಿಗಳು ಜಾಗತಿಕ ಬೆಳವಣಿಗೆ ಮೇಲೆ ತಮ್ಮದೇ ಆದ ಪ್ರಭಾವ ಬೀರಿದವು. ಸಮಾಜವಾದಿ ದೇಶಗಳ ಸಾಧನೆಗಳಾದ ಬಡತನ ಮತ್ತು ಅನಕ್ಷರತೆಗಳ ನಿರ್ಮೂಲನೆ, ನಿರುದ್ಯೋಗ ನಿವಾರಣೆ, ಶಿಕ್ಷಣ, ಆರೋಗ್ಯ, ಮನೆ, ಪಿಂಚಣಿ ಮತ್ತಿತರ ಕ್ಷೇತ್ರಗಳಲ್ಲಿ ಸಾಧಿಸಿದ ಅಪಾರ ಮುನ್ನಡೆ ಇವುಗಳು ಜಗತ್ತಿನಾದ್ಯಂತ ಕಾರ್ಮಿಕರ ಹೋರಾಟಕ್ಕೆ ಆತ್ಮವಿಶ್ವಾಸದ ಮೂಲವನ್ನು ಒದಗಿಸಿದವು. ಅವರಲ್ಲಿ ಸ್ಫೂರ್ತಿ ತುಂಬಿದವು.

ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ

ಮೊದಲ ಸಮಾಜವಾದಿ ರಾಜ್ಯದ ಪ್ರಚಂಡ ಸಾಧನೆಗಳು ಇಂದು ಏನನ್ನು ರಚಿಸಲು ಸಾಧ್ಯ ಮತ್ತು ಏನನ್ನು ರಚಿಸಲು ಅಸಾಧ್ಯ ಎಂಬುದನ್ನು ಅರ್ಥಮಾಡಿಕೊಳ್ಳಲು ನಮ್ಮನ್ನು ಆಹ್ವಾನಿಸುತ್ತದೆ. ಸೋವಿಯತ್ ಒಕ್ಕೂಟವು ಬಡತನ, ಹಿಂದುಳಿದಿರುವಿಕೆ ಮತ್ತು ಅನಕ್ಷರತೆಯನ್ನು ತೊಡೆದುಹಾಕಲು ಜನರು ಮತ್ತು ರಾಷ್ಟ್ರೀಯತೆಗಳ ನಡುವೆ, ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆಯನ್ನು ಸ್ಥಾಪಿಸುವಲ್ಲಿ ದಾಖಲೆಗಳನ್ನು ಸೃಷ್ಟಿಸಿದೆ. ಸಮಾಜವಾದಿ ಮಾರ್ಗದಿಂದ ಮಾತ್ರ ಮಹಿಳೆಯರ ಸರ್ವಾಂಗೀಣ ವಿಮೋಚನೆ ಸಾಧ್ಯ ಎಂದು ಜಗತ್ತಿಗೆ ಅತ್ಯಂತ ಅದ್ಭುತವಾದ ರೀತಿಯಲ್ಲಿ ತೋರಿಸಿದೆ. ವಿಶ್ವದ ಮೊದಲ ಸಮಾಜವಾದಿ ರಾಜ್ಯದಲ್ಲಿ ಪರಿಕಲ್ಪನೆಯನ್ನು ರೂಪಿಸಿದ ಮತ್ತು ಜಾರಿಗೆ ತಂದ ನೀತಿಗಳು ಮಹಿಳೆಯರು ಮತ್ತು ಮಕ್ಕಳನ್ನು ಶ್ರೇಷ್ಠ ಫಲಾನುಭವಿಗಳನ್ನಾಗಿ ಮಾಡಿತು. ಅದು ಏನಾಗಿತ್ತು ಮತ್ತು ಏನಾಗಬಹುದು ಎಂಬುದರ ಸ್ಫೂರ್ತಿಯಾಗಿದೆ. ಮತ್ತು ಅದಕ್ಕಾಗಿಯೇ ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಪರಿವರ್ತನೆಯ ಯುಗವನ್ನು ಸ್ಥಾಪಿಸಿದ ಯುಗವು ಇಂದು ಪ್ರಸ್ತುತವಾಗಿದೆ ಎಂದು ಹೇಳುತ್ತೇವೆ. ಬಂಡವಾಳಶಾಹಿಯು ಇತಿಹಾಸದ ಅಂತ್ಯವಲ್ಲ.

ಹೆಚ್ಚುತ್ತಿರುವ ಬಿಕ್ಕಟ್ಟು ಜಗತ್ತಿನಾದ್ಯಂತ ಬಲಪಂಥೀಯ ಪ್ಯಾಸಿಸ್ಟ್ ರಾಜಕೀಯ ವ್ಯವಸ್ಥೆ ಬೆಳೆಯಲು ಹದವಾದ ಭೂಮಿಕೆಯನ್ನು ಸೃಷ್ಟಿಸಿದೆ. ಜನರ ಕೋಪ ಮತ್ತು ಅಸಮಾಧಾನವನ್ನು ಬೇರೆಡೆಗೆ ತಿರುಗಿಸುವುದು ಬಂಡವಾಳಶಾಹಿಯ ಪ್ರಮುಖ ಅಸ್ತ್ರವಾಗಿದೆ. ಈ ಎಲ್ಲಾ ಬೆಳವಣಿಗೆಗಳು ನಮಗೆ ಸವಾಲು ಮತ್ತು ಅವಕಾಶಗಳನ್ನು ಕಲ್ಪಿಸಿದೆ. ಬಂಡವಾಳಶಾಹಿ ಯಾವೊತ್ತಿಗೂ ಜನರಿಗೆ ಒಳಿತನ್ನು ಮಾಡುವುದಿಲ್ಲ. ಸಮಾಜವಾದ ಮಾತ್ರ ಇದಕ್ಕೆ ಪರ್ಯಾಯವಾಗಿದೆ.

ಬಂಡವಾಳಶಾಹಿಯು ಇಂದಿಗೂ ಮಾರ್ಕ್ಸ್‌ನ ಬರಹಗಳಲ್ಲಿ ಸ್ಪಷ್ಟವಾಗಿ ವಿವರಿಸಿದ ದೈತ್ಯಾಕಾರದ ವ್ಯವಸ್ಥೆಯಾಗಿದೆ, ಆದರೆ ಅದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ತಂತ್ರಜ್ಞಾನದ ಶಕ್ತಿ, ವೈಜ್ಞಾನಿಕ ಆವಿಷ್ಕಾರಗಳ ಸೃಷ್ಟಿ ಮತ್ತು ಬಡತನ ಮತ್ತು ರೋಗವನ್ನು ತೊಡೆದುಹಾಕಲು ಸಾಕಷ್ಟು ಸಂಪನ್ಮೂಲಗಳಿದ್ದರೂ, ಲಾಭವನ್ನು ಹೆಚ್ಚಿಸುವ ಹಸಿವು 'ಬಂಡವಾಳ'ವನ್ನು ಬರೆದು ಒಂದೂವರೆ ಶತಮಾನಗಳ ನಂತರ, ಇನ್ನೂ ಬಂಡವಾಳಶಾಹಿಯ ತಿರುಳು, ಹೆಚ್ಚು ಅದರ ನವ-ಉದಾರವಾದಿ ಅವತಾರದಲ್ಲಿ. ಬಂಡವಾಳಶಾಹಿಗೆ ಉತ್ತರ, ಬಂಡವಾಳಶಾಹಿಗೆ ಪರ್ಯಾಯ ಸಮಾಜವಾದ ಮತ್ತು ಅದು ರಷ್ಯಾದ ಕ್ರಾಂತಿಯ ಪ್ರಸ್ತುತತೆಯಾಗಿದೆ ಮತ್ತು ಅದಕ್ಕಾಗಿಯೇ ಅದನ್ನು ನಿಂದಿಸಲು ಪ್ರಯತ್ನಿಸಲಾಗಿದೆ.

ಬಂಡವಾಳ ಕ್ರೋಢೀಕರಣ ಮತ್ತೊಂದು ಎತ್ತರಕ್ಕೆ

ಪ್ರಸಕ್ತ ಹಂತದ ಜಾಗತೀಕರಣದಿಂದಾಗಿ ಬಂಡವಾಳ ಕ್ರೋಢೀಕರಣ ಮತ್ತೊಂದು ಎತ್ತರಕ್ಕೆ ಬೆಳೆದಿದೆ. ಇದು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವಾಗಿ ಹೊರಹೊಮ್ಮಿದೆ. ಈ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಹೊಸ-ಉದಾರೀಕರಣ ನೀತಿಗಳೆಂದು ಹೊಸದಾಗಿ ವ್ಯಾಖ್ಯಾನ ಮಾಡಿದೆ. ಎಲ್ಲಾ ದೇಶಗಳು ಒಂದಲ್ಲಾ ಒಂದು ರೀತಿಯಲ್ಲಿ ಹಣಕಾಸು ಬಂಡವಾಳದ ಅಣತಿಯಂತೆ ನಡೆಯುತ್ತಿವೆ. ಹಣಕಾಸು ಬಂಡವಾಳ ರೂಪಿಸುವ ಹಣಕಾಸು ನೀತಿಗಳಿಗೆ ಅನುಗುಣವಾಗಿ ಅವರು ನೀತಿಗಳನ್ನು ರೂಪಿಸಬೇಕು. ಜಗತ್ತು ಈಗ ಜಾಗತಿಕ ಬಂಡವಾಳದ ಸುಳಿಯಲ್ಲಿ ಸಿಲುಕಿದೆ. ಜಾಗತಿಕ ಬಂಡವಾಳವು ದೇಶ-ರಾಜ್ಯಗಳ ಗುಣಲಕ್ಷಣಗಳನ್ನೇ ಬದಲಾಯಿಸಿದೆ. ಅವು ಜನರ ಹಿತಾಸಕ್ತಿಯನ್ನು ನೋಡುತ್ತಿಲ್ಲ, ಬದಲಿಗೆ ಹಣಕಾಸು ಬಂಡವಾಳದ ಆದಾಯ ಹೆಚ್ಚಿಸುವುದನ್ನು ನೋಡುತ್ತಿವೆ. ಕೊಳ್ಳೆ ಹೊಡೆಯುವ ಗುಣದ ಈ ಬಂಡವಾಳಶಾಹಿ ದುಡಿಯುವ ವರ್ಗದ ಮೇಲೆ ಅತೀವ ಕಷ್ಟಗಳನ್ನು ಹೇರಿ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸಿದೆ. ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಬಂಡವಾಳಶಾಹಿಯ ಈ ವಿದ್ಯಮಾನದಿಂದಾಗಿ ಆಗಿಂದಾಗ್ಗೆ ಹಣಕಾಸು ವ್ಯವಸ್ಥೆಯಲ್ಲಿ ಬಿಕ್ಕಟ್ಟು ತಲೆದೋರುತ್ತದೆ. ಬಂಡವಾಳಶಾಹಿ ಈಗ ದೀರ್ಘವಾಗಿ ಬೆಳೆದು ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿದೆ.

ಹೆಚ್ಚುತ್ತಿರುವ ಬಿಕ್ಕಟ್ಟು ಜಗತ್ತಿನಾದ್ಯಂತ ಬಲಪಂಥೀಯ ಪ್ಯಾಸಿಸ್ಟ್ ರಾಜಕೀಯ ವ್ಯವಸ್ಥೆ ಬೆಳೆಯಲು ಹದವಾದ ಭೂಮಿಕೆಯನ್ನು ಸೃಷ್ಟಿಸಿದೆ. ಜನರ ಕೋಪ ಮತ್ತು ಅಸಮಾಧಾನವನ್ನು ಬೇರೆಡೆಗೆ ತಿರುಗಿಸುವುದು ಬಂಡವಾಳಶಾಹಿಯ ಪ್ರಮುಖ ಅಸ್ತ್ರವಾಗಿದೆ. ಈ ಎಲ್ಲಾ ಬೆಳವಣಿಗೆಗಳು ನಮಗೆ ಸವಾಲು ಮತ್ತು ಅವಕಾಶಗಳನ್ನು ಕಲ್ಪಿಸಿದೆ. ಬಂಡವಾಳಶಾಹಿ ಯಾವೊತ್ತಿಗೂ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**